ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 14 ಬುಧವಾರ 2022

ಸಂಪುಟ: 43 | ಸಂಚಿಕೆ: 237 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಚಾಮರಾಜನಗರ ಜಿಲ್ಲೆಯ ಎಲ್ಲಾ ಕೆರೆಗಳಿಗೆ ನೀರು ತುಂಬಿಸಲು

1100 ಕೋಟಿಗೆ ಸದ್ಯವೇ ಸಂಪುಟ ಅನುಮೋದನೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ



ಚಾಮರಾಜನಗರ, ಡಿ.13– ಜಿಲ್ಲೆಯ ಎಲ್ಲಾ ಕೆರೆಗಳನ್ನು ಹಂತ–ಹಂತವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ವತಿಯಿಂದ ನಡೆದ ಚಾಮರಾಜನಗರ ಹಾಗೂ ಗುಂಡ್ಲುಪೇಟೆ ವಿಧಾನ ಸಭಾ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ, ಶಂಕುಸ್ಥಾಪನೆ ಹಾಗೂ ಫಲಾನುಭವಿಗಳಿಗೆ ವಿವಿಧ ಸವಲತ್ತು ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯಡಿಯೂರಪ್ಪ ಅವರ ಅವಧಿಯಲ್ಲಿ ನೀರಾವರಿ ಸಚಿವನಾಗಿದ್ದಾಗ ಜಿಲ್ಲೆಗೆ ಭೇಟಿ ನೀಡಿದ್ದೆ. ಈ ವೇಳೆ ಕೆರೆಗಳ ತುಂಬಿಸುವ ಯೋಜನೆಗೆ ಚಾಲನೆ ನೀಡಲಾಗಿತ್ತು. ಈಗಾಗಲೇ ಮೊದಲ ಹಂತದಲ್ಲಿ 697 ಕೋಟಿ ರೂ. ವೆಚ್ಚದಡಿ 63 ಕೆರೆಗಳನ್ನು ತುಂಬಿಸಲಾಗಿದೆ. ಎರಡನೇ ಹಂತದಲ್ಲಿ 57 ಕೋಟಿ ವೆಚ್ಚದಡಿ 121 ಕೆರೆಗಳನ್ನು ತುಂಬಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದರು.

ಪ್ರಸ್ತುತ ಜಿಲ್ಲೆಯ ಕೆರೆಗಳ ತುಂಬಿಸುವ ಯೋಜನೆ ಸಂಬಂಧ 1100 ಕೋಟಿ ರೂ. ವೆಚ್ಚದಡಿ ಡಿಪಿಆರ್‌ಎಸ್ ಸಿದ್ಧವಾಗಿದ್ದು, ಇದನ್ನು ಸಚಿವ ಸಂಪುಟದಲ್ಲಿ ಅನುಮೋದನೆ ಕೊಡಿಸುವ ಮೂಲಕ ಜಿಲ್ಲೆಯ ▶ 8ನೇ ಪುಟಕ್ಕೆ

ಚಾ.ನಗರಕ್ಕೆ ಹೋದರೆ ರಾಜಕೀಯ ಶಕ್ತಿ ವೃದ್ಧಿ

ಚಾಮರಾಜನಗರಕ್ಕೆ ಹೋಗುವುದರಿಂದ ನಮ್ಮ ರಾಜಕೀಯ ಶಕ್ತಿ ವೃದ್ಧಿಯಾಗುತ್ತದೆಯೇ ಹೊರತು ಅಧಿಕಾರ ಹೋಗಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಮಾನದಿಂದ ನುಡಿದರು.

ನಾನು ಚಾಮರಾಜನಗರಕ್ಕೆ ಈ ಹಿಂದೆಯೂ ಬಂದಿದ್ದೆ. ಇಲ್ಲಿಗೆ ಬರುವುದರಿಂದ ರಾಜಕೀಯ ಶಕ್ತಿ ವೃದ್ಧಿಯಾಗುತ್ತದೆ. ಅನವಶ್ಯಕವಾಗಿ ▶ 8ನೇ ಪುಟಕ್ಕೆ

ಮಹದೇಶ್ವರ ಬೆಟ್ಟದಲ್ಲಿ ಭಕ್ತಾದಿಗಳಿಗೆ ಸಮರ್ಪಕ ಮೂಲ ಸೌಕರ್ಯ ಕಲ್ಪಿಸಿ

ಚಾಮರಾಜನಗರ, ಡಿ.13– ಚಾಮರಾಜನಗರ ಜಿಲ್ಲೆ ಹನೂರು ತಾಲೂಕಿನ ಪ್ರಸಿದ್ಧ ಯಾತ್ರಾಸ್ಥಳ ಮಲೆಮಹದೇಶ್ವರ ಬೆಟ್ಟಕ್ಕೆ ಆಗಮಿಸುವ ಭಕ್ತಾದಿಗಳಿಗೆ ಸಮರ್ಪಕ ಮೂಲ ಸೌಕರ್ಯ ಕಲ್ಪಿಸುವುದು ಸೇರಿದಂತೆ ಕ್ಷೇತ್ರದ ಅಭಿವೃದ್ಧಿ ಸಂಬಂಧ ಅಗತ್ಯ ಸೂಚನೆಗಳನ್ನು ನೀಡಲಾಗಿದೆ ಎಂದು ಮುಖ್ಯಮಂತ್ರಿಗಳು ಹಾಗೂ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಲೆಮಹದೇಶ್ವರಬೆಟ್ಟಕ್ಕೆ ಮಂಗಳವಾರ ಭೇಟಿ ನೀಡಿ ಸ್ವಾಮಿಯ ದರ್ಶನ ಪಡೆದ ಬಳಿಕ ನಾಗಮಲೆ ಭವನದಲ್ಲಿ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.



ಮಹದೇಶ್ವರಬೆಟ್ಟಕ್ಕೆ ಪ್ರತಿನಿತ್ಯವೂ ಸಾವಿರಾರು ಭಕ್ತರು ಬರುತ್ತಾರೆ. ಜಾತ್ರೆಗಳ ಸಮಯದಲ್ಲಿ ಲಕ್ಷಾಂತರ ಭಕ್ತರು ಆಗಮಿಸಲಿದ್ದಾರೆ. ಎಲ್ಲಾ ಭಕ್ತರಿಗೆ ಮೂಲ ಸೌಕರ್ಯ ಕಲ್ಪಿಸಲು ಇಂದಿನ ಸಭೆಯಲ್ಲಿ ಸೂಚನೆ ನೀಡಲಾಗಿದೆ ಎಂದರು. ಭಕ್ತಾದಿಗಳ ವಾಸ್ತವ್ಯಕ್ಕಾಗಿ ಡಾರ್ಮಿಟರಿ ನಿರ್ಮಾಣ ಮಾಡಬೇಕು. ಒಳಚರಂಡಿ ಕಾಮಗಾರಿ ಆರಂಭವಾಗಿ ಬಹಳ ವರ್ಷಗಳಾಗಿವೆ. ಇದು ಅಗತ್ಯವಾಗಿ ಆಗಬೇಕಾದ ಕೆಲಸ. ಈ ಹಿನ್ನೆಲೆಯಲ್ಲಿ ▶ 6ನೇ ಪುಟಕ್ಕೆ




ನಾನು ಮೈಸೂರು ಸಂಸ್ಕೃತಿಯ ಪ್ರತಿನಿಧಿ; ಡಾ.ರಾಜ್ ಚಿತ್ರರಂಗದ ಗ್ರಂಥಾಲಯ ■ ಪುಟ–4

ದಕ್ಷಿಣ ಭಾರತದಲ್ಲಿ ಬಿಜೆಪಿ ಹಿಂದೂ ಅಜೆಂಡಾಕ್ಕೆ ಪ್ರಶಸ್ತ ನೆಲೆ

ರಾಮನಗರ ರಾಮದೇವರಬೆಟ್ಟ ಅಯೋಧ್ಯೆಯಾಗಿ ಪರಿವರ್ತನೆ

● ರಾಮದೇವರಬೆಟ್ಟದ ಅಭಿವೃದ್ಧಿಗೆ ಎಲ್ಲಾ ಆರ್ಥಿಕ ನೆರವು ನೀಡಲು ತೀರ್ಮಾನ ● ಕೆಂಪೇಗೌಡ ಪ್ರತಿಮೆ ಪ್ರತಿಷ್ಠಾಪನೆ ಉಸ್ತುವಾರಿಯಾಗಿದ್ದ ಸಚಿವ ಡಾ.ಅಶ್ವತ್ಥನಾರಾಯಣ ಹೆಗಲಿಗೆ ಈ ಮಹತ್ವ ಹೊಣೆಗಾರಿಕೆ: ಇಂದು ಅಯೋಧ್ಯಾ ಯಾತ್ರೆ ● ಇನ್ನು ಮೊಳಗಲಿದೆ 'ರಾಮದೇವರಬೆಟ್ಟ ಟು ಅಯೋಧ್ಯಾ' ಜಪ




ಬೆಂಗಳೂರು, ಡಿ.13(ಕೆಎಂಶಿ)– **ರಾಮನಗರದ ರಾಮದೇವರ ಬೆಟ್ಟವನ್ನು ದಕ್ಷಿಣ ಭಾರತದ ಅಯೋಧ್ಯೆಯಾಗಿ ಪರಿವರ್ತಿಸುವ ಮಹತ್ವದ ತೀರ್ಮಾನವನ್ನು ರಾಜ್ಯ ಸರ್ಕಾರ ಕೈಗೊಂಡಿದೆ.**

ಮುಂಬರುವ ವಿಧಾನಸಭೆ ಚುನಾವಣೆಯನ್ನು ಹಿಂದುತ್ವ ಅಜೆಂಡಾದ ಮೇಲೆ ನಡೆಸಲು ನಿರ್ಧರಿಸಿರುವ ಬಿಜೆಪಿ ಇದೀಗ ರಾಮದೇವರ ಬೆಟ್ಟವನ್ನೇ ರಾಜಕೀಯವಾಗಿ ಬಳಸಿಕೊಳ್ಳಲು ಮುಂದಾಗಿದೆ. ಸಂಘ ಪರಿವಾರದ ಸಲಹೆ ಮೇರೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಿರಿಯ ಸಚಿವರ ಸಭೆ ನಡೆಸಿ, ರಾಮದೇವರ ಬೆಟ್ಟವನ್ನು ಅಭಿವೃದ್ಧಿಪಡಿಸಲು ಅದಕ್ಕೆ ಅಗತ್ಯವಾದ ಆರ್ಥಿಕ ನೆರವು ನೀಡಲು ತೀರ್ಮಾನಿಸಿದ್ದಾರೆ. ಇದರ ಉಸ್ತುವಾರಿಯನ್ನು ಮಾಹಿತಿ ಮತ್ತು ತಂತ್ರಜ್ಞಾನ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ್‌ನಾರಾಯಣ್ ಅವರ ಹೆಗಲಿಗೆ ಹಾಕಿದ್ದಾರೆ. ಇವರು ರಾಮನಗರ ಜಿಲ್ಲಾ ಉಸ್ತುವಾರಿಯೂ ಆಗಿದ್ದಾರೆ.



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪ ನಿಗದಿತ ಅವಧಿಯಲ್ಲಿ ಕೆಂಪೇಗೌಡ ಪ್ರತಿಮೆ ಸ್ಥಾಪಿಸಿ, ರಾಷ್ಟ್ರಕ್ಕೆ ಸಮರ್ಪಣೆ ಮಾಡಿದ ಹೆಗ್ಗಳಿಕೆ ಅಶ್ವತ್ಥ್‌ನಾರಾಯಣ ಅವರದ್ದಾಗಿದೆ. ▶ 8ನೇ ಪುಟಕ್ಕೆ



ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ 5, 8ನೇ ತರಗತಿಗೆ ವಾರ್ಷಿಕ ಪರೀಕ್ಷೆ

ಬೆಂಗಳೂರು, ಡಿ.13(ಕೆಎಂಶಿ)– ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಐದು ಮತ್ತು ಎಂಟನೇ ತರಗತಿಗೆ ವಾರ್ಷಿಕ ಪರೀಕ್ಷೆ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಸಂಬಂಧ ಸಾರ್ವಜನಿಕ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದ್ದು, ಈ ಸುತ್ತೋಲೆಗೆ ಸರ್ಕಾರದ ಅನುಮೋದನೆಯು ದೊರೆತಿದೆ. ಪ್ರಸಕ್ತ ಸಾಲಿನಲ್ಲಿನ ಮಕ್ಕಳ ಕಲಿಕೆ ಕೊರತೆ ನೀಗಿಸಲು ಹಾಗೂ ಚೇತರಿಕೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಒಂದರಿಂದ ಒಂಭತ್ತನೇ ತರಗತಿಯವರೆಗೆ ಶಾಲಾ ಹಂತದಲ್ಲಿ ಸಿಸಿಇ ಅಡಿ ಮೌಲ್ಯಾಂಕಣ ವಿಶ್ಲೇಷಣೆ ಮಾಡಲಾಗುತ್ತಿತ್ತು. ವಾರ್ಷಿಕ ಪರೀಕ್ಷೆಗಳನ್ನು ನಿರ್ವಹಿಸುತ್ತಿರಲಿಲ್ಲ. ಇದರಿಂದ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳ ಒಟ್ಟಾರೆ ಸಾಧನೆ ಯಾವ ರೀತಿ ಇದೆ ಎಂಬುದನ್ನು ತಿಳಿಯಲಾಗುತ್ತಿರಲಿಲ್ಲ. ಮಕ್ಕಳ ಕಲಿಕೆಯ ಮಟ್ಟವೇನು ಹಾಗೂ ಅವರಲ್ಲಿನ ಕೊರತೆ ಏನು ಎಂಬುದು ಮನದಟ್ಟಾಗುತ್ತಿರಲಿಲ್ಲ. ವಿದ್ಯಾರ್ಥಿಗಳು ಯಾವ ವಿಷಯದಲ್ಲಿ ಹಿನ್ನಡೆ ಉಂಟಾಗಿದೆ, ಅವುಗಳನ್ನು ನಿವಾರಿಸಲು ಏನು ಕ್ರಮ ಕೈಗೊಳ್ಳಬೇಕೆಂಬ ಮಾಹಿತಿಯು ದೊರೆಯುತ್ತಿರಲಿಲ್ಲ.

ವಿಧಾನಸಭೆ ಚುನಾವಣೆ ಹಿನ್ನೆಲೆ ಕಾನೂನು–ಸುವ್ಯವಸ್ಥೆಯತ್ತ ನಿಗಾ

ಮುಂಜಾನೆಯೇ ಮೈಸೂರಲ್ಲಿ ರೌಡಿಶೀಟರ್ಸ್ ಮನೆಗಳ ಮೇಲೆ ಪೊಲೀಸರ ದಾಳಿ

● ಕೆಲವರ ಮನೆಯಲ್ಲಿದ್ದ ಮಾರಕಾಸ್ತ್ರಗಳ ಜಪ್ತಿ ● ಮೈಸೂರು ನಗರದಲ್ಲಿದ್ದಾರೆ 900 ರೌಡಿಶೀಟರ್‌ಗಳು: ಅದರಲ್ಲಿ 37 ಮಂದಿ ಇನ್ನೂ ಸಕ್ರಿಯ ● ಹೆಬ್ಬಾಳು ಠಾಣೆಯಲ್ಲಿ ರೌಡಿಶೀಟರ್ಸ್‌ಗಳ ಪರೇಡ್; ಪೊಲೀಸ್ ಆಯುಕ್ತರ ಖಡಕ್ ಎಚ್ಚರಿಕೆ

ಮೈಸೂರು, ಡಿ.13(ಆರ್‌ಕೆ)–ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರು ನಗರ ಪೊಲೀಸರು ರೌಡಿಶೀಟರ್‌ಗಳ ಮನೆಗಳ ಮೇಲೆ ದಾಳಿ ನಡೆಸಿದರು. ಅದೂ ಇಂದು ಮುಂಜಾನೆಯಿಂದಲೇ.

ಪೊಲೀಸ್ ಆಯುಕ್ತ ಬಿ.ರಮೇಶ್ ನಿರ್ದೇಶನದಂತೆ ಇಂದು ಮುಂಜಾನೆ 3 ಗಂಟೆಗೆಲ್ಲಾ ಮೈಸೂರಿನ ಎಲ್ಲಾ 18 ಪೊಲೀಸ್ ಠಾಣೆಗಳ ವ್ಯಾಪ್ತಿಯ ರೌಡಿಶೀಟರ್‌ಗಳ ಮನೆಗಳ ಬಾಗಿಲು ತಟ್ಟಿದರು. ತಲಾಶೆ ವೇಳೆ ಚಾಕು, ಡ್ರ್ಯಾಗರ್ ಇತ್ಯಾದಿ ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ದೇವರಾಜ ಉಪವಿಭಾಗದ ಎಸಿಪಿ ಎನ್.ಎಂ.ಶಶಿಧರ್, ಕೆ.ಆರ್. ಉಪ ವಿಭಾಗದ ಎಂ.ಎಸ್.ಗಂಗಾಧರಸ್ವಾಮಿ, ಎನ್.ಆರ್. ಉಪ ವಿಭಾಗದ ಎಂ.ಶಿವಶಂಕರ, ಸಿಸಿಬಿ ಎಸಿಪಿ ಕೆ.ಸಿ.ಅಶ್ವಥನಾರಾಯಣ ಅವರ ಮೇಲ್ವಿಚಾರಣೆಯಲ್ಲಿ ಆಯಾ ಠಾಣಾ ವ್ಯಾಪ್ತಿಯ ರೌಡಿಶೀಟರ್‌ಗಳ ಮನೆಗಳಿಗೆ ಇನ್ಸ್‌ಪೆಕ್ಟರ್ ಹಾಗೂ ಅಪರಾಧ ವಿಭಾಗದ ಸಿಬ್ಬಂದಿ ಕಾರ್ಯಾಚರಣೆಗಿಳಿದಿದ್ದರು. ಮೈಸೂರು ನಗರದಲ್ಲಿರುವ ರೌಡಿಶೀಟರ್‌ಗಳ ಪೈಕಿ ಇನ್ನೂ ▶ 6ನೇ ಪುಟಕ್ಕೆ





ರೌಡಿ ಶೀಟರ್‌ಗಳ ಮನೆಗಳಲ್ಲಿ ವಶಪಡಿಸಿಕೊಂಡ ಮಾರಕಾಸ್ತ್ರಗಳನ್ನು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ವೀಕ್ಷಿಸಿದರು. ಡಿಸಿಪಿ ಪ್ರದೀಪ್ ಗುಂಟಿ, ಎಸಿಪಿಗಳಾದ ಎಂ. ಶಿವಶಂಕರ, ಕೆ.ಸಿ. ಅಶ್ವಥನಾರಾಯಣ ಹಾಗೂ ಇತರರನ್ನು ಕಾಣಬಹುದು (ಎಡಚಿತ್ರ). ನಗರ ಪೊಲೀಸ್ ಆಯುಕ್ತರು ರೌಡಿ ಶೀಟರ್‌ಗಳಿಗೆ ಖಡಕ್ ವಾರ್ನಿಂಗ್ ನೀಡುತ್ತಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು.

ಹಳೇ ವರಸೆ ತೋರಿಸಿದರೆ ಗೂಂಡಾ ಕಾಯ್ದೆ, ಗಡೀಪಾರು!

ಮೈಸೂರು, ಡಿ.13(ಆರ್‌ಕೆ)–ತಮ್ಮ ಹಳೇ ವರಸೆ ತೋರಿಸಿದರೆ ಕೋಕಾ, ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿ ಗಡೀಪಾರು ಮಾಡಲಾಗುವುದು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ರೌಡಿ ಶೀಟರ್‌ಗಳಿಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ. ಮೈಸೂರಿನ ನೂತನ ಹೆಬ್ಬಾಳು ಪೊಲೀಸ್ ಠಾಣೆ ಕಟ್ಟಡದ ಆವರಣದಲ್ಲಿ ಇಂದು ರೌಡಿ ಪರೇಡ್ ನಡೆಸಿದ ಅವರು, ಠಾಣೆಗಳಲ್ಲಿ ರೌಡಿಶೀಟರ್ ಆಗಿಯೂ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವವರು ಮುಂದೆ ತಮ್ಮ ಹಳೇ ವರಸೆ ಮುಂದುವರೆಸಿದಲ್ಲಿ ಘೋರ ಪ್ರಕರಣಗಳನ್ನು ದಾಖಲಿಸುವ ಜೊತೆಗೆ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಗಡೀಪಾರು ಮಾಡುವುದಾಗಿಯೂ ಎಚ್ಚರಿಕೆ ನೀಡಿದರು. ಮಚ್ಚು, ಲಾಂಗು, ಚಾಕು, ಡ್ರ್ಯಾಗರ್‌ಗಳಂತಹ ಮಾರಕಾಸ್ತ್ರ ಇಟ್ಟುಕೊಂಡು ಓಡಾಡುವುದು, ಬೇರೆ ಜಿಲ್ಲೆ, ನಗರಗಳ ಸಮಾಜಘಾತುಕ ವ್ಯಕ್ತಿಗಳೊಂದಿಗೆ ಸಂಪರ್ಕ, ನಿವೇಶನ–ಭೂಮಿ ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸುವುದೂ ಸೇರಿದಂತೆ ಇನ್ನಿತರ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಪಾಲ್ಗೊಂಡಿರುವುದು ತಿಳಿದುಬಂದಲ್ಲಿ ಅದರ ಪರಿಣಾಮವನ್ನು ನೀವೇ ಅನುಭವಿಸಬೇಕಾಗುತ್ತದೆ ಎಂದ ಆಯುಕ್ತರು, ಗೌರವಯುತ ಜೀವನ ನಡೆಸುವಂತೆಯೂ ರೌಡಿ ಶೀಟರ್‌ಗಳಿಗೆ ತಾಕೀತು ಮಾಡಿದ್ದಾರೆ.



ಡಿಸೆಂಬರ್ 18ರಿಂದ ಪ್ರಾರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ಅರಣ್ಯ ಭೂಮಿ, ಗೋಮಾಳ ಭೂಮಿಯಲ್ಲಿ ಹತ್ತಾರು ದಶಕದಿಂದ ಉಳುಮೆ ಮಾಡುತ್ತಿರುವ ರೈತರಿಗೆ ಭೂಮಿಯ ಹಕ್ಕುಪತ್ರ ನೀಡುವ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವಂತೆ ಶಾಸಕ ಜಿ.ಟಿ.ದೇವೇಗೌಡರಿಗೆ ಎಐಕೆಕೆಎಂಎಸ್ ವತಿಯಿಂದ ಮನವಿ ಪತ್ರ ಸಲ್ಲಿಸಲಾಯಿತು. ಈ ವೇಳೆ ಎಐಕೆಕೆಎಂಎಸ್‌ನ ಜಿಲ್ಲಾ ಸಂಘಟನಾಕಾರ ಬಸವರಾಜು, ರೈತ ಮುಖಂಡರಾದ ಹಾರೋಹಳ್ಳಿ ಬಸವೇಗೌಡ, ಚಂದ್ರು, ಗುಮಚನಹಳ್ಳಿ ಹರೀಶ್, ಸೋಮಶೇಖರ್, ಮಾವಿನಹಳ್ಳಿ ಕಾಳಸ್ವಾಮಿ, ನಂಜುಂಡಪ್ಪ, ಕೆಲ್ಲಹಳ್ಳಿ ರಾಮಣ್ಣ ಇದ್ದರು.

ಡಿ.17, ಅಯ್ಯಪ್ಪಸ್ವಾಮಿಯ 21ನೇ ವರ್ಷದ ಪೂಜಾ ಮಹೋತ್ಸವ



ಮೈಸೂರು,ಡಿ.13–ಮೈಸೂರು ಮಂಚೇಗೌಡನಕೊಪ್ಪಲು ಶ್ರೀರಾಮಮಂದಿರದಲ್ಲಿ ಅಯ್ಯಪ್ಪಸ್ವಾಮಿಯ 21ನೇ ವರ್ಷದ ಪೂಜಾ ಮಹೋತ್ಸವವನ್ನು ಡಿ.17 (ಶನಿವಾರ) ಸಂಜೆ 4 ಗಂಟೆಗೆ ಏರ್ಪಡಿಸಲಾಗಿದೆ. ಈ ವೇಳೆ ಶ್ರೀ ಅಯ್ಯಪ್ಪಸ್ವಾಮಿಗೆ ಪಂಚಾ ಮೃತ ಅಭಿಷೇಕ, ನಂತರ ಕಲಾ ತಂಡಗಳು ಹಾಗೂ ವಾದ್ಯಗಳೊಂದಿಗೆ ಅಯ್ಯಪ್ಪಸ್ವಾಮಿ ವಿಗ್ರಹ ಮೆರವಣಿಗೆ ಡಿ.18ರ ಭಾನುವಾರ ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ, ಸಂಜೆ 7 ಗಂಟೆಗೆ ಎಲ್‌ಇಡಿ ಪರದೆಯ ಮೇಲೆ ಶ್ರೀ ಅಯ್ಯಪ್ಪ ಸ್ವಾಮಿಯ ಚಲನಚಿತ್ರ ಪ್ರದರ್ಶನ ಹಾಗೂ ಡಿ.21ರಂದು ಬುಧವಾರ ಇರುಮುಡಿ ಏರ್ಪಡಿಸಲಾಗಿದೆ.

ಜೆಡಿಎಸ್‌ಗೆ ನೇಮಕ



ಮೈಸೂರು, ಡಿ.13– ಜಾತ್ಯತೀತ ಜನತಾದಳ ಮೈಸೂರು ನಗರ ಕಾರ್ಯದರ್ಶಿಯನ್ನಾಗಿ ಜೆ.ಮೋಹನ ಅವರನ್ನು ನಗರಾಧ್ಯಕ್ಷ ಕೆ.ಟಿ. ಚೆಲುವೇಗೌಡ ನೇಮಕ ಮಾಡಿದ್ದಾರೆಂದು ಪ್ರಕಟಣೆ ತಿಳಿಸಿದೆ.

ಅನಧಿಕೃತ ಬಾರ್ ವಿರುದ್ಧ ದೂರು ನೀಡಿದರೂ ಕ್ರಮವಿಲ್ಲ; ಆರೋಪ

ಮೈಸೂರು,ಡಿ.13(ಪಿಎಂ)–ಹೆಗ್ಗಡದೇವನಕೋಟೆ ತಾಲೂಕು ಹಂಪಾಪುರ ಹೋಬಳಿ ಹೊಮ್ಮರಗಳ್ಳಿಯಲ್ಲಿ ಗ್ರಾಮದ ಮೃತ ಪುಟ್ಟಸ್ವಾಮಿಯವರ ಸ್ವತ್ತಿನಲ್ಲಿ ಕಾನೂನು ಬಾಹಿರವಾಗಿ ಬಾರ್ ಅಂಡ್ ರೆಸ್ಟೋರೆಂಟ್ ಅನ್ನು ಅನೇಕ ವರ್ಷಗಳಿಂದ ನಡೆಸಲಾಗುತ್ತಿದ್ದು, ಈ ಬಗ್ಗೆ ದಾಖಲೆಸಹಿತ ದೂರು ನೀಡಿದ್ದರೂ ಸದರಿ ಬಾರ್‌ನ ಲೈಸೆನ್ಸ್ ನವೀಕರಣ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಆರೋಪಿಸಿದೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಪುಟ್ಟಸ್ವಾಮಿಯವರ ಸ್ವತ್ತಾದ (ಸರ್ವೇ ನಂ. 257/ಎ, 257/ಬಿ) ಹಿಡುವಳಿ ಜಮೀನಿನಲ್ಲಿ ಅನ್ಯಕ್ರಾಂತ ಮಾಡಿಸದೇ ಕಟ್ಟಡ ನಿರ್ಮಿಸಿ ಬಾರ್ ನಡೆಸಲಾಗುತ್ತಿದೆ. ಈಗಲೂ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಮೃತ ಪುಟ್ಟಸ್ವಾಮಿಯವರ ಹೆಸರಿನಲ್ಲೇ ಖಾತೆ ಮುಂದುವರೆದಿದೆ. ಖಾತೆ ಬದಲಾವಣೆಯಾಗಿಲ್ಲ ಎಂದರು.

ಈ ಅಕ್ರಮ ವಹಿವಾಟು ಉಳಿಸಲು ಹುನ್ನಾರ ನಡೆಸಲಾಗುತ್ತಿದೆ. ಪುಟ್ಟಸ್ವಾಮಿಯವರ 10 ಮಕ್ಕಳ ನಡುವೆ ಸದರಿ ಭೂಮಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ವ್ಯಾಜ್ಯವಿದೆ. ಸದರಿ ಅಕ್ರಮ ಬಾರ್ ವಿರುದ್ಧ ಕ್ರಮ ಕೈಗೊಳ್ಳಲು ಗ್ರಾಮಸ್ಥರಾದ ಸುಬ್ಬೇಗೌಡ ಮತ್ತು ಸತ್ಯನಾರಾಯಣ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಇಂತಹ ಪ್ರಕರಣಗಳು ಮೈಸೂರು ಜಿಲ್ಲೆಯಲ್ಲಿ ಸಾಕಷ್ಟು ಇದ್ದು, ಇದೊಂದು ತನಿಖೆಯಾದರೆ ಉಳಿದವು ಬೆಳಕಿಗೆ ಬರಲಿವೆ ಎಂದು ಹೇಳಿದರು. ಗ್ರಾಮಸ್ಥ ಸತ್ಯನಾರಾಯಣ, ದಲಿತ ಮುಖಂಡ ಜಿ.ಎಂ.ಅಂದಾನಿ, ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಯೋಗೇಶ್, ಮಡಿವಾಳರ ಸಂಘದ ಅಧ್ಯಕ್ಷ ಸತ್ಯ ಮತ್ತಿತರರು ಗೋಷ್ಠಿಯಲ್ಲಿದ್ದರು.

ನಿಧನ

ಹೆಚ್.ಎಂ.ಜವರೇಗೌಡ



ಮೈಸೂರು, ಡಿ.13– ಮೈಸೂರು ತಾಲೂಕಿನ ಹುಯಿಲಾಳು ಗ್ರಾಮದ ನಿವೃತ್ತ ಶಿಕ್ಷಕ ಹೆಚ್.ಎಂ. ಜವರೇಗೌಡ (83) ಮಂಗಳವಾರ ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಹುಯಿಲಾಳುವಿನಲ್ಲಿ ಸಂಜೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೋಟೇರಾ ನರೇನ್ ಕುಶಾಲಪ್ಪ



ಮೈಸೂರಿನ ಎನ್.ಆರ್. ಮೊಹಲ್ಲಾ, ತಿಬ್ಬಾದೇವಿ ಥಿಯೇಟರ್ ಸಮೀಪ, ನಂ. 179, 10ನೇ ಕ್ರಾಸ್, ಶಿವಾಜಿ ಮುಖ್ಯ ರಸ್ತೆ ನಿವಾಸಿ ಹಾಗೂ ನಿವೃತ್ತ ಕಸ್ಟಮ್ ಅಧಿಕಾರಿ ಕೋಟೇರಾ ನರೇನ್ ಕುಶಾಲಪ್ಪ (71) ಸೋಮವಾರ ನಿಧನರಾದರು.


ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲ್‌ಹಾಜ್ ಮಿರ್ಜಾ ಕಲೀಮುಲ್ಲಾ ಬೇಗ್ ರಿಜ್ವಿ

ಮೈಸೂರಿನ ಶಾಂತಿನಗರದಲ್ಲಿರುವ ಮದ್ರಸಾ–ಇ–ರಾಜಾ–ಇ–ಮುಸ್ತಾಫಾ ಸಂಸ್ಥೆ ಕಾರ್ಯದರ್ಶಿ ಹಾಗೂ ಸಾತಗಳ್ಳಿ ಬಡಾವಣೆ, ರಾಜಕುಮಾರ್ ರಸ್ತೆ ನಿವಾಸಿ ಅಲ್ ಹಾಜ್ ಮಿರ್ಜಾ ಕಲೀಮುಲ್ಲಾ ಬೇಗ್ ರಿಜ್ವಿ (65) ಸೋಮವಾರ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ನಮಾಜಾ–ಇ–ಜನಾಜಾ ನಡೆದ ಬಳಿಕ ಮಂಗಳವಾರ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.


ಸೋಮು



ಮೈಸೂರಿನ ಕೈಲಾಸಪುರಂ ನಿವಾಸಿ ಲೇಟ್ ಮರಿಸಿದ್ದಯ್ಯನವರ ಪುತ್ರ ಸೋಮು (48) ಸೋಮವಾರ ನಿಧನರಾದರು. ಮೃತರು ವೃತ್ತಿಯಲ್ಲಿ ಗಾರೆ ಕೆಲಸದವರಾಗಿದ್ದು, ಪತ್ನಿ ಶ್ರೀಮತಿ ಮಂಜುಳ, ಮಕ್ಕಳಾದ ಶ್ವೇತಾ, ಸಂಗೀತ, ಅಂಬಿಕಾ, ಮಹಾದೇವ, ನಾಗರಾಜು, ಬಾಲರಾಜು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.


ಅಂತ್ಯಕ್ರಿಯೆ ಸೋಮವಾರ ಸಂಜೆ ಬನ್ನಿಮಂಟಪದ ಜೋಡಿ ತೆಂಗಿನಮರದ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಂದ್ರು




ಹುಣಸೂರಿನ ವಿ.ಪಿ.ಬೋರೆ ನಿವಾಸಿ ಹಾಗೂ ವೃತ್ತಿಯಲ್ಲಿ ಟೈಲರ್ ಆದ ಚಂದ್ರು (53) ಮಂಗಳವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹುಣಸೂರಿನ ರುದ್ರಭೂಮಿಯಲ್ಲಿ ಮಂಗಳವಾರ ನೆರವೇರಿತು.

ಸಣ್ಣಯ್ಯ



ಮೈಸೂರಿನ ತೊಣಚಿಕೊಪ್ಪಲು ನಿವಾಸಿ ಸಣ್ಣಯ್ಯ(58) ಮಂಗಳವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಮಕ್ಕಳು, ಅಣ್ಣ–ತಮ್ಮಂದಿರು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಡಿ.14) ಬೆಳಗ್ಗೆ 11.30ಕ್ಕೆ ಜನತಾನಗರದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೃಷ್ಣೇಗೌಡ



ಹೊನ್ನೆನಹಳ್ಳಿ ಗ್ರಾಮದ ನಿವಾಸಿ ಕೃಷ್ಣೇಗೌಡ(ಎಲೆಕ್ಟ್ರೀಕಲ್ ಕಂಟ್ರಾಕ್ಟರ್) ಮಂಗಳವಾರ ನಿಧನರಾದರು. ಮೃತರು ಪತ್ನಿ ಕುಮಾರಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ (ಡಿ.14) ಮಧ್ಯಾಹ್ನ 12.30ಕ್ಕೆ ಹೊನ್ನೆನಹಳ್ಳಿಯಲ್ಲಿ ನೆರವೇರಲಿದೆ.

ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ

ಕೇಂದ್ರ ಗೃಹ ಸಚಿವ ಅಮಿತ್ ಷಾ ಕರೆದಿರುವ ಸಭೆಗೆ ಹಾಜರಾಗಿ ರಾಜ್ಯದ ನಿಲುವು ಸ್ಪಷ್ಟನೆ

● ಅಗತ್ಯ ದಾಖಲೆಗಳ ಸಲ್ಲಿಕೆ: ಮೈಸೂರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಹಿತಿ ● ಕಾಂಗ್ರೆಸ್‌ನಿಂದ ಚುನಾವಣಾ ವೇಳೆಯಲ್ಲಿ ಜನರ ದಾರಿ ತಪ್ಪಿಸುವ ಹುನ್ನಾರ

ಮೈಸೂರು,ಡಿ.13(ಎಂಟಿವೈ)–ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ದೆಹಲಿಯಲ್ಲಿ ಗೃಹ ಸಚಿವ ಅಮಿತ್ ಷಾ ಅವರು ಉಭಯ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದಿದ್ದು, ಅಲ್ಲಿ ರಾಜ್ಯದ ನಿಲುವು ಮಂಡಿಸುವುದರೊಂದಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸುತ್ತೇನೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಚಾಮರಾಜನಗರಕ್ಕೆ ತೆರಳಲು ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಮಂಗಳವಾರ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಗಡಿ ವಿವಾದವನ್ನು ಮುಂದಿಟ್ಟುಕೊಂಡು ಮರಾಠಿಗರು ವಿವಾದ ಸೃಷ್ಟಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವಿವಾದಕ್ಕೆ ಕಡಿವಾಣ ಹಾಕುವುದಕ್ಕಾಗಿ ಕೇಂದ್ರದ ಗೃಹ ಸಚಿವರು ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದಿದ್ದಾರೆ. ಈ ಸಭೆಯಲ್ಲಿ ನಮ್ಮ ಹೋರಾಟ, ನಿಲುವನ್ನು ಮಂಡಿಸುತ್ತೇವೆ. ಸುಪ್ರೀಂಕೋರ್ಟ್ ನೀಡಿರುವ ತೀರ್ಪು, ಸಂವಿಧಾನದಲ್ಲಿರುವ ಅವಕಾಶಗಳು, ಕಾಯ್ದೆಗಳು, ವಿಚಾರಣೆ ಹಂತದಲ್ಲಿರುವ ಪ್ರಕರಣಗಳ ಕುರಿತು ಮಾಹಿತಿ ನೀಡಿ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡುತ್ತೇನೆ. 2004ರಲ್ಲಿ ಗಡಿ ಕುರಿತಂತೆ ನ್ಯಾಯಾಲಯದ ಆದೇಶವನ್ನು ಗೃಹ ಸಚಿವರ ಗಮನಕ್ಕೆ ತರುವುದಾಗಿ ತಿಳಿಸಿದರು.

ದೆಹಲಿ ಪ್ರವಾಸ ಪ್ರಮುಖವಾಗಿ ಗಡಿ ವಿವಾದಕ್ಕೆ ಸಂಬಂಧಪಟ್ಟ ಅಧಿಕೃತ ಕಾರ್ಯಕ್ರಮವಾಗಿದೆ. ಆದರೆ, ನಾನು ಸಚಿವ ಸಂಪುಟ ವಿಸ್ತರಣೆ, ಪಕ್ಷ ಸಂಘಟನೆ, ಮುಂಬರುವ ಚುನಾವಣೆ ಸೇರಿದಂತೆ ಇನ್ನಿತರ ವಿಷಯಗಳ ಬಗ್ಗೆಯೂ ಮಾಹಿತಿಯೊಂದಿಗೆ ದೆಹಲಿಗೆ ತೆರಳಿರುತ್ತೇನೆ. ಗೃಹ ಸಚಿವರ ಗಡಿ ವಿವಾದದ ಚರ್ಚೆ ಬಳಿಕ ಪಕ್ಷದ ಹೈಕಮಾಂಡ್ ಇನ್ನಿತರ ವಿಚಾರಗಳ ಬಗ್ಗೆ ಕೇಳಿದರೆ, ಅದಕ್ಕೆ ಪ್ರತಿಕ್ರಿಯಿಸಲು ಅಗತ್ಯ ಸಿದ್ಧತೆ ಮಾಡಿಕೊಂಡೇ ಹೋಗುತ್ತಿದ್ದೇನೆ ಎಂದರು.



ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪತ್ರಕರ್ತರೊಂದಿಗೆ ಮಾತನಾಡಿದರು. ಮೇಯರ್ ಶಿವಕುಮಾರ್, ಶಾಸಕ ಹರ್ಷವರ್ಧನ್ ಇದ್ದಾರೆ.

ದಾರಿ ತಪ್ಪಿಸುವ ಸಂಚು: ಕಾಂಗ್ರೆಸ್ ನಾಯಕರು ರಾಜ್ಯದಲ್ಲಿ ಜಲ ವಿವಾದ ಹಾಗೂ ಒಳಮೀಸಲಾತಿ, ಪರಿಶಿಷ್ಟ ಜಾತಿ ಮತ್ತು ಪಂಗಡದ ವಿಷಯ ಮುಂದಿಟ್ಟುಕೊಂಡು ಸಮಾವೇಶ ನಡೆಸಲು ಮುಂದಾಗಿದ್ದಾರೆ. ಇದು ಜನರನ್ನು ದಾರಿ ತಪ್ಪಿಸುವ ಹುನ್ನಾರವಾಗಿದೆ. ಎಸ್ಸಿ–ಎಸ್ಟಿ ಸಮುದಾಯಗಳ ಮತ ಕೈತಪ್ಪಿ ಹೋಗುವ ಆತಂಕ ಕಾಂಗ್ರೆಸ್ ನಾಯಕರಲ್ಲಿದೆ. ಅದಕ್ಕಾಗಿಯೇ ಅಧಿಕಾರಕ್ಕೆ ಬಂದರೆ ಒಳಮೀಸಲಾತಿ ಕೊಡುತ್ತೇವೆಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ. ಐದು ವರ್ಷ ಅವರೇ ಅಧಿಕಾರದಲ್ಲಿದ್ದರೂ ಏನೂ ಮಾಡಲಿಲ್ಲ. ಇತ್ತೀಚೆಗೆ ನಡೆದ ಸಮಾವೇಶದಲ್ಲಿ ದೀಪ ಹಚ್ಚಿದರೇ ಹೊರತು ಸದಾಶಿವ ಆಯೋಗ ವರದಿ ಅನುಷ್ಠಾನದ ಕುರಿತು ಒಂದೇ ಒಂದು ಮಾತನ್ನೂ ಆಡಲಿಲ್ಲ. ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ಇದ್ದಾಗಲೂ ಈ ವರದಿ ಜಾರಿಗೊಳಿಸುತ್ತೇವೆ ಎಂದು ಭರವಸೆ ನೀಡಿದ್ದರು. ಆಗಲೂ ಜಾರಿಗೊಳಿಸಲಿಲ್ಲ. ಕಾಂಗ್ರೆಸ್ ಇದೀಗ ಜನರಲ್ಲಿ ಗೊಂದಲ ಸೃಷ್ಟಿಸಲು ಯತ್ನಿಸುತ್ತಿದೆ. ಅವರ ನಡೆ–ನುಡಿಗಳು ಜನರಿಗೆ ಗೊತ್ತಿದೆ. ಇವರ ಮಾತಿಗೆ ಪರಿಶಿಷ್ಟ ಸಮುದಾಯದವರು ಮರುಳಾಗುವುದಿಲ್ಲ ಎಂದು ಹೇಳಿದರು.

ಮಹದಾಯಿ ನದಿ ವಿವಾದ ಸೃಷ್ಟಿಗೆ ಕಾಂಗ್ರೆಸ್ ಕಾರಣ. ಇದನ್ನು ಜನರು ಇನ್ನೂ ಮರೆತಿಲ್ಲ. ಮಹದಾಯಿಯ ಹನಿ ನೀರನ್ನೂ ಬಿಟ್ಟುಕೊಡುವುದಿಲ್ಲ ಎಂದು ಸೋನಿಯಾ ಗಾಂಧಿ ಹೇಳಿದ್ದರು. ಕೃಷ್ಣ ನದಿ ನೀರಿನ ನಮ್ಮ ಪಾಲಿನ ಹಕ್ಕನ್ನು ಪ್ರತಿಪಾದಿಸಲು ಮೀನಾಮೇಷ ಎಣಿಸಿದರು. ಕಾಂಗ್ರೆಸ್ಸಿಗರಿಗೆ ಯಾವ ನೈತಿಕತೆಯಿದೆ ಎಂದು ಪ್ರಶ್ನಿಸಿದರು.

ಹಾನಿಯಾಗಿದೆ: ಮ್ಯಾಂಡಸ್ ಚಂಡಮಾರುತದಿಂದ ರಾಜ್ಯದ ಹಲವು ಜಿಲ್ಲೆಗಳಲ್ಲಿ ಬೆಳೆಗೆ ಹಾನಿಯಾಗಿದೆ. ಬೆಳೆ ಹಾನಿ ಕುರಿತು ಸಮೀಕ್ಷೆ ನಡೆಸಲಾಗುತ್ತಿದೆ. ರಾಗಿ ಕಟಾವಿಗೆ ಬಂದಿದ್ದು, ಹಲವರು ಸಂಕಷ್ಟದಲ್ಲಿದ್ದಾರೆ. ಕೃಷಿ ಇಲಾಖೆಯಿಂದ ಸಂಪೂರ್ಣ ಮಾಹಿತಿ ಸಂಗ್ರಹಿಸಲಾಗಿದೆ ಎಂದರು.

ಸೈನ್ಯ ಬಲಿಷ್ಠವಾಗಿದೆ: ದೇಶದ ಸೇನಾ ಬಲ ಸರ್ವ ಸನ್ನದ್ಧವಾಗಿದ್ದು, ಗಡಿ ಭಾಗದಲ್ಲಿ ರಸ್ತೆ, ಸೇತುವೆ ಸೇರಿದಂತೆ ಎಲ್ಲ ಸೌಕರ್ಯವನ್ನು ಮೇಲ್ದರ್ಜೆಗೇರಿಸಿ ಸೈನಿಕರಲ್ಲಿ ಕೇಂದ್ರ ಸರ್ಕಾರ ಬಲ ತುಂಬಿದೆ. ಚೀನಾವನ್ನು ಎದುರಿಸುವ ನಾಯಕತ್ವ ಮೊದಲು ಇರಲಿಲ್ಲ. ಈಗ ದೇಶಕ್ಕಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಶಾಸಕ ಹರ್ಷವರ್ಧನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಚಾಮರಾಜನಗರಕ್ಕೆ 3ನೇ ಭೇಟಿ

"ಮುಖ್ಯಮಂತ್ರಿ ಆದ ನಂತರ ಮೂರನೇ ಬಾರಿ ಚಾಮರಾಜನಗರಕ್ಕೆ ಹೋಗುತ್ತಿದ್ದೇನೆ. ರಾಜ್ಯದ 31 ಜಿಲ್ಲೆಗಳಲ್ಲಿಯೇ ಇದು ನೈಸರ್ಗಿಕವಾಗಿ ಶ್ರೀಮಂತ ಜಿಲ್ಲೆ. ಭೂಮಿ ಜೋಡಣೆಯಾಗಿಯೇ ಇದೆ. ಚಾಮರಾಜನಗರ ಎಂದ ಮಾತ್ರಕ್ಕೆ ಅದು ಪ್ರತ್ಯೇಕವಾಗಿಲ್ಲ. ಅದು ಬಿಟ್ಟರೆ ಬೇರೆ ಯಾವುದೂ ತಲೆಯಲ್ಲಿ ಇಲ್ಲ.

–ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ ಮೈಸೂರು ಪೂರ್ವದ ವಾರ್ಷಿಕ ಕೂಟ





ಮೈಸೂರು, ಡಿ.13– ಮೈಸೂರಿನ ವಿದ್ಯಾಶಂಕರ ಬಡಾವಣೆಯ ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ ಮೈಸೂರು ಪೂರ್ವದಲ್ಲಿ ನವೆಂಬರ್ 27ರಂದು ವಾರ್ಷಿಕ ಕೂಟ ಹಮ್ಮಿಕೊಳ್ಳಲಾಗಿತ್ತು.

ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮುಖ್ಯ ಅತಿಥಿಗಳಾಗಿದ್ದರು. ಮೈಸೂರು ಕೊಡವ ಸಮಾಜದ ಅಧ್ಯಕ್ಷ ಮೇಚಂಡ ಎಂ. ಶಶಿ ಪೊನ್ನಪ್ಪ ವಿಶೇಷ ಆಹ್ವಾನಿತರಾಗಿದ್ದರು. ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ ಮೈಸೂರು ಪೂರ್ವದ ಅಧ್ಯಕ್ಷ ಪುಲಿಯಂಡ ಎಸ್.ದೇವಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಸ್ಥೆಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಕಲಾಪಂಡ ಬಿ. ವಿಶ್ವನಾಥ್, ಕಂಜಿತಂಡ ಕೆ. ಅಯ್ಯಪ್ಪ (ಮಾಜಿ ಅಧ್ಯಕ್ಷರು) ಹಾಗೂ ಶಾಲೆಯ ಅಕಾಡೆಮಿಕ್ ಕೌನ್ಸಿಲ್ ಅಧ್ಯಕ್ಷೆ ಚೌರೀರ ಕೆ. ಸೀತಮ್ಮ ಅವರನ್ನು ಅಭಿನಂದಿಸಲಾಯಿತು.

ಇದೇ ವೇಳೆ ಶಿಕ್ಷಣ ಕ್ಷೇತ್ರದಲ್ಲೂ ಸಾಧನೆ ಮಾಡಿದಂತಹ ಸಂಘದ ಮೂವರು ಸದಸ್ಯರಾದ ಇಟ್ಟೀರ ಡಾ.ಪ್ರಿಯಾ ಉತ್ತಯ್ಯ, ಪಟ್ಟಮಾಡ ಡಾ.ಲವ್ಯ ಮುತ್ತಮ್ಮ ಮತ್ತು ಮಂಡುವಂಡ ಕುಮಾರಿ ಏಕತಾ ಗಣಪತಿ ಅವರನ್ನು ಸನ್ಮಾನಿಸಲಾಯಿತು.

ಶೈಕ್ಷಣಿಕ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಇದೇ ವೇಳೆ ಅಭಿನಂದಿಸಲಾಯಿತು. ವಾರ್ಷಿಕ ಕೂಟ ಸಮಾರಂಭದಲ್ಲಿ ಸಂಘದ ಸದಸ್ಯರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ನಾಳೆ ನೈರುತ್ಯ ರೈಲ್ವೆಯಲ್ಲಿ ಪಿಂಚಣಿ ಅದಾಲತ್

ಮೈಸೂರು,ಡಿ.13(ಪಿಎಂ)– ನೈರುತ್ಯ ರೈಲ್ವೆ ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿಯಲ್ಲಿ ಡಿ.15ರಂದು ರಾಷ್ಟ್ರ ವ್ಯಾಪಿ ಪಿಂಚಣಿ ಅದಾಲತ್–2022 ಅನ್ನು ಆಯೋಜಿಸಲಾಗಿದೆ. ಅಂದು ಬೆಳಗ್ಗೆ 11ಕ್ಕೆ ಪಿಂಚಣಿ ಅದಾಲತ್ ನಡೆಯಲಿದ್ದು, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕರು ಅಧ್ಯಕ್ಷತೆ ವಹಿಸಲಿದ್ದಾರೆ. ರೈಲ್ವೆ ಇಲಾಖೆ ಪಿಂಚಣಿದಾರರು, ಕುಟುಂಬ ಪಿಂಚಣಿದಾರರು ಮತ್ತು ಅವರ ಸದಸ್ಯರು ಭಾಗವಹಿಸಬಹುದು. ಅದಾಲತ್‌ನಲ್ಲಿ ಕುಂದು–ಕೊರತೆ ಸಂಬಂಧ ಪರಿಹಾರ ಪಡೆಯಬಹುದು ಎಂದು ವಿಭಾಗದ ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರೂ ಆದ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಮಂಜುನಾಥ್ ಕನಮಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.12.2022 ಬುಧವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022ರಿಂದ 15.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಕೃಷ್ಣ ಪಕ್ಷ, ತಿಥಿ: ಷಷ್ಠೀ, ನಕ್ಷತ್ರ : ಮಖೆ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಡಯಾಬಿಟಿಸ್ ಮತ್ತು ಸಂಧಿವಾತ ಕಾಯಿಲೆಗಳಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಜವಳಿ ಇಲಾಖೆ ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

■ **ಮರಿಮಲ್ಲಪ್ಪ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು :** ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಹಾಗೂ ಎನ್‌ಎಸ್‌ಎಸ್ ಯೋಜನೆಯ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಮರಿಮಲ್ಲಪ್ಪ ವಿದ್ಯಾಸಂಸ್ಥೆ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಮುಖ್ಯ ಅತಿಥಿಗಳು : ತಹಸೀಲ್ದಾರ್ ಬಿ.ಎನ್. ಗಿರೀಶ್, ಉಪಸ್ಥಿತರು : ಪ್ರಾಂಶುಪಾಲರಾದ ಪ್ರೊ. ಎಂ. ಪುಷ್ಪಾ, ಸಾಂಸ್ಕೃತಿಕ ವೇದಿಕೆ ಸಂಚಾಲಕರಾದ ಶ್ರೀಮತಿ ಎಸ್.ಮನು, ಕಾರ್ಯಕ್ರಮಾಧಿಕಾರಿ ಎ.ಎಸ್. ಪ್ರಭುಸ್ವಾಮಿ, ಸ್ಥಳ: ಜಗನ್ಮೋಹನ ಅರಮನೆ, ಶ್ರೀ ಗುರಿಕಾರ್ ಮರಿಮಲ್ಲಪ್ಪ ವೃತ್ತ, ಬೆಳಗ್ಗೆ 10.30ಕ್ಕೆ.

■ **ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಯುಆರ್‌ಐಎಸ್‌ಇ ವೇದಿಕೆ ಸಂಗೀತ್ ಅಕಾಡೆಮಿ, ಬೆಂಗಳೂರು :** 20ನೇ ವರ್ಷದ ತರಂಗ ರತ್ನ ಪ್ರಶಸ್ತಿ ಪ್ರದಾನ, ಸ್ಥಳ: ಸಂಗೀತ ವಿವಿ ಆವರಣ, ಬೆಳಗ್ಗೆ 11ಕ್ಕೆ

■ **ಅಭ್ಯುದಯ ಮಹಿಳಾ ಸಮಾಜ :** ವಿವಿಧ ಜಾನಪದ ಮತ್ತು ಸಂಗೀತ ವಿದ್ವಾಂಸರಿಂದ ಜನಪದ ಗೀತೆ ಮತ್ತು ಸುಗಮ ಸಂಗೀತ ಕಾರ್ಯಾಗಾರ, ಸ್ಥಳ: ಅಭ್ಯುದಯ ಮಹಿಳಾ ಸಮಾಜ, ಜೆ.ಪಿ.ನಗರ, ಸಂಜೆ 4ರಿಂದ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಪಂಡಿತ್ ಡಾ. ಬೆ.ನಾ. ವಿಜಯೇಂದ್ರಾಚಾರ್ ಅವರಿಂದ 'ಮಹಾಭಾರತದ ಉದ್ಯೋಗ ಪರ್ವ' ಕುರಿತು ಪ್ರವಚನ, ಸ್ಥಳ: ಜಯಲಕ್ಷ್ಮೀಪುರಂನಲ್ಲಿರುವ ಶ್ರೀ ರಾಘವೇಂದ್ರ ಮಠದ ಆವರಣ, ಸಂಜೆ 5 ಗಂಟೆಯಿಂದ.

■ **ಪಿಜಿಎಲ್ ಸಂಸ್ಮರಣಾ ವೇದಿಕೆ :** ವಿದ್ವಾನ್ ಹೇಮಂತ್ ಮತ್ತು ವಿದ್ವಾನ್ ಹೇರಂಬ ಅವರಿಂದ ಯುಗಳ ವೇಣುವಾದನ, ವಿದ್ವಾನ್ ಜ್ಯೋತ್ಸ್ನಾ ಶ್ರೀಕಾಂತ್–ಪಿಟೀಲು, ವಿದ್ವಾನ್ ಅರ್ಜುನ್‌ಕುಮಾರ್–ಮೃದಂಗ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ರೋಟರಿ ಮೈಸೂರು ಮಿಡ್‌ಟೌನ್ :** ರೋಟರಿ ಮೈಸೂರು ಮಿಡ್‌ಟೌನ್ ಜೇಯಸ್ ಸಿಎಸ್‌ಆರ್ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಮೆರಿಟರ್ ಹೆಚ್‌ವಿಎಸ್ ಇಂಡಿಯಾ ಲಿಮಿಟೆಡ್ ಅಧ್ಯಕ್ಷ ಡಾ. ಎನ್. ಮುತ್ತುಕುಮಾರ್, ಎನ್.ಆರ್. ಫೌಂಡೇಷನ್ ಅಧ್ಯಕ್ಷ ಆರ್. ಗುರು ಅವರಿಗೆ ಪ್ರಶಸ್ತಿ ಪ್ರದಾನ, ಸ್ಥಳ: ಹೋಟೆಲ್ ಗ್ರ್ಯಾಂಡ್ ಮೆರ್ಕ್ಯೂರ್, ನ್ಯೂ ಸಯ್ಯಾಜಿರಾವ್ ರಸ್ತೆ, ಸಂಜೆ 6.30ಕ್ಕೆ.

ಬಿಳುಗಲಿ ಗ್ರಾಮದಲ್ಲಿಂದು, ನಂಜನಗೂಡು ತಾಲೂಕು

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಎನ್‌ಎಸ್‌ಎಸ್ ವಾರ್ಷಿಕ ಶಿಬಿರ, ಅಧ್ಯಕ್ಷತೆ : ಸಮಾಜ ಕಲ್ಯಾಣ ಅಧಿಕಾರಿ ಶ್ರೀನಿವಾಸ ಪ್ರಸಾದ್, ರೈತ ಮುಖಂಡ ವಿದ್ಯಾಸಾಗರ್ ಅವರಿಂದ ಸಾವಯವ ಕೃಷಿ ಮತ್ತು ರೈತರ ಸವಾಲುಗಳು ಕುರಿತು ಉಪನ್ಯಾಸ, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು ಅವರಿಂದ ಕನ್ನಡ ಶಾಲೆ ಮತ್ತು ಕಾರ್ಪೋರೇಟ್ ಶಿಕ್ಷಣ ಕುರಿತು ಉಪನ್ಯಾಸ, ಸಂಜೆ 4ಕ್ಕೆ.

ಮುಳ್ಳೂರು ಗ್ರಾಮದಲ್ಲಿಂದು, ಮೈಸೂರು ತಾಲೂಕು

■ **ಬಾಸುದೇವ ಸೋಮಾನಿ ಕಾಲೇಜು :** ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ, ಮಧ್ಯಾಹ್ನ 3ಕ್ಕೆ.

ಗೋಪಾಲಪುರದಲ್ಲಿಂದು, ಮೈಸೂರು ತಾಲೂಕು

■ **ಮೈಸೂರು ವಿಶ್ವವಿದ್ಯಾನಿಲಯ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ, ಉದ್ಘಾಟನೆ: ಶಾಸಕ ಜಿ.ಟಿ. ದೇವೇಗೌಡ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ವಿಶೇಷ ಆಹ್ವಾನಿತರು : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಪಿ.ವಿಶ್ವನಾಥ್, ಶ್ರೀ ಶೈಲರಾಮಣ್ಣವರ್, ಟಿ. ನಾಗರಾಜು, ಸಂಜೆ 4.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ್ ಮಾತು, ಪ್ರಸ್ತುತಿ– ಯೋಗಶಿಕ್ಷಕ ಡಿ.ಶ್ರೀಹರಿ, 6.40 ಅರಿವಿನ ಶಿಖರ, ಗಾಯನ– ಸಿ.ವಿಶ್ವನಾಥ್, ಜಿ.ಪುಷ್ಪಲತಾ, ವ್ಯಾಖ್ಯಾನ –ಡಾ.ಕಲಾಶ್ರೀ, 8.30 ಬದುಕು ಅಕ್ಷಯವಾಗಲಿ–ಪ್ರಾಯೋಜಿತ ಕಾರ್ಯಕ್ರಮ, 10.00 ಬೇಗಂ ಅಕ್ತರ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ಶಕುನದ ಸಾವಿತ್ರಮ್ಮ", ರಚನೆ–ಯಮುನಾ ಮೂರ್ತಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಮೈಸೂರು ರಂಗಸ್ವಾಮಿ, 3.00 ಲಯ ಸಂಭ್ರಮ–ಶಾಸ್ತ್ರೀಯ ಸಂಗೀತದ ವರ್ಣ ಮತ್ತು ತಿಲ್ಲಾನಗಳಲ್ಲಿ ಮೃದಂಗದ ಪಾತ್ರ. ಭಾಗವಹಿಸುವವರು ಖ್ಯಾತ ಹಿನ್ನೆಲೆ ಗಾಯಕರಾದ ರಾಜ್‌ಕುಮಾರ್ ಭಾರತಿ, ಪ್ರಸ್ತುತಿ– ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ–ಭಾಗವಹಿಸುವವರು ಲಲಿತಾ ಮೊದಲಿಯಾರ್, 5.30 ಸಿರಿ ತೋಟಗಾರಿಕೆ–ತೋಟಗಾರಿಕೆ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಹೈನುರಾಸುಗಳ ತಾಂತ್ರಿಕ ನಿರ್ವಹಣಾ ಕ್ರಮಗಳು ಕುರಿತು ಡಾ.ಎಂ.ಸಿ.ಮಲ್ಲಿಕಾರ್ಜುನ ಅವರೊಂದಿಗೆ ಸಂದರ್ಶನ, 9.30 ಉಲ್ಲಾಸ್ ಬಾಪಟ್–ಸಂತೂರ್ ವಾದನ, 10.00 ಜನಪದಗೀತೆ–ಮಹದೇವಸ್ವಾಮಿ ಮತ್ತು ತಂಡ, 10.30 ಸವಿನೆನಪು

ಬಹುರೂಪಿ ರಾಷ್ಟ್ರೀಯ ರಂಗೋತ್ಸವ ಕಾರ್ಯಕ್ರಮ



■ **ವನರಂಗ :** ಹಾಸನದ ಶ್ರೀ ಓಂಕಾರ್ ಮೂರ್ತಿ ಮತ್ತು ತಂಡದಿಂದ ಚಿಟ್‌ಮೇಳ, ಮೈಸೂರಿನ ಶ್ರೀಮತಿ ಶುಭಾ ರಾಘವೇಂದ್ರ ಅವರಿಂದ ಜಾನಪದ ಗೀತೆ, ಸಂಜೆ 5ಕ್ಕೆ.

■ **ಶ್ರೀರಂಗ ಮಂದಿರ (ಚಲನಚಿತ್ರೋತ್ಸವ) :** ಬೆಳಗ್ಗೆ 10.30ರಿಂದ ಫಿಡ್ಲರ್ ಆನ್ ದಿ ತ್ಯಾಚ್ (ಇಂ), ನಿರ್ದೇಶನ : ತ್ರಿಷಾದಾಸ್ ಮತ್ತು ಮಧುರ್ ದಾಸ್, ಮೈಸೂರು ಮಂಜುನಾಥ್ (ಕ), ನಿರ್ದೇಶನ : ಎಂ.ಎಸ್. ಪ್ರಕಾಶ್‌ಬಾಬು, ಮಧ್ಯಾಹ್ನ 12 ರಿಂದ ರಾಷ್ಟ್ರಕವಿ ಕುವೆಂಪು : ಬದುಕು ಬರಹ (ಕ), ನಿರ್ದೇಶನ : ಉಮಾಶಂಕರಸ್ವಾಮಿ, ಉಸ್ತಾದ್ ಬಿಸ್ಮಿಲ್ಲಾ ಖಾನ್ (ಹಿ), ನಿರ್ದೇಶನ : ಸಬ್ಯಸಾಚಿ ಮುಖರ್ಜಿ, ಮಧ್ಯಾಹ್ನ 2 ರಿಂದ ದೋ ಆಂಖೇ ಬಾರಾ ಹಾತ್ (ಹಿ), ನಿರ್ದೇಶನ : ವಿ. ಶಾಂತರಾಮ್.

■ **ಭೂಮಿಗೀತ :** ಮಧ್ಯಪ್ರದೇಶದ ಭೂಪಾಲ್‌ನ ಚೇತ್ನ ರಂಗ್ ಸಮೂಹ ಕಲಾವಿದರಿಂದ ಬೆಟರ್ ಹಾಫ್ (ಹಿ) ನಾಟಕ ಪ್ರದರ್ಶನ, ರಚನೆ, ನಿರ್ದೇಶನ : ಆಶಿಷ್ ಶ್ರೀ ವಾಸ್ತವ್, ಸಂಜೆ 6.30 ರಿಂದ.

■ **ಸಂಪತ್ ರಂಗ ಮಂದಿರ :** ಬೆಳಗಾವಿ ರಂಗ ಸಂಪದ ಅವರಿಂದ ಪಂಚಕನ್ಯಾಸ್ಮರೇನಿತ್ಯಂ (ಕ) ನಾಟಕ ಪ್ರದರ್ಶನ, ರಚನೆ : ವಿನುತಾ ಹಂಚಿನಮನಿ, ನಿರ್ದೇಶನ : ಡಾ. ಅರವಿಂದ ಕುಲಕರ್ಣಿ, ಸಂಜೆ 7ಕ್ಕೆ

■ **ಕಲಾಮಂದಿರ :** ಬೆಂಗಳೂರಿನ ಬೆನಕ ತಂಡದಿಂದ ವಿದ್ಯಾ ಸುಂದರಿ ಬೆಂಗಳೂರು ನಾಗರತ್ನಮ್ಮ (ಕ) ನಾಟಕ ಪ್ರದರ್ಶನ, ಮೂಲ ಕಥೆ: ಮಲೆಯೂರು ಗುರುಸ್ವಾಮಿ, ರಂಗರೂಪ : ಹೂಲಿಶೇಖರ್, ಪ್ರತಿಭಾನಂದಕುಮಾರ್, ನಿರ್ದೇಶನ: ಟಿ.ಎಸ್.ನಾಗಾಭರಣ, ಸಂಜೆ 7.30ಕ್ಕೆ.

■ **ಬಿ.ವಿ.ಕಾರಂತ ರಂಗಚಾವಡಿ:** ಮೈಸೂರಿನ ಶಾಂತಲಾ ವಟ್ಟಂ ಅವರಿಂದ ಗಝಲ್, ಸಂಜೆ 4ರಿಂದ.

ಬಹುರೂಪಿ ರಂಗೋತ್ಸವದಲ್ಲಿ ನಾಟಕವಲ್ಲ ನೋಡುವಂತಹದ್ದು, ಖರೀದಿಸುವಂತದ್ದು, ಸವಿಯುವಂತಹದ್ದು ಬಹಳಷ್ಟಿದೆ...!?





ಮೈಸೂರು, ಡಿ.13(ಎಸ್‌ಪಿಎನ್)– ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಕರಕುಶಲ ಮೇಳದ ವಿವಿಧ ಮಳಿಗೆಗಳಲ್ಲಿ ಹಾಸನ ಮೆಣಸಿನಕಾಯಿಂದ ತಯಾರಿಸಿದ ಬಜ್ಜಿ ಸೇರಿದಂತೆ ಇತರೆ ಉತ್ತರ ಕರ್ನಾಟಕ ಶೈಲಿಯ ತಿನಿಸುಗಳು, ಬಗೆ ಬಗೆಯ ಅಲಂಕಾರಿಕ ಗಿಡಗಳು, ಹಳೆಯ ಪಂಚ ಲೋಹ, ಕಂಚಿನ ಪಾತ್ರೆಗಳು, ದೇವರ ವಿಗ್ರಹಗಳು ಸೇರಿದಂತೆ ಇತರೆ ಗೃಹೋಪಯೋಗಿ ಸಾಮಗ್ರಿಗಳಿಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.



ಹಾಸನ ಮೆಣಸಿನಕಾಯಿ ಬಜ್ಜಿ, ಸಿಂಬೆ ಚಕ್ಲಿಗೆ ಭಾರಿ ಬೇಡಿಕೆ: ಶ್ರೀ ಬಸವೇಶ್ವರರೊಟ್ಟಿ ಹಾಗೂ ತಿಂಡಿ ಮನೆ ಮಳಿಗೆಯಲ್ಲಿ ಬಿಳಿ ಜೋಳದ ರೊಟ್ಟಿ (ಖಡಕ್ ರೊಟ್ಟಿ) ಎಣೆಗಾಯಿ ಬದನೆಕಾಯಿ, ಕಾಯಿಪಲ್ಯ ಮತ್ತು ಉತ್ತರ ಕರ್ನಾಟಕದ ಶೈಲಿಯ ವಿವಿಧ ತಿನಿಸುಗಳಿಗೆ ಭಾರೀ ಬೇಡಿಕೆ ಇದೆ. ಅದರಲ್ಲೂ ಹಾಸನ ಮೆಣಸಿನ ಕಾಯಿಯಿಂದ ತಯಾರಿಸಿದ ಬಜ್ಜಿಗೆ ವಿಶೇಷ ಬೇಡಿಕೆಯಿದ್ದು, ಖಾರ ಹೆಚ್ಚಾಗಿರುವುದರಿಂದ ಉತ್ತರ ಕರ್ನಾಟಕ ಸೇರಿದಂತೆ ರಾಜ್ಯಾದ್ಯಂತ ಬೇಡಿಕೆ ಇದೆ.

ನಮ್ಮ ಮಳಿಗೆಯಲ್ಲಿ ಮಸಾಲೆ ಅವಲಕ್ಕಿ, ಮಸಾಲೆ ಮಡಕ್ಕಿ, ಆಲು ಬಜ್ಜಿ, ಈರೆಕಾಯಿ ಬಜ್ಜಿ, ಚುಡಾ, ಕಡ್ಡಿಕಾರ, ಅವಲಕ್ಕಿ, ಖಾರಮರಿಗೆ ಗ್ರಾಹಕರಿಂದ ಬೇಡಿಕೆಯಿದೆ. ಅದರಲ್ಲೂ ಸಿಂಬೆ ಚಕ್ಲಿಗೆ ಗ್ರಾಹಕರಿಂದ ಭಾರೀ ಬೇಡಿಕೆಯಿದ್ದು, 12 ಕೆಜಿಗೂ ಹೆಚ್ಚು ತಯಾರಿಸಲಾಗಿದ್ದು, ಎಲ್ಲವೂ ಖಾಲಿಯಾಗಿದೆ ಎಂದು ಮಾಲೀಕ ನಂದೀಶ್ ಸಿ.ಸಾಗರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರಲ್ಲದೆ, ನಾನು 5 ವರ್ಷಗಳ ಹಿಂದೆ ದಾವಣಗೆರೆ ಸರ್ಕಾರಿ ಪಿಯು ಕಾಲೇಜು ಸೇರಿದಂತೆ ವಿವಿಧೆಡೆ ಉಪನ್ಯಾಸಕವಾಗಿ 30 ವರ್ಷಗಳ ಸೇವೆ ಸಲ್ಲಿಸಿ, ಇದೀಗ ನಿವೃತ್ತಿ ನಂತರ ಈ ಕೆಲಸದಲ್ಲಿ ತೊಡಗಿಸಿಕೊಂಡಿದ್ದೇನೆ ಎಂದರು.

ಹಳೆಯ ಪಂಚ ಲೋಹ, ಕಂಚಿನ ಪಾತ್ರೆ ಮಳಿಗೆ: ಆಸಕ್ತಿವುಳ್ಳವರು ಹಳೆಯ ಪಂಚ ಲೋಹದ ದೀಪ, ದೇವರ ವಿಗ್ರಹ, ಪಂಚಪಾತ್ರೆ, ಪಂಚಾರತಿ, ಏಕಾರತಿ, ಊಟದ ಬಾಕ್ಸ್, 23 ಲೀಟರ್ ಸಾಮರ್ಥ್ಯದ ತಾಮ್ರದ ಬಿಂದಿಗೆ, ಲೀಟರ್ ಸಾಮರ್ಥ್ಯದ ಚೆಂಬು, ರೈಲು ಚೆಂಬು, ವಳ್ಳೆ, ಕಂಚಿನ ಸೌಟ್, ಪಂಚಲೋಹ ಉಂಗುರ, ಅನ್ನ ಚಕ್ರ, ಸಿಂಬಿ, ಅವಲಕ್ಕಿ ಸರ, ಕನಕವೃಷ್ಟಿ, ಗೋಮತಿ ಚಕ್ರ, ತೂಗುದೀಪ, ಹಾಲಿನ ಕ್ಯಾನ್, ಸೋಮು ಸೂತ್ರ, ತೀರ್ಥ ಪಾತ್ರೆ ಸೇರಿದಂತೆ ಸುಮಾರು 100ಕ್ಕೂ ಹೆಚ್ಚು ಬಗೆಬಗೆಯ ತಾಮ್ರ, ಕಂಚು, ಪಂಚಲೋಹದ ಗೃಹೋಪಯೋಗಿ ಪದಾರ್ಥಗಳಿದ್ದು, ನೂರು ರೂ.ಗಳಿಂದ, ಲಕ್ಷ ರೂ. ಬೆಲೆಯ ಪಾತ್ರೆಗಳಿವೆ. ಕಲೆಕ್ಷನ್ ಇದೆ. ಈ ಮಳಿಗೆಯಲ್ಲಿ 10ರೂ ನಿಂದ 15 ಸಾವಿರ ರೂ.ಗಳಿಗೆ ಬೆಲೆಯುಳ್ಳ ಪಾತ್ರೆಗಳಿವೆ ಎಂದು ಮಳಿಗೆಯ ಮಾಲೀಕ ಪಾರ್ಥಸಾರಥಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅಲಂಕಾರಿಕ ಗಿಡಗಳ ಮಳಿಗೆ: ಬೋಗಾದಿಯಲ್ಲಿರುವ ಮೈಸೂರು ಪ್ಲಾಂಟ್ಸ್ ನರ್ಸರಿಯಿಂದ ಬಹುರೂಪಿ ಕರಕುಶಲ ಮೇಳದಲ್ಲಿ ಮಳಿಗೆ ತೆರೆಯಲಾಗಿದೆ. ಆರಂಭದಲ್ಲಿ ಮಳೆ ಕಾರಣಕ್ಕಾಗಿ ಹೆಚ್ಚಿನ ಸಂಖ್ಯೆಯ ಗ್ರಾಹಕರು ಮಳಿಗೆಗೆ ಬರಲಿಲ್ಲ. ಇಂದು ಮಳೆಯಿಲ್ಲದ ಕಾರಣ ಸಾಕಷ್ಟು ಗ್ರಾಹಕರು ಬಂದು ಅಲಂಕಾರಿಕ ಗಿಡಗಳ ಬಗ್ಗೆ ಮಾಹಿತಿ ಪಡೆಯುತ್ತಿದ್ದಾರೆ. ಕೆಲವರು ಖರೀದಿಸುತ್ತಿದ್ದಾರೆ. ಈ ಮೇಳದಲ್ಲಿ ಇಂಡೋರ್ ಪ್ಲಾಂಟ್‌ಗಳನ್ನು ಇಡಲಾಗಿದೆ. ಗಾಳಿ ಶುದ್ಧೀಕರಣ ಸಸಿಗಳು, ಫೈಕಸ್ ಮತ್ತು ಜೇಡ್ ಬೋನ್ಸಾಯ್ ಗಿಡ, ಲಕ್ಕಿ ಬಾಂಬ್, ರಬ್ಬರ್ ಪ್ಲಾಂಟ್ ಸೇರಿದಂತೆ 40 ಬಗೆ ಬಗೆಯ ಅಲಂಕಾರಿಕ ಗಿಡಗಳನ್ನು ಇಡಲಾಗಿದೆ. ನಮ್ಮ ಮಳಿಗೆಯಲ್ಲಿ 100 ರೂ. ನಿಂದ 4 ಸಾವಿರದವರೆಗೆ ಬೆಲೆಬಾಳುವಂತಹ ಅಲಂಕಾರಿಕ ಗಿಡಗಳು ಇವೆ ಎಂದು ಮಹದೇವ ಪ್ರಸಾದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಲಾರಿ ಡಿಕ್ಕಿ: ಸ್ಥಳದಲ್ಲೇ ಕಾಡಾನೆ ಸಾವು

● ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ರಾಷ್ಟ್ರೀಯ ಹೆದ್ದಾರಿಯಲ್ಲಿ ದುರ್ಘಟನೆ

● ಒಂದು ಗಂಟೆ ರಸ್ತೆಯಲ್ಲೇ ನರಳಿ ನರಳಿ ಪ್ರಾಣ ಬಿಟ್ಟ ಹೆಣ್ಣಾನೆ



ಗುಂಡ್ಲುಪೇಟೆ,ಡಿ.13(ಎಂಟಿವೈ/ಎಸ್‌ಬಿಡಿ)– ವೇಗವಾಗಿ ಬಂದ ಲಾರಿ ಡಿಕ್ಕಿ ಹೊಡೆದ ಪರಿಣಾಮ ಕಾಡಾನೆಯೊಂದು ನರಳಿ ನರಳಿ ರಸ್ತೆಯಲ್ಲೇ ಉಸಿರು ಚೆಲ್ಲಿದ ದುರ್ಘಟನೆ ರಾಷ್ಟ್ರೀಯ ಹೆದ್ದಾರಿ 766(212)ರಲ್ಲಿ ಮಂಗಳವಾರ ರಾತ್ರಿ ಸಂಭವಿಸಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದುಹೋಗಿರುವ ಗುಂಡ್ಲುಪೇಟೆ–ಕೇರಳ ರಾಷ್ಟ್ರೀಯ ಹೆದ್ದಾರಿ(766)ಯ ಮದ್ದೂರು ಚೆಕ್‌ಪೋಸ್ಟ್ ಹಾಗೂ ಮೂಲೆಹೊಳೆ ಚೆಕ್‌ಪೋಸ್ಟ್ ನಡುವೆ ಮಂಗಳವಾರ ರಾತ್ರಿ ಸುಮಾರು 8.30ರ ವೇಳೆಯಲ್ಲಿ ಈ ಘಟನೆ ಸಂಭವಿಸಿದ್ದು, ಸುಮಾರು 35 ವರ್ಷದ ಹೆಣ್ಣಾನೆ ಸ್ಥಳದಲ್ಲೇ ಸಾವನ್ನಪ್ಪಿದೆ.

ವಿವರ: ಕೇರಳದಿಂದ ಮೈಸೂರಿಗೆ ಬರುತ್ತಿದ್ದ ಮಲ್ಟಿ ಆಕ್ಸೆಲ್‌ನ ಭಾರೀ ಲಾರಿ, ರಸ್ತೆ ದಾಟುತ್ತಿದ್ದ ಕಾಡಾನೆಗೆ ಡಿಕ್ಕಿ ಹೊಡೆದಿದೆ. ಪರಿಣಾಮ ರಸ್ತೆಗುರುಳಿದ ಆನೆ ತೀವ್ರ ನೋವಿನಿಂದ ನರಳಾಡಿದೆ. ವಿಷಯ ತಿಳಿದು ಬಂಡೀಪುರ ಪಶು ವೈದ್ಯರ ತಂಡ ಸ್ಥಳಕ್ಕೆ ಧಾವಿಸಿ, ಅರಣ್ಯ ಇಲಾಖೆ ಮೇಲಧಿಕಾರಿಗಳ ಸಮ್ಮುಖದಲ್ಲಿ ಚಿಕಿತ್ಸೆ ನೀಡಿ ಉಳಿಸಿಕೊಳ್ಳುವ ಪ್ರಯತ್ನ ನಡೆಸಿತಾದರೂ ಪ್ರಯೋಜನವಾಗಲಿಲ್ಲ. ಒಂದು ಗಂಟೆ ಕಾಲ ನೋವು ತಾಳಲಾರದೆ ನರಳಾಡಿ ಆನೆ ಜೀವ ಬಿಟ್ಟಿತು ಎಂದು ಬಲ್ಲಮೂಲಗಳು ತಿಳಿಸಿವೆ.

ಅತೀ ವೇಗವೇ ಕಾರಣ: ಅಪಘಾತಕ್ಕೆ ಅಜಾಗರೂಕ ಹಾಗೂ ವೇಗದ ಚಾಲನೆಯೇ ಕಾರಣ ಎನ್ನಲಾಗಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದುಹೋಗಿರುವ ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ರಾತ್ರಿ ವೇಳೆ ಪ್ರಾಣಿಗಳ ಸಂಚಾರ ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರಾತ್ರಿ 9ರ ನಂತರ ಈ ಮಾರ್ಗದಲ್ಲಿ ಸಂಚಾರ ನಿರ್ಬಂಧಿಸಲಾಗಿದೆ. ಆದರೆ ಅಷ್ಟರೊಳಗೆ ಚೆಕ್‌ಪೋಸ್ಟ್ ದಾಟಿ ಬಂದಿದ್ದ ಲಾರಿಯ ಚಾಲಕ ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಬಂದಿದ್ದಾನೆ. ಈ ವೇಳೆ ರಸ್ತೆ ದಾಟುತ್ತಿದ್ದ ಆನೆಗೆ ಡಿಕ್ಕಿ ಹೊಡೆಸಿದ್ದಾನೆ. ಡಿಕ್ಕಿಯ ರಭಸಕ್ಕೆ ಆನೆ ರಸ್ತೆಗುರುಳಿ ತೀವ್ರ ಪೆಟ್ಟಿನಿಂದ ನರಳಿ ಆನೆ ರಾತ್ರಿ 9.30ರಲ್ಲಿ ಕೊನೆಯುಸಿರೆಳೆದಿದೆ.

ಘಟನೆಗೆ ಕಾರಣನಾದ ಲಾರಿ ಚಾಲಕ ಹಾಗೂ ಸಹಾಯಕನನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದು ಮುಂದಿನ ಕ್ರಮ ವಹಿಸಿದ್ದಾರೆ. ನಾಳೆ (ಡಿ.14) ಬೆಳಗ್ಗೆ ವೈದ್ಯಕೀಯ ಪರೀಕ್ಷೆ ಬಳಿಕ ಆನೆಯ ಸಂಸ್ಕಾರ ನಡೆಸಲು ಇಲಾಖೆ ಅಧಿಕಾರಿಗಳು ನಿರ್ಧರಿಸಿದ್ದಾರೆ.

ಸಂಚಾರ ನಿರ್ಬಂಧ: ಅರಣ್ಯ ಪ್ರದೇಶದಲ್ಲಿ ಹಾದು ಹೋಗಿರುವ ಗುಂಡ್ಲುಪೇಟೆ–ಊಟಿ ರಾಷ್ಟ್ರೀಯ ಹೆದ್ದಾರಿ–67 ಹಾಗೂ ಇಂದು ದುರ್ಘಟನೆ ಸಂಭವಿಸಿದ ಗುಂಡ್ಲುಪೇಟೆ–ಕೇರಳ ರಾಷ್ಟ್ರೀಯ ಹೆದ್ದಾರಿ–766ರಲ್ಲಿ ರಾತ್ರಿ 9 ಗಂಟೆಯಿಂದ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದೆ. ವನ್ಯಜೀವಿಗಳ ಸುರಕ್ಷತೆ ದೃಷ್ಟಿಯಿಂದ ಈ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಆದರೆ ಉಭಯ ರಾಜ್ಯಗಳ ನಡುವೆ ಸರಕು ಸಾಗಾಣೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಸಂಚಾರ ನಿರ್ಬಂಧ ತೆರವುಗೊಳಿಸಬೇಕೆಂಬ ಕೇರಳ ಸರ್ಕಾರದ ಮನವಿಯನ್ನು ಕರ್ನಾಟಕ ಅರಣ್ಯ ಇಲಾಖೆ ನಿರಾಕರಿಸಿದೆ. ಆದರೂ ಕೆಲ ಚಾಲಕರ ನಿರ್ಲಕ್ಷ್ಯದಿಂದ ಕಾಡು ಪ್ರಾಣಿಗಳು ಬಲಿಯಾಗುತ್ತಿವೆ.

ಮೈಸೂರು ವಿಮಾನ ನಿಲ್ದಾಣದಲ್ಲಿ ಅಣಕು ತುರ್ತು ಪರಿಹಾರ ಕಾರ್ಯಾಚರಣೆ



ಮೈಸೂರು, ಡಿ.13– ವಿಮಾನಗಳ ತುರ್ತು ಭೂಸ್ಪರ್ಶದಿಂದ ಸಂಭವಿಸಬಹುದಾದ ಅವಘಡಗಳ ನಿರ್ವಹಣೆ ಬಗ್ಗೆ ಮೈಸೂರು ವಿಮಾನ ನಿಲ್ದಾಣದಲ್ಲಿ ಮಂಗಳವಾರ ಅಣಕು ಕಾರ್ಯಾಚರಣೆ ನಡೆಸಲಾಯಿತು.


ವೈಮಾನಿಕ ಹಾರಾಟದ ವೇಳೆ ತಾಂತ್ರಿಕ ಹಾಗೂ ಇನ್ನಿತರ ಕಾರಣಗಳಿಂದ ವಿಮಾನಗಳು ತುರ್ತು ಭೂಸ್ಪರ್ಶಗೊಂಡು ಅವಘಡ ಸಂಭವಿಸಿರುವ ಉದಾಹರಣೆಗಳು ಸಾಕಷ್ಟಿವೆ. ಇಂತಹ ಘಟನೆ ಸಂಭವಿಸಿದ್ದಲ್ಲಿ ಪ್ರಯಾಣಿಕರ ರಕ್ಷಣೆ ಸೇರಿದಂತೆ ಕೈಗೊಳ್ಳಬೇಕಾದ ತುರ್ತು ಕ್ರಮಗಳನ್ನು ಪ್ರಾಯೋಗಿಕ ಕಾರ್ಯಾಚರಣೆಯಲ್ಲಿ ಅನುಸರಿಸಲಾಯಿತು. ವಿಮಾನ ನಿಲ್ದಾಣ ರಕ್ಷಣಾ ಪಡೆ, ಅಗ್ನಿಶಾಮಕ ತಂಡ, ಪೊಲೀಸ್ ಪಡೆ, ವೈದ್ಯಕೀಯ ತಂಡಗಳು ಅಣಕು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದವು. ಬೆಂಕಿ ನಂದಿಸುವುದು, ಗಾಯಾಳುಗಳನ್ನು ತಕ್ಷಣ ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಸಾಗಿಸುವುದು ಇನ್ನಿತರ ಕಾರ್ಯಾಚರಣೆಯನ್ನು ನೈಜವಾಗಿ ಪ್ರದರ್ಶಿಸಿದರು. ಈ ವೇಳೆ ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಮಂಜುನಾಥ್ ಮತ್ತಿತರರು ಹಾಜರಿದ್ದರು.

ಜನಜೀವನದ ವಾಸ್ತವತೆ ಸಾರುವ ಬಹುರೂಪಿ ರಂಗೋತ್ಸವದ ನಾಟಕಗಳು

ರಂಗಾಯಣದತ್ತ ಭಾರೀ ಸಂಖ್ಯೆಯಲ್ಲಿ ಧಾವಿಸುತ್ತಿರುವ ರಂಗಪ್ರೇಮಿಗಳು



ಭೂಮಿಗೀತದಲ್ಲಿ 'ಬೈ2 ಕಾಫಿ' ನಾಟಕ ಪ್ರದರ್ಶನ.



ಸಾಹಿತಿ ಪೂರ್ಣಚಂದ್ರ ತೇಜಸ್ವಿ ರಚಿತ 'ತುಕ್ಕೋಜಿ' ನಾಟಕದ ದೃಶ್ಯ



ವನರಂಗದಲ್ಲಿ 'ಬೋಡಾಸ್ ದೇ ಸಾಂಗ್ರೆ' ಹರಿಯಾನ್ವಿ ನಾಟಕ

ಮೈಸೂರು,ಡಿ.13(ಎಂಕೆ)–ನಿತ್ಯ ಜೀವನದ ಸಂಘರ್ಷಗಳು, ಮನಸುಗಳ ನಡುವಿನ ಭಿನ್ನಾಭಿಪ್ರಾಯಗಳ ಜೊತೆಗೆ ಅನ್ಯಾಯಕ್ಕೊಳಗಾದ ಹೆಣ್ಣಿನ ಉಡಿಯೊಳಗಣ ಕಿಚ್ಚು ಅನಾವರಣಗೊಂಡಿತು.

ಮೈಸೂರು ರಂಗಾಯಣದಲ್ಲಿನ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ'ದಲ್ಲಿ ಮಂಗಳವಾರ ಪ್ರದರ್ಶನಗೊಂಡ ವಿನೂತನ ನಾಟಕಗಳು ಇತಿಹಾಸ, ವಾಸ್ತವಾಂಶಗಳ ಕುರಿತು ಬೆಳಕು ಚೆಲ್ಲಿದವು. ಭೂಮಿಗೀತ ವೇದಿಕೆಯಲ್ಲಿ 'ಬೈ2 ಕಾಫಿ'(ಕನ್ನಡ), ಸಂಪತ್‌ರಂಗ ಮಂದಿರ(ಕಿರುರಂಗಮಂದಿರ)ದಲ್ಲಿ 'ತುಕ್ಕೋಜಿ'(ಕನ್ನಡ), ವನರಂಗದಲ್ಲಿ 'ಬೋಡಾಸ್ ದೇ ಸಾಂಗ್ರೆ'(ಹರಿಯಾನ್ವಿ) ಹಾಗೂ ಕಲಾಮಂದಿರದಲ್ಲಿ 'ಉಡಿಯೊಳಗಣ ಕಿಚ್ಚು'(ಕನ್ನಡ) ನಾಟಕಗಳು ಭರ್ತಿ ಪ್ರದರ್ಶನ ಕಂಡವು.

ಭೂಮಿಗೀತ: ಧರ್ಮನಿಷ್ಠ ತಾಯಿ ಮತ್ತು ಅಮೇರಿಕಾದಿಂದ ಹಿಂತಿರುಗಿದ ಅವಳ ಮಗನ ನಡುವಿನ ಭಿನ್ನಾಭಿಪ್ರಾಯಗಳ ಚಿತ್ರಣವನ್ನೊಳಗೊಂಡ 'ಬೈ2ಕಾಫಿ' ನಾಟಕ ಎರಡು ತಲೆಮಾರುಗಳ ನಡುವಿರುವ ಭಿನ್ನ ಆಲೋಚನೆಗಳು ಹಾಗೂ ಅವರಿಬ್ಬರೂ ಜೀವನವನ್ನು ಹೇಗೆ ಗ್ರಹಿಸುತ್ತಾರೆ ಎಂಬುದನ್ನು ಆಕರ್ಷಕ ಸಂಭಾಷಣೆ, ವಿಶಿಷ್ಟ ವಿನ್ಯಾಸದೊಂದಿಗೆ ರಂಗಪ್ರೇಕ್ಷಕರ ಹೃದಯ ಗೆದ್ದಿತು. ಅಭಿಷೇಕ್ ಅಯ್ಯಂಗಾರ್ ರಚನೆ ಹಾಗೂ ನಿರ್ದೇಶನದಲ್ಲಿ ಬೆಂಗಳೂರಿನ ವಿಮೂವ್ ಥಿಯೇಟರ್ ಕಲಾವಿದರ ಅಭಿನಯ ನೋಡುಗರಿಗೆ ಮನರಂಜನೆಯ ಜೊತೆಗೆ ಅಚಾರ–ವಿಚಾರಗಳ ಅರಿವನ್ನು ಮೂಡಿಸಿತು.

ಸಂಪತ್ ರಂಗಮಂದಿರ (ಕಿರುರಂಗ ಮಂದಿರ): ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಅಂಗವಾಗಿ ಸಂಪತ್ ರಂಗ ಮಂದಿರದಲ್ಲಿ ಸಾಹಿತಿ ಪೂರ್ಣಚಂದ್ರ ತೇಜಸ್ವಿ ರಚಿತ 2ನೇ ನಾಟಕ 'ತುಕ್ಕೋಜಿ' ಪ್ರದರ್ಶನಗೊಂಡಿತು. ಕೂಲಿ ಕಾರ್ಮಿಕರು ಜಗತ್ತಿನ ಬದಲಾವಣೆಯ ವೇಗಕ್ಕೆ ಹೊಂದಿಕೊಳ್ಳಲಾಗದೆ, ತಮ್ಮ ಕಸುಬು ಕಳೆದುಹೋಗುವುದೇನೊ ಎಂದು ಚಡಪಡಿಸುವುತ್ತಾ 'ರೈಲು–ಡ್ಯಾಮು ಕೇವಲ ನಮ್ಮ ಹಳ್ಳಿಗೆ ಮಾತ್ರ ಬಂದಿಲ್ಲ ನಮ್ಮ ಮೈ–ಮನಸ್ಸುಗಳ ಮಧ್ಯೆ ಹಾದು ಹೋಗುತ್ತಿದೆ' ಎಂಬ ನೋವಿನ ಮಾತುಗಳ ಕೇಳಿಬರುತ್ತವೆ.

ಹೆಚ್.ಸಿ.ರಮೇಶ್‌ಚಂದ್ ರಂಗರೂಪ, ವಾಲ್ಟರ್ ಡಿಸೋಜಾ ನಿರ್ದೇಶನ ಹಾಗೂ ಬೆಂಗಳೂರಿನ ಸ್ನೇಹರಂಗ ತಂಡದ ಕಲಾವಿದರಿಂದ ಮೂಡಿಬಂದ 'ತುಕ್ಕೋಜಿ' ನಾಟಕದ ಪ್ರತಿಯೊಂದು ಸನ್ನಿವೇಶವೂ ಪ್ರಸ್ತುತತೆಯನ್ನು ಅನಾವರಣಗೊಳಿಸಿತು. ಹಳ್ಳಿ ಸೊಗಡಿನ ಸಂಭಾಷಣೆ, ಸಂಗೀತ, ಬೆಳಕಿನ ವಿನ್ಯಾಸ ಆಕರ್ಷಣೀಯವಾಗಿತ್ತು.

ವನರಂಗ: ಮೂಲಭೂತ ಮಾನವನ ಪ್ರವೃತ್ತಿಗಳ ಅನಾವರಣಗೊಳಿಸಿದ 'ಭೋಡಾಸ್ ದೇ ಸಾಂಗ್ರೆ' ಹರಿಯಾನ್ವಿ ಭಾಷೆಯ ನಾಟಕ ರಂಗಾಯಣದ ವನರಂಗದಲ್ಲಿ ಪ್ರದರ್ಶನವಾಯಿತು. ನಿತಿನ್ ಶರ್ಮ ನಿರ್ದೇಶನದಲ್ಲಿ ಪಂಜಾಬ್‌ನ ಚಂಡೀಗಢದ ವಿಭಾವ ತಂಡದ ಕಲಾವಿದರ ಅಮೋಘ ಅಭಿಯಾನ ಬಯಕೆಗಳಿಂದಾಗಿ ಅವ್ಯವಸ್ಥೆ, ಹಿಂಸೆಯನ್ನು ತೆರೆದಿಟ್ಟಿತು.

ಕಲಾಮಂದಿರ: ಅನ್ಯಾಯಕ್ಕೊಳಗಾದ ಹೆಣ್ಣಿನ 'ಉಡಿಯೊಳಗಣ ಕಿಚ್ಚು' ಕಲಾಮಂದಿರದಲ್ಲಿ ಅನಾವರಣಗೊಂಡಿತು. ಕವಿ ಕಾಳಿದಾಸ ರಚಿತ 'ಅಭಿಜ್ಞಾನ ಶಾಕುಂತಲಾ' ಶೃಂಗಾರಮಯ ಕತೆಯಲ್ಲಿ ಶಾಕುಂತಲೆ ಕೇವಲ ದುಶ್ಯಂತನಿಂದ ಮಾತ್ರವಲ್ಲ ವಿದೂಷಕ, ದೂರ್ವಾಸ ಮುನಿಯಿಂದಲೂ ತಿರಸ್ಕರಿಸಲ್ಪಟ್ಟವಳಾದರೂ ಪ್ರತಿಭಟಿಸದೆ ತನ್ನೊಳಗೆಯೇ ನೋವಿನ ಕಿಚ್ಚನ್ನು ಹಿಡಿದಿಟ್ಟುಕೊಳ್ಳುತ್ತಾಳೆ. ಆದರೆ ಶಾಕುಂತಲೆಯ ಉಡಿಯೊಳಗೆ ಹತ್ತಿಕೊಂಡ ಕಿಚ್ಚು ವರ್ತಮಾನದಲ್ಲಿ ಜ್ವಾಲೆಯಾಗಿ ಪಸರಿಸುತ್ತದೆ ಎಂಬುದನ್ನು ಭಾವನಾತ್ಮಕವಾಗಿ ಪ್ರಸ್ತುತಪಡಿಸಲಾಯಿತು.

ಪ್ರಶಾಂತ್ ಉದ್ಯಾವರ ನಿರ್ದೇಶನ, ರಂಗಪಠ್ಯ ಹಾಗೂ ವಿನ್ಯಾಸ ನೋಡುಗರ ಮುಂದೆ ಶೃಂಗಾರಮಯ ಲೋಕವನ್ನೇ ಸೃಷ್ಟಿಸುತ್ತದೆ. ಮಂಗಳೂರು ನಂದ ಗೋಕುಲದ ಅರೆಹೊಳೆ ಪ್ರತಿಷ್ಠಾನದ ಕಲಾವಿದರ ಅಚ್ಚುಕಟ್ಟಾದ ಅಭಿನಯ ರಸಮಯ ಸನ್ನಿವೇಶಗಳಿಗೂ ಸಾಕ್ಷಿಯಾಯಿತು.

ನಾಟಕಗಳ ಭರ್ತಿ ಪ್ರದರ್ಶನ: ಮೂರು ದಿನಗಳಿಂದ ಸುರಿಯುತ್ತಿದ್ದ ಮಳೆ ಬಿಡುವು ನೀಡುತ್ತಿದ್ದಂತೆ ರಂಗಾಯಣದತ್ತ ಕಲಾಭಿಮಾನಿಗಳು ದೌಡಾಯಿಸಿ ಬರುತ್ತಿದ್ದು, ಮಂಗಳವಾರ ಎಲ್ಲಾ ನಾಟಕಗಳು ಭರ್ತಿ ಪ್ರದರ್ಶನಕಂಡವು. ಭೂಮಿಗೀತ, ಸಂಪತ್ ರಂಗಮಂದಿರ (ಕಿರುರಂಗ ಮಂದಿರ), ವನರಂಗ ಕಲಾಸಕ್ತರಿಂದ ಭರ್ತಿಯಾಗಿತ್ತು. ಭೂಮಿಗೀತ ಹಾಗೂ ಸಂಪತ್ ರಂಗ ಮಂದಿರ(ಕಿರುರಂಗಮಂದಿರ)ದ ಆಸನಗಳು ಸಂಪೂರ್ಣ ಭರ್ತಿಯಾಗಿ ಹಲವರು ನೆಲದ ಮೇಲೆ ಕುಳಿತು ನಾಟಕ ವೀಕ್ಷಣೆ ಮಾಡಿದರು.



'ಉಡಿಯೊಳಗಣ ಕಿಚ್ಚು' ನಾಟಕ ಕಲಾಮಂದಿರದಲ್ಲಿ ಪ್ರದರ್ಶನವಾಯಿತು

ನೆಲಕ್ಕುರುಳಿದ ದಿವಾನ್‌ಕಾಟ್...

ರಂಗಾಯಣದ ವನರಂಗದಲ್ಲಿ ಮಂಗಳವಾರ 'ಭೋಡಾಸ್ ದೇ ಸಾಂಗ್ರೆ' ಹರಿಯಾನ್ವಿ ಭಾಷೆಯ ನಾಟಕ ಪ್ರದರ್ಶನದ ವೇಳೆ ವೇದಿಕೆ ವಿನ್ಯಾಸಕ್ಕಾಗಿ ನಿಲ್ಲಿಸಿದ್ದ ದಿವಾನ್‌ಕಾಟ್(ಚಿಕ್ಕ ಮಂಚ) ಕಲಾವಿದರ ಹತ್ತಿರವೇ ರಪ್ ಎಂದು ನೆಲಕ್ಕುರುಳಿತು. ಅಕಸ್ಮಾತ್ ಕಲಾವಿದರ ಮೇಲೆಯೇ ಬಿದ್ದಿದ್ದರೆ ದೊಡ್ಡ ಅನಾಹುತವೇ ನಡೆದುಹೋಗುತ್ತಿತ್ತು. ಅದೃಷ್ಟವಶಾತ್ ಯಾವುದೇ ತೊಂದರೆಯಾಗಲಿಲ್ಲ. ದಿವಾನ್ ಕಾಟ್ ಹತ್ತಿರದಲ್ಲೇ ನೆಲಕ್ಕುರುಳಿದ್ದನ್ನು ಕಂಡ ಅಭಿನಯ ನಿರತ ಕಲಾವಿದರು ಗಾಬರಿಯಾಗದೆ ಅದ್ಭುತ ಪ್ರದರ್ಶನ ನೀಡಿದರು.

ಧರೆಗೆ ದೊಡ್ಡವರ ಸ್ಮರಣೆ...



ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಖ್ಯಾತ ಜಾನಪದ ಗಾಯಕ ಡಾ.ಮಳವಳ್ಳಿ ಮಹದೇವಸ್ವಾಮಿ ಮತ್ತು ತಂಡದವರಿಂದ ಧರೆಗೆ ದೊಡ್ಡವರಾದ ಮಂಟೇಸ್ವಾಮಿ, ಸಿದ್ದಪ್ಪಾಜಿ ಸ್ಮರಣೆ ನಡೆಯಿತು.

'ಗಜಮುಖನೇ ಶ್ರೀ ಗಣನಾಥ' ಹಾಡಿನೊಂದಿಗೆ ಧರೆಗೆ ದೊಡ್ಡವರ ಪವಾಡಗಳನ್ನು ಹಾಡಿನ ಮೂಲಕ ತಿಳಿಸಿಕೊಡಲಾಯಿತು. ಅನುಭವ ಮಂಟಪ ಕಟ್ಟಿದ ಬಸವಣ್ಣನ ಗುಣಗಾನ, ಶರಣರ ಪಯಣ, ಧರೆಗೆ ದೊಡ್ಡವರು ನುಡಿದಂತೆ ಕಲಿಯುಗದಲ್ಲಿ ನಡೆಯುವ ವಾಸ್ತವಾಂಶಗಳ ಬಗ್ಗೆ ಸುಶ್ರಾವ್ಯವಾಗಿ ಹಾಡಿ ಅಪಾರ ಮೆಚ್ಚುಗೆ ಪಡೆದರು. ಅವರೊಂದಿಗೆ ಗಾಯಕರಾದ ತಗ್ಗಳ್ಳಿ ಎಸ್.ಮಹದೇವ, ಕೊಳತೂರು ನಂಜುಂಡಸ್ವಾಮಿ, ನಂಜರಾಜಪುರ ಮಹೇಶ್ ಹಾಗೂ ದೊಡ್ಡಮೊಳೆ ಮಂಜು ಉತ್ತಮ ಸಹಕಾರ ನೀಡಿದರು.

ಡಾ.ಮಳವಳ್ಳಿ ಮಹದೇವಸ್ವಾಮಿಯವರ ಜಾನಪದ ಆರಂಭವಾಗುತ್ತಿದ್ದಂತೆ ಅಪಾರ ಸಂಖ್ಯೆಯಲ್ಲಿ ಆಗಮಿಸಿದ ಸಂಗೀತ ಪ್ರಿಯರನು ಜಾನಪದ ಹಾಡುಗಳ ಆಲಿಸಿ ಸಂಭ್ರಮಿಸಿದರಲ್ಲದೆ ಧರೆಗೆ ದೊಡ್ಡವರ ಪವಾಡಗಳನ್ನು ಅರಿತುಕೊಂಡರು. ಈ ನಡುವೆ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದರು. ಹಲವರು ಕುಳಿತುಕೊಳ್ಳಲು ಸ್ಥಳವಿಲ್ಲದೆ ನಿಂತುಕೊಂಡು ವೀಕ್ಷಣೆ ಮಾಡುತಿದ್ದ ದೃಶ್ಯಗಳ ಸಾಮಾನ್ಯವಾಗಿತ್ತು.

ಗಜ್ಜಲ್ ನೃತ್ಯ: ದಕ್ಷಿಣ ಕನ್ನಡದ ಮಂಜುನಾಥ್ ಮತ್ತು ತಂಡದವರ ಕಂಗೀಲು ನೃತ್ಯದ ಜೊತೆಗೆ ಮೈಸೂರಿನ ಶಾಂತಲಾ ವಟ್ಟಂ ತಂಡದ ಗಜ್ಜಲ್ ನೃತ್ಯ ಸೊಗಸಾಗಿತ್ತು. ಕೇರಳ, ತಮಿಳುನಾಡು, ಬಿಹಾರ, ಉತ್ತರ ಪ್ರದೇಶ ಸೇರಿದಂತೆ ಹಲವು ರಾಜ್ಯಗಳ ಜಾನಪದ ನೃತ್ಯ ಪ್ರದರ್ಶನ ನೀಡಿದ ಶಾಂತಲಾ ವಟ್ಟಂ ತಂಡದ ವನಿತೆಯರು, ತಮ್ಮ ಮನೋಜ್ಞ ನೃತ್ಯದ ಮೂಲಕ ವಿವಿಧತೆಯಲ್ಲಿ ಏಕತೆ ಸಾರಿದರು.

ಟಿಪ್ಪು ನಾಟಕಕ್ಕೆ ಒಂದು ಟಿಕೆಟ್ ಸಿಗಬಹುದೇ ಪ್ಲೀಸ್...!

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ನಿರ್ದೇಶನದ 'ಟಿಪ್ಪು ನಿಜಕನಸುಗಳು' ನಾಟಕ ವೀಕ್ಷಣೆಗೆ ಭಾರೀ ಡಿಮ್ಯಾಂಡ್ ಆಗಿದ್ದು, ಟಿಪ್ಪು ಒಂದು ಟಿಕೆಟ್ ಸಿಗಬಹುದೇ ಪ್ಲೀಸ್ ಇದ್ದರೆ ಕೊಡಿ ಎನ್ನುವವರ ಸಂಖ್ಯೆ ಹೆಚ್ಚಾಗಿದೆ.



ಅಭಿಮಾನಿಗಳ ಒತ್ತಾಯಕ್ಕೆ ಬಹುರೂಪಿ ರಂಗೋತ್ಸವದ ಮುಕ್ತಾಯದ ಬಳಿಕ ಅಂದರೆ ಡಿ.17 ಮತ್ತು 18 ರಂದು 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನ ಏರ್ಪಡಿಸಿದೆ. ಆದರೆ ಎರಡೂ ಪ್ರದರ್ಶನದ ಸಂಪೂರ್ಣ ಟಿಕೆಟ್‌ಗಳು ಈಗಾಗಲೇ ಮಾರಾಟವಾಗಿದ್ದು, ಟಿಕೆಟ್ ಸಿಗದಿದ್ದವರು ನಾಟಕ ನಿರ್ದೇಶಕರ ಹಿಂದೆ ಬಿದ್ದಿದ್ದಾರೆ.

ಕಳೆದ 3 ದಿನಗಳಿಂದ ಹಲವರು 'ಟಿಪ್ಪು ನಿಜಕನಸುಗಳು' ನಾಟಕ ನೋಡಬೇಕು ನಿಮ್ಮ ಬಳಿ ಟಿಕೆಟ್ ಇದ್ದರೆ ಕೊಡಿ ಎಂದು ಕೇಳುತ್ತಿರುವ ದೃಶ್ಯಗಳು ಸಾಮಾನ್ಯವಾಗಿವೆ. ಸಾಕಷ್ಟು ಕುತೂಹಲ ಮೂಡಿಸಿರುವ ನಾಟಕವನ್ನು ನೋಡಲೇಬೇಕು. ಸಾಧ್ಯವಾದರೆ ಡಿ.18ರ ನಂತರ ಮತ್ತೆ ಪ್ರದರ್ಶನ ಆಯೋಜಿಸಿ ಎಂದು ಮನವಿ ಮಾಡುತ್ತಿದ್ದಾರೆ. ನಾಟಕವನ್ನು ಒಮ್ಮೆ ನೋಡಬೇಕು. ನಿಜವಾದ ಇತಿಹಾಸ ಏನೆಂಬುದನ್ನು ಅರಿಯಬೇಕು ಎಂದು 'ಟಿಪ್ಪು ನಿಜಕನಸುಗಳು' ನಾಟಕ ಕೃತಿಯನ್ನು ಕೊಂಡುಕೊಳ್ಳಲು ಬಂದ ಮೈಸೂರಿನ ರಾಘವೇಂದ್ರನಗರದ ನಿವಾಸಿಗಳಾದ ಸರ್ವಮಂಗಳ ಹಾಗೂ ಪಾರ್ವತಮ್ಮ ಮೊನ್ನಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ತಿಂಡಿ–ತಿನಿಸುಗಳಿಗೆ ಮುಗಿಬಿದ್ದ ಜನ...



ಇಷ್ಟದ ನಾಟಕಗಳ ವೀಕ್ಷಣೆ ಜೊತೆಗೆ ತಿಂಡಿ–ತಿನಿಸುಗಳ ಮಳಿಗೆಯತ್ತಾ ಜನರು ಮುಗಿಬಿದ್ದಿದ್ದಾರೆ. ಮಳೆ ಬಿಡುವು ನೀಡಿದ ಬೆನ್ನಲ್ಲೇ ಬಹುರೂಪಿಗೆ ಆಗಮಿಸುತ್ತಿರುವ ನೂರಾರು ಮಂದಿ ರಂಗ ಪ್ರೇಮಿಗಳು ರುಚಿ ಸವಿಯಲು ಮುಂದಾಗಿದ್ದಾರೆ.

ಜೋಳದ ರೊಟ್ಟಿ, ಎಣ್ಣೆಗಾಯಿ ಪಲ್ಯ, ಗಿರ್ಮಿಟ್, ಬಜ್ಜಿ, ಬೊಂಡಾ, ಕಜ್ಜಾಯ, ದೊಡ್ಡ ಗಾತ್ರದ ಚಕ್ಲಿ, ನಿಪ್ಪಟ್ಟು, ಮೇಲುಕೋಟೆ ಪುಳಿಯೋಗರೆ, ಆಲೂ ಪರೋಟ, ಬೆಣ್ಣೆದೋಸೆ, ಪಾನಿಪುರಿ ಸೇರಿದಂತೆ ಹತ್ತು–ಹಲವು ಬಗೆಯ ತಿಂಡಿ–ತಿನಿಸುಗಳನ್ನು ಸವಿಯಲು ಮುಗಿಬೀಳುತ್ತಿದ್ದಾರೆ. ಮಳೆಯಿಂದಾಗಿ ಕಳೆದ 3 ದಿನಗಳು ಭಣಗುಡುತ್ತಿದ್ದ ರಂಗಾಯಣದ ಆವರಣದಲ್ಲಿ ಜನಜಂಗುಳಿ ಹೆಚ್ಚಾಗಿದ್ದು, ಹಬ್ಬದ ವಾತಾವರಣ ಕಳೆಗಟ್ಟಿದೆ.

ನಕ್ಕರೆ ಅದೇ ಸ್ವರ್ಗ

ಅಪ್ಸರೆ : (ಸ್ವರ್ಗದ ಬಾಗಿಲು ತಟ್ಟಿದಾಗ ಬಾಗಿಲು ತೆರೆದು ಮುಗುಳ್ನಕ್ಕು) ಇಷ್ಟು ಬೇಗ ಹೇಗೆ ಬಂದ್ರಿ ಸ್ವರ್ಗಕ್ಕೆ?

ಆತ : ನಮ್ಮ ಡಾಕ್ಟ್ರು ಕಳುಹಿಸಿಕೊಟ್ರು!

ಮೈಸೂರು ಮಿತ್ರ

ಬುಧವಾರ, 14 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಕೃತಿ ಕೆಟ್ಟದಿದ್ದು, ಮನಸ್ಸು ಕೆಡುಕು ಬಯಸುತ್ತಿದ್ದು – ಸಜ್ಜನರಂತೆ ಮುಖವಾಡ ಧರಿಸುತ್ತಿರುವವರ ಜನರ ಬಗ್ಗೆ ಎಚ್ಚರದಿಂದಿರಬೇಕು. –ದ.ರಾ. ಬೇಂದ್ರೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹತ್ತೋಕೆ ಮೊದಲು ಕುದುರೆ ನೋಡು, ಬಿತ್ತೋಕೆ ಮೊದಲು ಹೊಲ ನೋಡು

ನಿಮ್ಮ ಪತ್ರಗಳು

ಎಲ್ಲಿದೆ ಸಾಮಾಜಿಕ ನ್ಯಾಯ, ಮಾಜಿ ಸಚಿವರೆ?

ಮಾನ್ಯರೆ,

ಮುಂದೆ ಎದುರಾಗಲಿರುವ 2023ರ ವಿಧಾನಸಭೆ ಚುನಾವಣೆಯ ಬಿಸಿ ರಾಜ್ಯದಲ್ಲಿ ಕಾವೇರಿದಂತೆ ಕಾಣುತ್ತಿದೆ. ಇತ್ತ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರವಾದ ನಂಜನಗೂಡಿನಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ರಾಷ್ಟ್ರೀಯ ಪಕ್ಷದ ನಾಯಕರು ಚುನಾವಣಾ ಪ್ರಚಾರದಲ್ಲಿ ತೊಡಗಿದ್ದಾರೆ. ಬಿಜೆಪಿಯಿಂದ ಹಾಲಿ ಶಾಸಕ ಬಿ. ಹರ್ಷವರ್ಧನ್‌ಗೆ ಟಿಕೆಟ್ ಸಿಗುವುದು ಬಹುತೇಕ ಖಚಿತ. ಇತ್ತ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಕೆಪಿಸಿಸಿ ಕಾರ್ಯದರ್ಶಿ ಆರ್.ಧ್ರುವನಾರಾಯಣ್ ಹಾಗೂ ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಕಾಂಗ್ರೆಸ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಎಚ್.ಸಿ.ಮಹದೇವಪ್ಪನವರು ಟಿ.ನರಸೀಪುರ ಮೀಸಲು ಕ್ಷೇತ್ರದಿಂದ 5 ಬಾರಿ ಗೆದ್ದು ಶಾಸಕರಾಗಿದ್ದಾರೆ ಮತ್ತು ಸಚಿವರು ಕೂಡ ಆಗಿದ್ದಾರೆ. ಆದರೆ ಬದಲಾದ ರಾಜಕೀಯ ಸನ್ನಿವೇಶ ಮತ್ತು ಕಾರಣಾಂತರಗಳಿಂದ 2018ರ ಚುನಾವಣೆಯಲ್ಲಿ ಇದೇ ಕ್ಷೇತ್ರದಿಂದ ಸೋತದ್ದು ರಾಜಕೀಯ ಇತಿಹಾಸ. ಪ್ರಸ್ತುತ ತಮ್ಮ ಮಗ ಸುನೀಲ್ ಬೋಸ್‌ಗೆ ರಾಜಕೀಯ ಭವಿಷ್ಯ ಕಲ್ಪಿಸಿಕೊಡುವ ಮಹದಾಶೆಯಿಂದ ಸ್ವಕ್ಷೇತ್ರ ಮಗನಿಗೆ ತ್ಯಾಗ ಮಾಡಿ ತಾವು ಪಕ್ಕದ ಇನ್ನೊಂದು ಮೀಸಲು ಕ್ಷೇತ್ರವಾದ ನಂಜನಗೂಡಲ್ಲಿ ಸ್ಪರ್ಧಿಸಲು ಕಾಂಗ್ರೆಸ್‌ನಿಂದ ಟಿಕೆಟ್ ಕೇಳುತ್ತಿದ್ದಾರೆ. ಸಾಮಾಜಿಕ ನ್ಯಾಯದ ಬಗ್ಗೆ ಉದ್ದುದ್ದ ಭಾಷಣಗಳನ್ನು ಬಿಗಿಯುವ ಮಹದೇವಪ್ಪನವರೇ ಮಗನಿಗೊಂದು ಮೀಸಲು ಕ್ಷೇತ್ರ, ಅಪ್ಪನಿಗೊಂದು ಮೀಸಲು ಕ್ಷೇತ್ರ ಕೇಳುತ್ತಿರುವುದರಲ್ಲಿ ಎಲ್ಲಿದೆ ಸಾಮಾಜಿಕ ನ್ಯಾಯ.

ಕೊಟ್ಟ ಕುದುರೆಯನ್ನು ಏರಲಾಗದವನು ವೀರನು ಅಲ್ಲ, ಶೂರನೂ ಅಲ್ಲ ಎಂಬ ಮಾತಿನಂತೆ 2018ರಲ್ಲಿ ಸ್ವಕ್ಷೇತ್ರವನ್ನೇ ಗೆಲ್ಲಲಾಗದ ನೀವು ನಂಜನಗೂಡು ಕ್ಷೇತ್ರದ ಟಿಕೆಟ್ ಕೇಳುತ್ತಿರುವುದು ಎಷ್ಟು ಸಮಂಜಸ. ಕಳೆದ ಚುನಾವಣೆಯಲ್ಲಿ ಸೋತಿರುವ ಕಳಲೆ ಕೇಶವಮೂರ್ತಿ ಕ್ಷೇತ್ರದಲ್ಲಿ ತಳಮಟ್ಟದಿಂದ ಪಕ್ಷ ಸಂಘಟನೆಯಲ್ಲಿ ತೊಡಗಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ಸೋತ ಧ್ರುವನಾರಾಯಣ್ ಮರುದಿನವೇ ಕ್ಷೇತ್ರದಲ್ಲಿ ಪಕ್ಷದ ಹೊಣೆ ಹೊತ್ತು ಕ್ರಿಯಾಶೀಲರಾಗಿದ್ದಾರೆ. ಇಂತಹ ಸಮರ್ಥ ನಾಯಕರು ಕ್ಷೇತ್ರದಲ್ಲಿ ಇರುವಾಗ ನೀವು ಯಾವ ಆಧಾರದ ಮೇಲೆ ಟಿಕೆಟ್ ಕೇಳುತ್ತಿದ್ದೀರಾ. ಚಾಮರಾಜನಗರ–ಮೈಸೂರು ಲೋಕಸಭಾ ವ್ಯಾಪ್ತಿಗೆ ಬರುವ ನಂಜನಗೂಡು, ಟಿ.ನರಸೀಪುರ ಎರಡೂ ಪ್ರಮುಖ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದ ಟಿಕೆಟ್‌ಗಳನ್ನು ತಮ್ಮ ಕುಟುಂಬಕ್ಕೆ ಬೇಡಿಕೆ ಇಟ್ಟಿರುವ ನೀವು ತಮ್ಮದೇ ಸಮುದಾಯದ ಇತರೆ ಸಮರ್ಥ ನಾಯಕರಿಗೆ ಮಾಡುತ್ತಿರುವ ಅನ್ಯಾಯ.

–ರಮೇಶ್ ಮೌರ್ಯ, ಹೆಡಿಯಾಲ, ನಂಜನಗೂಡು ತಾ||

ವಿದ್ಯಾರ್ಥಿವೇತನ ನಿಲ್ಲಿಸದಂತೆ ಮನವಿ

ಮಾನ್ಯರೆ,

ಪ್ರತಿಯೊಂದು ದೇಶದ ಅಭಿವೃದ್ಧಿ ಅಲ್ಲಿನ ಶಿಕ್ಷಣ ವ್ಯವಸ್ಥೆಯ ಮೇಲಿದೆ. ಶಿಕ್ಷಣದಿಂದ ಮಾತ್ರ ದೇಶದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಉದ್ಯೋಗಗಳು, ಜ್ಞಾನ, ಮಹಿಳಾ ಸಬಲೀಕರಣ, ಪರಿಸರ ಸಂರಕ್ಷಣೆ, ಸಂಶೋಧನೆಗಳು, ನಾಡು – ನುಡಿಯ ಸಂಸ್ಕೃತಿಯನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳ ಅಭಿವೃದ್ಧಿ ಸಾಧ್ಯವಾಗುವುದು. ಆದ್ದರಿಂದ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ತುಂಬಾ ಮುಖ್ಯ. ಅದರಲ್ಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳು ಸೇರಿದಂತೆ ಬಡ ಮಕ್ಕಳಿಗೂ ವಿದ್ಯಾರ್ಥಿವೇತನ ನೀಡಲಾಗುತ್ತಿತ್ತು. ಆದರೆ ಈಗಿನ ಸರ್ಕಾರ ವಿದ್ಯಾರ್ಥಿವೇತನ ನಿಲ್ಲಿಸುವುದರ ಮೂಲಕ ವಿದ್ಯಾರ್ಥಿ ಮತ್ತು ಬಡ ಮಕ್ಕಳಿಗೆ ಮೋಸ ಮಾಡುತ್ತಿದೆ. ಅದನ್ನು ತಡೆ ಹಿಡಿಯುವುದರಿಂದ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಕೂಡಲೇ ಈ ಆದೇಶವನ್ನು ಹಿಂಪಡೆದು ವಿದ್ಯಾರ್ಥಿವೇತನ ನೀಡುವುದರ ಮೂಲಕ ಸಹಾಯ ಮಾಡಬೇಕು ಎಂದು ಮನವಿ.

–ಚೈತ್ರ. ಎಂ, ಮಹಾರಾಜ ಕಾಲೇಜು, ಮೈಸೂರು

ಆನ್‌ಲೈನ್‌ನಲ್ಲಿ ನೀರಿನ ಬಿಲ್ಲು ಕಟ್ಟಲು ಅವಕಾಶ ಕಲ್ಪಿಸಿ

ಮಾನ್ಯರೆ,

ಮೈಸೂರಲ್ಲಿ ಗ್ರಾಹಕರು ನೀರಿನ ಬಿಲ್ಲನ್ನು ಕ್ರಮವಾಗಿ ಕಟ್ಟದೇ ಇರುವುದರಿಂದ ಮೊಬಲಗು ಕೋಟ್ಯಂತರ ರೂ. ಬಾಕಿ ಉಳಿದುಕೊಂಡಿದೆ ಎಂದು ಪಾಲಿಕೆಯ ಅಧಿಕಾರಿಗಳು ಹೇಳಿಕೆ ನೀಡಿರುವ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದಕ್ಕೆ ಗ್ರಾಹಕರು ಎಷ್ಟು ಹೊಣೆಯೋ ಪಾಲಿಕೆಯವರೂ ಮತ್ತು ಅಧಿಕಾರಿಗಳೂ ಅಷ್ಟೇ ಹೊಣೆ. ಬಾಕಿ ಉಳಿಸಿಕೊಂಡಿರುವ ಗ್ರಾಹಕರ ನೀರು ಸರಬರಾಜು ಕಡಿತಗೊಳಿಸಲು ಏನು ಕಷ್ಟ. ಇದರಲ್ಲಿ ದೊಡ್ಡ ದೊಡ್ಡ ಕುಳಗಳೇ ಇರುವುದರಿಂದಲೋ ಏನೋ ನೇರ ಕ್ರಮ ಕೈಗೊಳ್ಳಲು ಹಿಂಜರಿಯಬಹುದು. ನೇರ ಕಠಿಣ ಕ್ರಮ ಜರುಗಿಸಿ, ಬಾಕಿ ವಸೂಲಿ ಮಾಡಲಿ.

ಪತ್ರಿಕೆಗಳಲ್ಲಿ ಬರುವ ಟೀಕೆ ಸಲಹೆಗಳನ್ನು ಓದಿ ಕ್ರಮ ಜರುಗಿಸುವ ಪದ್ಧತಿ ಇಲ್ಲವೆಂದೇ ಭಾವನೆ. ನೀರಿನ ಬಿಲ್ಲನ್ನು ಆನ್‌ಲೈನ್‌ನಲ್ಲಿ ಪಾವತಿ ಮಾಡುವ ಅನುಕೂಲತೆ ತಪ್ಪಿ ಆರು ತಿಂಗಳೇ ಆಯಿತು. ಅದನ್ನು ಇನ್ನೂ ಸರಿಪಡಿಸಿಲ್ಲ. ಜನಗಳು ಶುಲ್ಕ ಉಳಿಸಿಕೊಳ್ಳಲು ಅದೂ ಒಂದು ಕಾರಣ. ಮೇಯರ್ ಮತ್ತು ಆಯುಕ್ತರು ಪತ್ರಿಕೆಗಳಲ್ಲಿ ಬರುವ ಸಲಹೆ, ಮನವಿಗಳನ್ನು ಗಮನಿಸಬೇಕಾಗಿ ವಿನಂತಿ. ಬಿಲ್ಲನ್ನು ಹಿಂದಿನಂತೆಯೇ ಆನ್‌ಲೈನ್‌ನಲ್ಲಿ ಪಾವತಿ ಮಾಡಲು ಅನುವು ಮಾಡಿಕೊಡಲಿ.

– ಎ.ಎನ್. ವೆಂಕಟೇಶ್, ಮೈಸೂರು.

ಕರ್ಮ(ಕಾಂಡ)!

ಮಾನ್ಯರೆ,

ಹಿಂದೆ ಮಾಡಿದ ಪಾಪದ ಫಲ ಎಂಬರ್ಥದಲ್ಲಿ 'ಕರ್ಮ' ಶಬ್ದದ ಬಳಕೆ ರೂಢಿಯಲ್ಲಿದೆ! ('ಅವನ/ಅವಳ ಕರ್ಮ'). ಆದರೆ ಪುಣ್ಯದ ಫಲವೂ 'ಕರ್ಮವೆ' ಅಲ್ಲವೆ? ಐಶ್ವರ್ಯವನ್ನೊ ಪದವಿಯನ್ನೊ ನಾವು ಆ ಅರ್ಥದಲ್ಲಿ ಬಳಸುವುದಿಲ್ಲ ! ಅಂತೂ 'ಕರ್ಮ'ದಲ್ಲಿ (ದುಃಖ ಕಾರಣವಾದ) ದುಷ್ಕರ್ಮ, (ಸುಖ ಕಾರಣವಾದ) ಸತ್ಕರ್ಮ ಎಂದು ಎರಡು ಬಗೆ. ದುಷ್ಕರ್ಮ ಫಲವನ್ನು ಮಾತ್ರ 'ಕರ್ಮ' ಎನ್ನುವುದೇಕೆ?


'ತುಂಡಾಯನ'!

ಈಗ ಪತ್ನಿ (ಪ್ರೇಯಸಿ)ಯನ್ನೋ ಪತಿಯನ್ನೊ ಕೊಂದು ತುಂಡು ತುಂಡಾಗಿ ಕತ್ತರಿಸುವುದು ಆಶ್ಚರ್ಯವಲ್ಲ. ಆದರೆ ಕುತೂಹಲದ ಸಂಗತಿಯೆಂದರೆ, ಎಷ್ಟು ತುಂಡು ಎನ್ನುವುದು! (ಖಚಿತ ಸಾಕ್ಷಿ, ಫ್ರಿಡ್ಜ್). ಪೊಲೀಸರು ಒಂದು ಕಣ್ಣಿಟ್ಟಿರಬೇಕು, ಫ್ರಿಡ್ಜ್ ಕೊಳ್ಳುವವರ ಮೇಲೆ!

ನವ ರಾಮಾಯಣ

ರಾವಣನಿಗೆ ನೂರು ತಲೆ ಎಂಬರ್ಥದಲ್ಲಿ ಮಲ್ಲಿಕಾರ್ಜುನ ಖರ್ಗೆ ಎಲ್ಲೋ ಮಾತನಾಡಿದರಂತೆ. ಇದು ಖರ್ಗೆಯವರ ನೂತನ ರಾಮಾಯಣ ದರ್ಶನ ! (ಹಾಗೆಯೇ ಅವರದೊಂದು 'ನವಭಾರತ'ವೂ ಇದ್ದೀತು!) ವಾಸ್ತವವಾಗಿ, ದಶಕಂಠನಲ್ಲವೆ ರಾವಣ? (ಸದ್ಯ ಅವನನ್ನು ಶ್ರೀಕಂಠ ಎನ್ನಲಿಲ್ಲವಲ್ಲ!)

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಭವಿಷ್ಯದಲ್ಲಿ ಭಾರತೀಯ ಸಂಸ್ಕೃತಿ

ಪ್ರತಿಯೊಂದು ಸಂಸ್ಕೃತಿಗೂ ಭೂತ–ವರ್ತಮಾನ–ಭವಿಷ್ಯತ್ತುಗಳು ಇರುತ್ತವೆ. ಸಂಸ್ಕೃತಿ ಜೀವನವನ್ನು ಸುಂದರಗೊಳಿಸುವ ವಿಧಾನ. ಚೆನ್ನಾಗಿ, ಸುಂದರವಾಗಿ, ಸಕಲರ ಹಿತವನ್ನು ಸಾಧಿಸುವ ಹಾಗೆ ಬಾಳುವ ಜನರನ್ನು ಸುಸಂಸ್ಕೃತರು ಎನ್ನುತ್ತೇವೆ. ಮತಧರ್ಮಕ್ಕೂ ಸಂಸ್ಕೃತಿಗೂ ನಂಟೂ ಇಲ್ಲ, ವಿರೋಧವೂ ಇಲ್ಲ. ಯಾವ ಧರ್ಮವನ್ನೇ ಅನುಸರಿಸುತ್ತಿದ್ದರೂ ಅವರು ಸುಸಂಸ್ಕೃತರಾಗಿರುವುದು ಸಾಧ್ಯ. ನಾಗರಿಕತೆಗೂ ಸಂಸ್ಕೃತಿಗೂ ವ್ಯತ್ಯಾಸವಿದೆ. ಉಡುಪಿನಲ್ಲಿ, ಆಭರಣಗಳಲ್ಲಿ, ಮಾತಿನಲ್ಲಿ ಒಬ್ಬನು ನಾಗರಿಕನಾಗಿರಬಹುದು. ಅಷ್ಟರಿಂದಲೇ ಆತನು ಸುಸಂಸ್ಕೃತನೆಂದು ಹೇಳಲಾಗದು. ನಾಗರಿಕತೆ ಬಾಹ್ಯ ಲಕ್ಷಣಗಳಿಂದ ತಿಳಿಯಬಹುದಾದ ವಿಷಯವಾದರೆ, ಸಂಸ್ಕೃತಿ ಆಂತರ್ಯದ, ಎಂದರೆ ಒಳಗಿನ ಗುಣಗಳಿಂದ ಅರಿತುಕೊಳ್ಳ ಬೇಕಾದುದಾಗಿರುತ್ತದೆ.

ಸಂಸ್ಕೃತಿಯ ಅಭಿವ್ಯಕ್ತಿಯ ಸಾಧನೆಗಳು ಕಲೆ, ಸಾಹಿತ್ಯ, ಸಂಸ್ಕಾರಗಳು. ಒಂದು ದೇಶ ವಿಜ್ಞಾನದಲ್ಲಿ, ಸೈನ್ಯ ಶಕ್ತಿಯಲ್ಲಿ, ಸಂಪತ್ತಿನ ಅಭಿವೃದ್ಧಿಯಲ್ಲಿ ಮುಂದೆ ಇರಬಹುದು. ಆದರೆ ಅದು ಸಂಗೀತ, ನೃತ್ಯ, ನಾಟಕ, ಶಿಲ್ಪಗಳಲ್ಲಿ ಯಾವ ಸಾಧನೆಯನ್ನೂ ಮಾಡದಿದ್ದರೆ ಸಾಂಸ್ಕೃತಿಕವಾಗಿ ಮುಂದುವರಿದಿದೆ ಎಂದು ಹೇಳಲಾಗದು. ಇದೇ ರೀತಿಯಾಗಿ ಯಾವನೋ ಒಬ್ಬನು ಹೇರಳವಾಗಿ ಹಣವನ್ನು ಗಳಿಸಿರಬಹುದು, ದೊಡ್ಡ ಅಧಿಕಾರದಲ್ಲಿರಬಹುದು ಅಥವಾ ಬೃಹತ್ತಾದ ಉದ್ಯಮವನ್ನು ನಡೆಸುತ್ತಿರಬಹುದು. ಆದರೆ ಸಾಹಿತ್ಯ ಸಂಗೀತಾದಿ ಕಲಾವಿಹೀನನಾದರೆ, ವಿದ್ಯೆಯನ್ನು ಗುರುತಿಸಲು ಅಶಕ್ತನಾದರೆ, ನಡೆ ನುಡಿಗಳಲ್ಲಿ ಆವಶ್ಯಕ ಸಂಸ್ಕಾರವನ್ನು ಪಡೆಯದಿದ್ದರೆ, ಅವನನ್ನು ಸುಸಂಸ್ಕೃತನೆಂದು ಕರೆಯುವುದು ಹೇಗೆ?

ಭಾರತೀಯ ಸಂಸ್ಕೃತಿ

ಭಾರತ ದೇಶದಲ್ಲಿ ಎಲ್ಲಾ ಕಲೆಗಳೂ ಪ್ರಾಚೀನತೆಯಕಾಲದಲ್ಲೇ ಹುಟ್ಟಿ ಅರಳಿದುವು, ವಿಕಾಸವನ್ನು ಹೊಂದಿದುವು. ವೇದಗಳ ಕಾಲದಲ್ಲೇ ಸಂಗೀತದ ಪ್ರಾದುರ್ಭಾವವಾಗಿತ್ತು. ಸಂಪೂರ್ಣ ಸಾಮವೇದವೇ ಸಂಗೀತ ಸರಸ್ವತಿಯ ವೈಭವ. ಅದು ಮುಂದೆ ಸಂಗೀತ ಶಾಸ್ತ್ರವಾಗಿ ಸಮಸ್ತ ಜಗತ್ತನ್ನೂ ಒಳಗೊಂಡು ರಾಗತರಂಗಗಳಲ್ಲಿ ಮುಳುಗಿಸಿ ತೇಲಿಸಿತು. ಬೇರೆ ದೇಶಗಳ, ಸಂಸ್ಕೃತಿಗಳ ಒಳ್ಳೆಯ ಅಂಶಗಳನ್ನು ಸ್ವೀಕರಿಸಿ ಬೃಹತ್ತಾಗಿ ಬೆಳೆಯಿತು. ಪುರಂದರದಾಸ, ತ್ಯಾಗರಾಜ, ಮುತ್ತು ಸ್ವಾಮಿ ದೀಕ್ಷಿತರಂತಹ ವಾಗ್ಗೇಯಕಾರರನ್ನು ಸೃಷ್ಟಿಸಿತು.

ನೃತ್ಯದಲ್ಲಂತೂ ನಮ್ಮ ಆರಾಧ್ಯ ದೈವಗಳಾದ ಶಿವ, ವಿಷ್ಣು ಮುಂತಾದವರು ನೃತ್ಯಪಟುಗಳು. ಶಿವನು ತಾಂಡವ ನೃತ್ಯದ ಆದಿಗುರುವಾಗಿ ನಟರಾಜ ಎಂಬ ಅಭಿಧಾನಕ್ಕೆ ಪಾತ್ರನಾಗಿದ್ದಾನೆ. ಅವನ ಅರ್ಧಾಂಗಿ ಪಾರ್ವತಿ ಲಾಸ್ಯ ನೃತ್ಯದ ಅಧಿದೇವತೆಯಾಗಿ ವಿರಾಜಿಸಿದ್ದಾಳೆ. ಭರತಮುನಿಯ ನಾಟ್ಯಶಾಸ್ತ್ರ ಕಲೆಗಳ ವಿಶ್ವ ಕೋಶದಂತೆ ವಿಶ್ವಮಾನ್ಯವಾಗಿದೆ. ಎಷ್ಟೊಂದು ವೈವಿಧ್ಯ ಭಾರತದ ನೃತ್ಯದಲ್ಲಿ? ಭರತನಾಟ್ಯ, ಕಥಕ್, ಕುಚಿಪುಡಿ, ಮೋಹಿನಿ ಆಟ್ಟಂ ಇತ್ಯಾದಿ. ಇವು 'ಮಾರ್ಗ' ಪದ್ಧತಿಯ ವಿಧಗಳಾದರೆ, ದೇಶ ಪದ್ಧತಿಯ ಸೊಗಡಿಗೂ ನಮ್ಮಲ್ಲಿ ಕೊರತೆಯಿಲ್ಲ. ಒಂದೊಂದು ರಾಜ್ಯದಲ್ಲೂ ಒಂದೊಂದು ಪ್ರಕಾರದ ದೇಶಿ ನೃತ್ಯವಿದೆ. ಪ್ರಪಂಚದ ಯಾವುದೇ ದೇಶಕ್ಕಿಂತ ಭಾರತದಲ್ಲಿ ವಿವಿಧತೆ ಹೆಚ್ಚು ಹಾಸುಹೊಕ್ಕಾಗಿದೆ. ಕಾಲಿಯ ನಾಗನ ಹೆಡೆಗಳ ಮೇಲೆ ಬಾಲಕೃಷ್ಣನು ಕುಣಿದಿದ್ದು ಜಾನಪದ ರೀತಿಯಲ್ಲಲ್ಲವೆ?

ಸಂಸ್ಕೃತಿಯ ಇನ್ನೊಂದು ರೂಪವು ವಿಕಸಿತವಾದದ್ದು ಚಿತ್ರಕಲೆಯಲ್ಲಿ. ಪ್ರಾಯಶಃ ಮಾನವನು ಲಿಪಿಯನ್ನು ಕಂಡುಕೊಳ್ಳುವುದಕ್ಕೂ ಮೊದಲೇ ಚಿತ್ರಕಲೆಯನ್ನು ಅಳವಡಿಸಿಕೊಂಡಿರಬೇಕು. ಎಷ್ಟೊಂದು ಗುಹೆಗಳಲ್ಲಿ, ದೇವಾಲಯಗಳಲ್ಲಿ ಇಂದಿಗೂ ಪ್ರಾಚೀನ ಚಿತ್ರಕಲೆಯ ಕೃತಿಗಳು ಉಳಿದುಕೊಂಡಿದೆ! ನಮ್ಮ ದೊಡ್ಡ ನಾಟಕಕಾರರಾಗಿದ್ದ ಕಾಳಿದಾಸ, ಶ್ರೀಹರ್ಷ ಮುಂತಾದ ಕವಿಗಳು ತಮ್ಮ ನಾಟಕಗಳಲ್ಲಿ ಚಿತ್ರ ರಚನೆಯನ್ನು ವರ್ಣಿಸಿದ್ದಾರೆ. ಚಿತ್ರಕಲೆಯಲ್ಲಿ ಅಂದು ಬಳಸುತ್ತಿದ್ದ ಬಣ್ಣಗಳು ನೈಸರ್ಗಿಕವಾಗಿದ್ದುವು.

ಚಿತ್ರಕಲೆಯ ಶಾಶ್ವತರೂಪವೇ ಶಿಲ್ಪಕಲೆ. ಭಾರತೀಯ ಸಂಸ್ಕೃತಿಯನ್ನು ಕಾಣಲು ಶಿಲಾಶಿಲ್ಪಗಳು, ದಾರುಶಿಲ್ಪಗಳು ನಮ್ಮ ಮುಂದಿವೆ. ಬೇಲೂರು, ಹಳೆಯಬೀಡು, ಮಹಾಬಲಿಪುರ, ಖಜುರಾಹೋ ಮುಂತಾದ ಕೇಂದ್ರಗಳು ಸಂಸ್ಕೃತಿಯ ಆಡುಂಬೊಲಗಳಾಗಿವೆ. ಭಗವಂತನೇ ಲೋಕವೆಂಬ ಮಹಾಶಿಲ್ಪವನ್ನು ರಚಿಸಿದ ಆದಿಶಿಲ್ಪಿ. ವಿಶ್ವಕರ್ಮನು ನಿರ್ಮಿಸಿದ ಶಿಲ್ಪಗಳ ಬಗೆಗೆ ರಾಮಾಯಣ–ಮಹಾಭಾರತಗಳಲ್ಲಿ ವರ್ಣನೆಗಳಿವೆ. ಜಕಣಾಚಾರಿಯೆಂಬ ಶಿಲ್ಪಿಯ ಹೆಸರು ದಕ್ಷಿಣ ಭಾರತದಲ್ಲಿ ಮನೆ ಮಾತಾಗಿದೆ. ನಮ್ಮ ದೇಶದ ಎಲ್ಲ ದೇವಾಲಯಗಳಲ್ಲಿ ಪೂಜಿಸಲ್ಪಡುವ ಮೂಲ ವಿಗ್ರಹಗಳು. ಉತ್ಸವ ವಿಗ್ರಹಗಳು ಶಿಲ್ಪಕಲೆಯ ಶಾಶ್ವತ ಸಾಕ್ಷಿಗಳು.

ಸಾಹಿತ್ಯ : ಕಲೆಗಳಂತೆ ಸಾಹಿತ್ಯವೂ ಸಂಸ್ಕೃತಿಯ ಮುಖ್ಯ ಅಭಿವ್ಯಕ್ತಿ ಸಾಧನವಾಗಿದೆ. ಜನರ ಜೀವನ ದೃಷ್ಟಿ, ಬದುಕಿನ ವಿಧಾನ, ಅವರ ಸೌಂದರ್ಯದ ಆರಾಧನೆ, ಸಿದ್ಧಿಸಾಧನೆಗಳು ಸಾಹಿತ್ಯದಲ್ಲಿ ಓತಪ್ರೋತವಾಗಿರುತ್ತವೆ. ಸಮಸ್ತ ವಿಶ್ವದ ದರ್ಶನವೇ ಸಾಹಿತ್ಯದಲ್ಲಿ ದೊರಕುತ್ತದೆ. ಭಾರತದಲ್ಲಿ ನಾನಾ ಭಾಷೆಗಳೂ ಅಸಂಖ್ಯಾತ ಉಪಭಾಷೆಗಳೂ ಇರುವುದರಿಂದ ಸಾಹಿತ್ಯ ಹುಲುಸಾಗಿ ಬೆಳೆದಿದೆ. ವೇದಗಳಿಂದ ಆರಂಭಿಸಿ ಇಂದಿನ ಪತ್ರಿಕೆಯವರಿಗೆ ಸಾಹಿತ್ಯ ತನ್ನ ದೀರ್ಘ ಬಾಹುಗಳನ್ನು ಚಾಚಿದೆ. ಕಲ್ಪನಾ ಪ್ರಧಾನವಾದ ಕಾವ್ಯ ದರ್ಶನ ಪ್ರಧಾನವಾದ ಶಾಸ್ತ್ರ, ಮನೋರಂಜನೆಯನ್ನೇ ಮುಖ್ಯ ಗುರಿಯನ್ನಾಗಿ ಮಾಡಿಕೊಂಡ ಕಥೆ, ಜೀವನ ಪರಿವರ್ತನೆಯನ್ನು ಉದ್ದೇಶಿಸಿಕೊಂಡ ಅಧ್ಯಾತ್ಮ ಪ್ರಬಂಧ, ನಿಜ ಜೀವನವನ್ನು ಪ್ರತಿಬಿಂಬಿಸುವ ಆತ್ಮ ಚರಿತ್ರೆ ಇವುಗಳಲ್ಲೆಲ್ಲ ಭಾರತೀಯ ಸಂಸ್ಕೃತಿ ನಲಿದಿದೆ. ಯಾವುದೇ ದೇಶದ ಸಂಸ್ಕೃತಿಯ ವಿಶ್ವರೂಪವನ್ನು ಕಾಣಲು ಅದರ ಸಾಹಿತ್ಯವೇ ದರ್ಪಣ. ಈ ವಿಷಯದಲ್ಲಿ ನಮ್ಮ, ಎಂದರೆ ಭಾರತೀಯರ ಭಾಗ್ಯ ದೊಡ್ಡದು. ಕಾಲಮಹಿಮೆಯಿಂದ ಎಷ್ಟೊ ಸಹಸ್ರ ಗ್ರಂಥಗಳು ಲುಪ್ತವಾಗಿದ್ದರೂ ಉಳಿದುಕೊಂಡಿರುವ ಸಾಹಿತ್ಯ ಎಷ್ಟು ಸಮೃದ್ಧವಾಗಿದೆಯೆಂದರೆ, ನಾವು ಎಲ್ಲ ದೇಶಗಳೊಡನೆ ಸಮಾನಸ್ಕಂಧರಾಗಿ ತಲೆಯೆತ್ತಿ ನಿಲ್ಲಬಹುದು.

ಭವಿಷ್ಯದಲ್ಲಿ ನಮ್ಮ ಸಂಸ್ಕೃತಿ

ನಾವು ಬ್ರಿಟಿಷರಿಂದ ಆಳಲ್ಪಟ್ಟು ಅವರ ಗುಲಾಮರಾಗಿ ನಮ್ಮತನವನ್ನು ಮರೆಯುತ್ತಿದ್ದೇವೆಯೇ? ಎಂಬ ಸಂಶಯ ಕೆಲವು ವೇಳೆ ಮೂಡುತ್ತದೆ. ನಮ್ಮ ಇಂಗ್ಲಿಷ್ ಮೋಹ ಮಾತೃಭಾಷೆಗಳನ್ನು ಮರೆಸುತ್ತಿದೆ. ಅವು ಮನೆಯ ಮಾತಿಗೆ ಮಾತ್ರ ಸರಿ, ಉನ್ನತ ಚಿಂತನೆಗಳಿಗೆ, ವಿಜ್ಞಾನದ ಅಧ್ಯಯನಕ್ಕೇ ಇಂಗ್ಲೀಷೇ ಬೇಕು ಎನ್ನುವ ಭ್ರಾಂತಿ ಅನೇಕರಲ್ಲಿ ಬೇರೂರಿದೆ. ಮಕ್ಕಳು ಇಂಗ್ಲೀಷಿನಲ್ಲಿ ಮಾತನಾಡಿದರೆ ತಾಯಿ ತಂದೆ ಹೆಮ್ಮೆ ಪಡುತ್ತಾರೆ. ಈ ಭಾವನೆ ಮುಂದುವರಿದರೆ ನಮ್ಮ ಭಾಷೆಗಳಿಗೆ ಕುತ್ತು ಕಟ್ಟಿಟ್ಟಬುತ್ತಿ. ಭವಿಷ್ಯದಲ್ಲಿ ನಮ್ಮ ಸಾಹಿತ್ಯ ಕೇವಲ ಗ್ರಂಥಾಲಯಗಳಿಗೆ ಸೀಮಿತವಾಗಬಹುದೇನೋ ಎಂಬ ಭಯ ಈಗ ವಿಚಾರವಂತರನ್ನು ಕಾಡುತ್ತಿದೆ. ಹೀಗಾದರೆ ಭಾರತೀಯ ಸಂಸ್ಕೃತಿ ಕ್ಷೀಣಿಸಿ ಮರೆಯಾಗುವುದೇ? ಎಂಬ ಪ್ರಶ್ನೆ ಇಂದು ಎದ್ದಿದೆ. ಹಾಗಾಗಬಾರದು, ರೋಮ್‌ನ ಸಂಸ್ಕೃತಿಯಂತೆ ಅಳಿಸಿ ಹೋಗಬಾರದೆಂಬುದು ಭಾರತವನ್ನು ಪ್ರೀತಿಸುವವರ ಅಭಿಲಾಷೆ.

ಭಾರತೀಯ ಸಂಸ್ಕೃತಿ ಶಾಶ್ವತ

ಇತಿಹಾಸವನ್ನು ನೋಡಿದರೆ, ಭಾರತ ದೇಶದ ಸಂಸ್ಕೃತಿಯು ನಾನಾ ಆಘಾತಗಳಿಗೆ ಒಳಗಾದರೂ ಅಸ್ಮಿತೆಯನ್ನು ಉಳಿಸಿಕೊಂಡಿರುವುದನ್ನು ಕಾಣುತ್ತೇವೆ. ಹೊರಗಿನಿಂದ ಬಂದುದನ್ನು ಅಳವಡಿಸಿಕೊಂಡರೂ ತನ್ನತನವನ್ನು ಉಳಿಸಿಕೊಳ್ಳುವುದು ಈ ಸಂಸ್ಕೃತಿಯ ಹೆಗ್ಗಳಿಕೆ. ಪಾಶ್ಚಾತ್ಯ ಸಂಗೀತ, ನೃತ್ಯ, ವಾದ್ಯ ಇತ್ಯಾದಿಗಳನ್ನೂ ನಮ್ಮದಾಗಿಸಿಕೊಂಡು ಶುದ್ಧ ರೂಪದ ಸಂಗೀತ–ನೃತ್ಯಗಳನ್ನು ಇಂದೂ ಸಾವಿರಾರು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಹೊಸ ಶೈಲಿಗಳನ್ನೂ ಸಾಧನಗಳನ್ನೂ ಉಪಯೋಗಿಸಿ ನಮ್ಮ ಕಲಾವಿದರು ಕೃಷ್ಣನ, ರಾಧೆಯ ಚಿತ್ರಗಳನ್ನು ಬರೆಯುತ್ತಿಲ್ಲವೆ. ಇಂದಿನ ಶಿಲ್ಪಿಗಳಂತೂ ಹಿಂದಿನ ಶಿಲ್ಪಿಗಳನ್ನೂ ಮೀರಿಸಿ ಅದ್ಭುತವಾದ ಶಿಲ್ಪಗಳನ್ನು ಶಿಲೆಯಲ್ಲಿ, ಲೋಹದಲ್ಲಿ ಮರದಲ್ಲಿ ನಿರ್ಮಿಸುತ್ತಿದ್ದಾರೆ. ನೂತನ ದೇವಾಲಯಗಳಂತೂ ವಿಜ್ಞಾನದ ಆಧಾರದ ಮೇಲೆ ದೃಢವಾಗಿ ರಚಿತವಾದರೂ ಶಿಲ್ಪಶಾಸ್ತ್ರದ ನಿಯಮಗಳಿಗೆ ಅನುಗುಣವಾಗಿವೆ. ನಮ್ಮ ಬದುಕು ಆಧುನಿಕ ಚಿಂತನೆಗಳಿಗೆ ಈಡಾಗಿದ್ದರೂ ಸಂಸ್ಕೃತಿಯ ಮೂಲತತ್ವಗಳನ್ನು ಮರೆಯದೆ, ಭಾರತೀಯತೆಯನ್ನು ಉಳಿಸಿಕೊಂಡು ದೇಶಾಭಿಮಾನವನ್ನು ಅಳವಡಿಸಿಕೊಂಡಿರುವವರು ಇನ್ನೂ ಇದ್ದಾರೆ. ನಾಟಕಗಳಲ್ಲಿ ಭಾರತೀಯತೆಗೆ ಒತ್ತುಕೊಟ್ಟು ಸಂಸ್ಕೃತಿಯನ್ನು ಕಾಪಾಡುತ್ತಿರುವ ನಿರ್ದೇಶಕರಿದ್ದಾರೆ. ವಿದೇಶಗಳಿಗೆ ಹೋದವರೂ ಅಲ್ಲಿ ದೇವಾಲಯಗಳನ್ನು ಕಟ್ಟಿ ಭಾರತೀಯ ಸಂಸ್ಕೃತಿಯ ವೈಭವವನ್ನು ಬೇರೆ ದೇಶಗಳವರಿಗೂ ತೋರಿಸುತ್ತಿದ್ದಾರೆ. ವಿವೇಕಾನಂದರಂತೆ ಅನೇಕ ಭಾರತೀಯ ದಾರ್ಶನಿಕರು ವಿದೇಶಗಳಲ್ಲೂ ಭಾರತದ ಆಧ್ಯಾತ್ಮಿಕ ಚಿಂತನೆಗಳ ಮಹತ್ವವನ್ನು ಸಾರುತ್ತಿದ್ದಾರೆ. ಜಗತ್ತಿನ ಅನೇಕ ದೇಶಗಳ ನಾಗರಿಕರು ಭಾರತಕ್ಕೆ ಬಂದು ಯೋಗಾಸನಗಳನ್ನು ಕಲಿತು ತಮ್ಮ ದೇಶದ ಜನರಿಗೂ ಕಲಿಸುತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದ ಭಾರತೀಯ ಸಂಸ್ಕೃತಿ ನಿತ್ಯ, ಸತ್ಯ, ಇದಕ್ಕೆ ಕುಂದು ಇಲ್ಲ. ಭವಿಷ್ಯದಲ್ಲಿ ಈ ಸಂಸ್ಕೃತಿ ಇನ್ನೂ ಉಜ್ವಲವಾಗಿ ಬೆಳಗುತ್ತಿರುತ್ತದೆ. ಇದರ ಮೂಲ ತತ್ವಗಳಿಗೆ ಚ್ಯುತಿಯಿಲ್ಲವೆಂಬುದು ಸತ್ಯಸ್ಯ ಸತ್ಯ.



ನಾನು ಮೈಸೂರು ಸಂಸ್ಕೃತಿಯ ಪ್ರತಿನಿಧಿ; ಡಾ.ರಾಜ್ ಚಿತ್ರರಂಗದ ಗ್ರಂಥಾಲಯ

'ಮೈಸೂರು ಮಿತ್ರ'ನಲ್ಲಿ ಭಾರತೀಯ ಚಿತ್ರರಂಗದ ಖ್ಯಾತ ಹಿರಿಯ ನಟಿ ಜಯಪ್ರದಾ ಮುಕ್ತ ಮಾತು...

● ಗಣೇಶ್.ಎ

ಮೈಸೂರು, ಡಿ.13– 'ಮೈಸೂರು ಫ್ಯಾಷನ್ ವೀಕ್' ಸೀಸನ್–6ರಲ್ಲಿ ಭಾಗವಹಿಸಿದ್ದ ಭಾರತ ಚಿತ್ರರಂಗದ ಖ್ಯಾತ ಹಿರಿಯ ನಟಿ ಜಯಪ್ರದಾ ಚಿನ್ನದಂತೆ ಹೊಳೆಯುವ ಸೀರೆಯುಟ್ಟು ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿ ಶೋ ಟಾಪರ್ ಆಗಿ ಮಿಂಚಿದ್ದರು. ಅವರು, ಮೈಸೂರು ನಗರ, ಕನ್ನಡ ಚಿತ್ರರಂಗ ಹಾಗೂ ರಾಜಕೀಯ ಕುರಿತು 'ಮೈಸೂರು ಮಿತ್ರ'ನೊಂದಿಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ.

ಖ್ಯಾತ ಫ್ಯಾಷನ್ ವಿನ್ಯಾಸಕಿ ಜಯಂತಿ ಬಲ್ಲಾಳ್ ಅವರು ಇತ್ತೀಚೆಗೆ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ 'ಮೈಸೂರು ಫ್ಯಾಷನ್ ವೀಕ್' ಸೀಸನ್–6ರಲ್ಲಿ ಭಾಗವಹಿಸಿದ್ದ ಅನುಭವ ಕುರಿತು ಮಾತನಾಡಿದ ಅವರು, ಮೈಸೂರಿನಲ್ಲಿ ಫ್ಯಾಷನ್ ಶೋ ಆಯೋಜಿಸಿದ್ದಾರೆ ಎಂದ ತಕ್ಷಣ ನನಗೆ ಆಶ್ಚರ್ಯವಾಯಿತು. ಆದರೆ, 'ಮೈಸೂರು ಫ್ಯಾಷನ್ ವೀಕ್' ಸೀಸನ್–6 ಅನ್ನು ಬಹಳಷ್ಟು ಅಚ್ಚುಕಟ್ಟಾಗಿ ಆಯೋಜಿಸಿದ್ದಾರೆ. ಅದರಲ್ಲಿ ನಾನು ಭಾಗವಹಿಸಿದ್ದು, ನನಗೆ ಹೆಚ್ಚು ಸಂತೋಷವನ್ನುಂಟು ಮಾಡಿದೆ. ಜಯಂತಿ ಬಲ್ಲಾಳ್ ಅವರು ಅದ್ಭುತವಾಗಿ ಮೈಸೂರು ಸಂಸ್ಕೃತಿ ಬಿಂಬಿಸುವಂತೆ ನನಗೆ ಸೀರೆ ಡಿಸೈನ್ ಮಾಡಿದ್ದರು. ಅದರಿಂದ ನನಗೆ ಶೋನಲ್ಲಿ ಬಹಳಷ್ಟು ಪ್ರಶಂಸೆಗಳ ಸುರಿಮಳೆಯೇ ಕೇಳಿಬಂತು ಎಂದು ಫ್ಯಾಷನ್ ಶೋ ಬಗ್ಗೆ ಅತೀವ ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರಿನ ಕುರಿತು ಮಾತನಾಡಿದ ಅವರು, ಮೈಸೂರಿನಲ್ಲಿ ಅನೇಕ ಚಿತ್ರಗಳ ಚಿತ್ರೀಕರಣವಾಗಿದೆ. ಮೈಸೂರು ನನಗೆ ಸ್ವಂತ ಮನೆ ಇದ್ದಂತೆ. ಇಲ್ಲಿನ ಊಟ, ಪ್ರವಾಸಿತಾಣಗಳು ನನಗೆ ಅಚ್ಚುಮೆಚ್ಚು. ಇಲ್ಲಿನ ಜನತೆ ನಾನು ಯಾವಾಗ ಬಂದರು ಅದೇ ಪ್ರೀತಿ ನೀಡುತ್ತಾರೆ. ಅದಕ್ಕೆ ನಾನು ಮೈಸೂರಿಗರಿಗೆ ಧನ್ಯವಾದ ತಿಳಿಸುತ್ತೇನೆ. ಮೈಸೂರು ಎಂದರೆ ಸಂಸ್ಕೃತಿಗೆ ಹೆಸರಾಗಿದ್ದು, ನಾನು ಹಿಂದೂ ಆಗಿ ಮೈಸೂರಿನ ಸಂಸ್ಕೃತಿ ಪ್ರತಿನಿಧಿಸುವ ಸಲುವಾಗಿ ಶೋನಲ್ಲಿ ಸೀರೆಯುಟ್ಟಿದ್ದೆ. ಪ್ರತಿ ಬಾರೀ ಇಲ್ಲಿಗೆ ಭೇಟಿ ನೀಡಿದಾಗ ನಾನು ಮಾಡುವ ಮೊದಲ ಕೆಲಸವೆಂದರೆ ಚಾಮುಂಡಿಬೆಟ್ಟಕ್ಕೆ ತೆರಳಿ, ತಾಯಿ ಚಾಮುಂಡಿ ದರ್ಶನ ಪಡೆಯುತ್ತೇನೆ. ಅತ್ಯಂತ ಶಕ್ತಿಯುತವಾದ ಕೇಂದ್ರವಾಗಿದ್ದು, ನನಗೆ ಇದರ ಬಗ್ಗೆ ಅಪಾರ ನಂಬಿಕೆ ಇದೆ ಎಂದು ಮೈಸೂರಿನ ಒಡನಾಟವನ್ನು ಮೆಲುಕು ಹಾಕಿದರು.

ಡಾ.ರಾಜ್ ಚಿತ್ರರಂಗದ ಗ್ರಂಥಾಲಯ: ಕನ್ನಡ ಚಿತ್ರರಂಗದ ಜೊತೆಗಿನ ತಮ್ಮ ಸಂಬಂಧ ಕುರಿತು ಮಾತನಾಡಿ, ಡಾ.ರಾಜ್‌ಕುಮಾರ್ ಅವರ ಜೊತೆ ನಾನು ನಟಿಸಿದ ನಂತರ ದೇವರೊಟ್ಟಿಗೆ ನಾನು ಕೆಲಸ ಮಾಡಿದೆ ಎಂಬ ಭಾವನೆ ಮೂಡಿತು. ಅವರೊಟ್ಟಿಗೆ ನಟಿಸಿದ 'ಕವಿರತ್ನ ಕಾಳಿದಾಸ', 'ಸನಾದಿ ಅಪ್ಪಣ್ಣ,' 'ಶಬ್ದವೇಧಿ' ಸೇರಿದಂತೆ ಅನೇಕ ಚಿತ್ರಗಳ ಗೀತೆಗಳನ್ನು ಇಂದಿಗೂ ನಾನು ಮರೆತಿಲ್ಲ. ಅದರ ನೆನಪು ಮನದಲ್ಲಿ ಅಚ್ಚ ಹಸಿರಾಗಿದ್ದು, ಕಾರ್ಯಕ್ರಮಗಳಲ್ಲಿ ಅದನ್ನು ಬಳಸಿಕೊಳ್ಳುತ್ತೇನೆ. ಚಿತ್ರರಂಗಕ್ಕೆ ಬರಲು ಆಸಕ್ತಿ ಇರುವ ಹೊಸ ಪ್ರತಿಭೆಗಳು ಅವರ ಚಿತ್ರಗಳನ್ನು ನೋಡಿದರೆ ಎಲ್ಲವನ್ನು ಸುಲಭವಾಗಿ ಕಲಿಯಬಹುದಾಗಿದ್ದು, ರಾಜ್‌ಕುಮಾರ್ ಅವರು ಚಿತ್ರರಂಗದಲ್ಲಿ ಗ್ರಂಥಾಲಯವಿದ್ದಂತೆ. ಕಲಿಕಾ ಅಂಶಗಳು ಅವರ ಚಿತ್ರಗಳಲ್ಲಿವೆ ಎಂದು ಅವರನ್ನು ಸ್ಮರಿಸಿದ್ದಲ್ಲದೆ. 'ಕರೆದರು ಕೇಳದೆ' ಗೀತೆಯನ್ನು ಸುಶ್ರಾವ್ಯವಾಗಿ ಕನ್ನಡದಲ್ಲೇ ಹಾಡಿದರು.

ವಿಷ್ಣು ಸಹೃದಯಿ ನಟ, ಅಂಬಿ ಆಪ್ತ: ಮತ್ತೊಬ್ಬ ಅದ್ಭುತ ಕಲಾವಿದರಾದ ವಿಷ್ಣುವರ್ಧನ್ ಸಹೃದಯಿ ವ್ಯಕ್ತಿತ್ವ ಹೊಂದಿದ್ದವರಾಗಿದ್ದರು. ಅವರೊಟ್ಟಿಗೆ ನಾನು ನಟಿಸಿದ 'ಈ ಬಂಧನ' ಕಡೆಯ ಚಿತ್ರ. ಈ ಚಿತ್ರವು ಅದ್ಭುತ ಕಥೆ, ಒಳ್ಳೆ ಸಂದೇಶ ಒಳಗೊಂಡಿದ್ದ ಚಿತ್ರವಾಗಿತ್ತು. ಗೀತೆಗಳು ಅತ್ಯುತ್ತಮವಾಗಿದ್ದವು. ಇನ್ನೂ ಅಂಬರೀಶ್ ಅವರು ಕೇವಲ ನಟರಾಗಿರಲಿಲ್ಲ. ಅವರು ನಮ್ಮ ಕುಟುಂಬಕ್ಕೆ ಗೆಳೆಯನಾಗಿದ್ದರು. ಸ್ನೇಹಕ್ಕೆ ಪ್ರತಿರೂಪವಾಗಿ ಅವರಿದ್ದರು. ಆದರೆ, ಈಗ ನಮ್ಮ ಜೊತೆ ಇಲ್ಲ ಅವರನ್ನು, ನಾನು ತುಂಬ ನೆನಪು ಮಾಡಿಕೊಳ್ಳುತ್ತೇನೆ ಎಂದು ಕೆಲ ಕ್ಷಣ ಭಾವುಕರಾದರು.

ರಾಜಕೀಯದಲ್ಲಿ ಸಕ್ರಿಯರಾಗಿರುವುದರಿಂದ ಸಿನಿಮಾ, ರಾಜಕೀಯ ಹೇಗೆ ನಿಭಾಯಿಸುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಸಿನಿಮಾ ಪ್ರಪಂಚಕ್ಕೂ, ರಾಜಕೀಯಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಸಿನಿಮಾದಲ್ಲಿ ಒಂದು ಸೆಟ್‌ನಲ್ಲಿ ನಟಿಸಿ ಹೋಗಬಹುದು. ಆದರೆ, ರಾಜಕೀಯ ಆಗಲ್ಲ. ಜನರ ಮಧ್ಯೆ ಇದ್ದು ಅವರ ಕಷ್ಟಗಳಿಗೆ ಸ್ಪಂದಿಸಬೇಕಿದೆ. ಎರಡು ಕ್ಷೇತ್ರದಲ್ಲಿ ಯಶಸ್ಸು ಅಷ್ಟು ಸುಲಭವಲ್ಲ. ಎಂಜಿಆರ್, ಎನ್‌ಟಿಆರ್, ಜಯಲಲಿತಾ ಯಶಸ್ಸು ಕಂಡರು. ಆದರೆ, ಚಿರಂಜೀವಿ ಹಾಗೂ ಪವನ್ ಕಲ್ಯಾಣ್ ಯಶಸ್ಸಿಗೆ ಇನ್ನೂ ಪ್ರಯತ್ನಿಸುತ್ತಿದ್ದಾರೆ ಎಂದರು.

ಪ್ರಧಾನಿ ಮೋದಿ ಅವರ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಬಿಜೆಪಿಯಲ್ಲಿ ಮೋದಿ ಅವರೊಂದಿಗೆ ಅಮಿತ್ ಶಾ, ಜೆಪಿ ನಡ್ಡಾ, ಯೋಗಿ ಆದಿತ್ಯನಾಥ್ ಸೇರಿದಂತೆ ಘಟಾನುಘಟಿ ನಾಯಕರಿದ್ದಾರೆ. ಆದರೆ, ಮೋದಿ ಅವರ ವರ್ಚಸ್ಸು ಹೆಚ್ಚಿದೆ. ಅವರ ಯೋಜನೆಗಳು, ನಿರ್ಧಾರಗಳಿಂದ ಪ್ರಖ್ಯಾತಿ ಹೊಂದಿದ್ದಾರೆ.


ಮೋದಿಗೆ ರಾಹುಲ್ ಸರಿಸಾಟಿಯಲ್ಲ: ಭಾರತ್ ಜೋಡೋ ಬಗ್ಗೆ ಮಾತನಾಡಿದ ಅವರು, ಮೋದಿಗೆ ರಾಹುಲ್ ಗಾಂಧಿ ಸರಿಸಾಟಿಯಲ್ಲ. ಭಾರತ್ ಜೋಡೋ ಮೂಲಕ ಏನೋ ಪ್ರಯತ್ನ ಪಡುತ್ತಿದ್ದಾರೆ. ಆದರೆ, ಅದರ ಫಲಿತಾಂಶ ಇನ್ನು ದೊರೆತ್ತಿಲ್ಲ ಎಂಬುದು ನಮ್ಮ ಮುಂದೆ ಇದೆಯಲ್ಲ ಎಂದರು.

ಬಹುರೂಪಿಯಲ್ಲಿ ಇಂದು ಅಪರೂಪ ನಾಟಕ
ವಿದ್ಯಾಸುಂದರಿಯಾದ ನಂಜನಗೂಡಿನ ನಾಗರತ್ನಮ್ಮ

ಮೈಸೂರಿನ ಹಿರಿಯ ಲೇಖಕ ಮಲೆಯೂರು ಗುರುಸ್ವಾಮಿ ಅವರ ಕಾದಂಬರಿ ಆಧಾರಿತ 'ಕಪಿಲೆ ಹರಿದಳು ಕಡಲಿಗೆ' ನಾಟಕ ಬುಧವಾರ(ಡಿ.14) ರಂಗಾಯಣದ ಬಹುರೂಪಿಯಲ್ಲಿ ರಾತ್ರಿ 7.30ಕ್ಕೆ ಪ್ರದರ್ಶನಗೊಳ್ಳಲಿದೆ. ಅದು ವಿದ್ಯಾಸುಂದರಿ ಬೆಂಗಳೂರು ನಾಗರತ್ನಮ್ಮ ಹೆಸರಿನಲ್ಲಿ.

ನಾಗರತ್ನಮ್ಮ ಅವರು ನಂಜನಗೂಡಿನವರು. ದೇವದಾಸಿ ಕುಟುಂಬದ ಅವರು ಬಿಡಾರಂ ಕೃಷ್ಣಪ್ಪ ಅವರ ಶಿಷ್ಯರು. ಪಿಟೀಲು ಚೌಡಯ್ಯ ಅವರ ಸಹಪಾಠಿ. ಮೈಸೂರಿನಲ್ಲಿದ್ದ ನಂಜನಗೂಡಿನ ನಾಗರತ್ನಮ್ಮ ಅವರು ಬೆಂಗಳೂರು ನಾಗರತ್ನಮ್ಮ ಆಗಿದ್ದು ಬೆಂಗಳೂರು ಸೇರಿದ ಮೇಲೆ. ಅದಾಗಲೇ ಬೆಂಗಳೂರಲ್ಲಿ ಗಾಯಕಿ ಹಾಗೂ ನರ್ತಕಿ ಕೋಲಾರ ನಾಗರತ್ನಮ್ಮ ಹೆಸರು ಗಳಿಸಿದ್ದರು. ಹೀಗಾಗಿ ನಂಜನಗೂಡಿನ ನಾಗರತ್ನಮ್ಮ ಅವರು ಬೆಂಗಳೂರು ನಾಗರತ್ನಮ್ಮ ಎಂದೇ ಪ್ರಸಿದ್ಧಿಯಾದರು. ಬೆಂಗಳೂರಿಗೆ ಇಂಗ್ಲೆಂಡಿನ ಮಹಾರಾಣಿ ಮೊಮ್ಮಗ ಆಲ್ಬರ್ಟ್ ವಿಕ್ಟರ್ ಬಂದಾಗ ಆಗ ಮದ್ರಾಸಿನಲ್ಲಿದ್ದ ನಾಗರತ್ನಮ್ಮ ಅವರನ್ನು ಆಹ್ವಾನಿಸಿ, ಈಗಿನ ಬೆಂಗಳೂರು ಬಸ್‌ನಿಲ್ದಾಣವಿರುವ ಜಾಗದಲ್ಲಿ ಆಗ ಕೆರೆಯಿತ್ತು. ಆ ಕೆರೆಯ ಮೇಲೆ ದೊಡ್ಡ ತೆಪ್ಪ ಕಟ್ಟಿ ನಾಗರತ್ನಮ್ಮ ಅವರ ನೃತ್ಯ ಆಯೋಜಿಸಲಾಗುತ್ತದೆ. ಇದಕ್ಕೂ ಮೊದಲು ಬೆಂಗಳೂರಿನ ನಗರಪೇಟೆಯಲ್ಲಿ ವಾಸವಿದ್ದ ನಾಗರತ್ನಮ್ಮ ಅವರಿಗೆ ಸಂಗೀತಪ್ರೇಮಿ ಹೈಕೋರ್ಟ್ ನ್ಯಾಯಾಧೀಶರಾದ ನರಹರಿರಾಯರ ಪರಿಚಯವಾಗುತ್ತದೆ. ನಿತ್ಯ ಕೋರ್ಟ್ ನಂತರ ನಾಗರತ್ನಮ್ಮ ಅವರ ಮನೆಗೆ ತೆರಳಿ ನಾಗರತ್ನಮ್ಮ ಅವರ ಗಾಯನ ಹಾಗೂ ನೃತ್ಯ ನೋಡುತ್ತಿದ್ದ ನರಹರಿರಾಯರನ್ನು ಕಂಡು ಜನರು ಆಡಿಕೊಳ್ಳುತ್ತಾರೆ. ಆಗ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಅವರು ಗೆಳೆಯರೂ ಆದ ನರಹರಿರಾಯರಿಗೆ ಕಿವಿಮಾತು ಹೇಳುತ್ತಾರೆ. ನಂತರ ಬೆಂಗಳೂರಿನ ಹನುಮಂತನಗರದ ಗುಡ್ಡದ ಮೇಲೆ ನಾಗರತ್ನಮ್ಮ ಅವರ ಕಛೇರಿಯನ್ನು ರಾಯರು ನಿತ್ಯ ಆಯೋಜಿಸುತ್ತಾರೆ. ಹೀಗೆ ನಿತ್ಯ ನಡೆಯುತ್ತಿದ್ದ ಕಛೇರಿಗೆ ಡಿವಿಜಿ ಅಲ್ಲದೆ ಅನೇಕ ಹೆಸರಾಂತರು ಭಾಗವಹಿಸುತ್ತಾರೆ.

ಬಳಿಕ ನಾಗರತ್ನಮ್ಮ ಅವರನ್ನು ನರಹರಿರಾಯರು ಸಂಗೀತ ಕ್ಷೇತ್ರದಲ್ಲಿ ಇನ್ನಷ್ಟು ಹೆಸರು ಗಳಿಸಲೆಂದು ಆಗಿನ ಮದ್ರಾಸಿಗೆ ಕಳಿಸಿಕೊಡುತ್ತಾರೆ. ಅಲ್ಲಿ ಪ್ರಸಿದ್ಧರಾದ ನಾಗರತ್ನಮ್ಮ ಅವರು ಶ್ರೀಮಂತರು ವಾಸಿಸುವ ಪ್ರದೇಶದಲ್ಲಿ ಮ್ಯಾನ್‌ಷನ್ ಹೌಸ್ ಎಂಬ ಎಂಟು ಕೋಣೆಗಳ ಮನೆಯನ್ನು ಕಟ್ಟಿಸುತ್ತಾರೆ. ಅವರ



ಮನೆಯನ್ನು ಬಿಡಾರಂ ಕೃಷ್ಣಪ್ಪ ಉದ್ಘಾಟಿಸುತ್ತಾರೆ; ಕನ್ನಡ ಹಾಡುಗಳನ್ನು ಹಾಡುವ ಮೂಲಕ. ಇದಾದ ಮೇಲೆ ಯುವತಿಯೊಬ್ಬಳನ್ನು ದತ್ತು ತೆಗೆದುಕೊಳ್ಳುವ ನಾಗರತ್ನಮ್ಮ ಅವರನ್ನು ಕೊಲ್ಲಿಸಲು, ಯುವತಿಯ ಹೆತ್ತವರು ಯತ್ನಿಸುತ್ತಾರೆ. ಆಗ ನಾಗರತ್ನಮ್ಮ ಅವರಿಗೆ ವೈರಾಗ್ಯ ಮೂಡಿ ತಂಜಾವೂರು ಬಳಿಯ ತಿರುವಾಯೂರಿಗೆ ತೆರಳಿ ಗುಡಿಸಲಲ್ಲಿ ವಾಸಿಸುತ್ತ, ಅಲ್ಲಿದ್ದ ತ್ಯಾಗರಾಜರ ಸಮಾಧಿ ಮೇಲೆ ದೇವಸ್ಥಾನ ಕಟ್ಟಿಸುತ್ತಾರೆ. ನಂತರ ಅವರು ನಿಧನರಾದಾಗ ತ್ಯಾಗರಾಜರ ಮೂರ್ತಿಯನ್ನು ಒಯ್ಯುತ್ತಿದ್ದ ಪಲ್ಲಕ್ಕಿಯಲ್ಲಿಯೇ ನಾಗರತ್ನಮ್ಮ ಅವರ ಶವಯಾತ್ರೆ ನಡೆಯುತ್ತದೆ. ಈಗಲೂ ತ್ಯಾಗರಾಜರ ಸಮಾಧಿ ಬಳಿ ನಾಗರತ್ನಮ್ಮ ಅವರ ಸಮಾಧಿಯೂ ಇದೆ.

ಇಂಥ ನಾಗರತ್ನಮ್ಮ ಅವರ ಕುರಿತ ನಾಟಕವನ್ನು ಬೆಂಗಳೂರಿನ ಬೆನಕ ತಂಡ ಪ್ರಸ್ತುತಪಡಿಸಲಿದೆ. ಈ ಕಾದಂಬರಿಯನ್ನು ಹೂಲಿ ಶೇಖರ್ ಹಾಗೂ ಪ್ರತಿಭಾ ನಂದಕುಮಾರ್ ರಂಗರೂಪಕ್ಕೆ ತಂದಿದ್ದಾರೆ. ಸಿನಿಮಾ ನಿರ್ದೇಶಕ ನಾಗಾಭರಣ ಅವರ ನಿರ್ದೇಶನವಿದೆ. 'ನಾಗರತ್ನಮ್ಮ ಅವರ ಜೀವನ ಚಿತ್ರಣ ಅದ್ಭುತವಾದ ಮಾದರಿ. ಸಂಗೀತವಷ್ಟೇ ಅಲ್ಲ, ಸಾಮಾಜಿಕ ಹಾಗೂ ಸಾಹಿತ್ಯಿಕ ಕಳಕಳಿಯನ್ನು ಈ ನಾಟಕ ಹೇಳುತ್ತದೆ' ಎನ್ನುತ್ತಾರೆ ನಾಗಾಭರಣ. ಎರಡು ಗಂಟೆಯ ಅವಧಿ ನಾಟಕವಿದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರಲ್ಲಿ ಆಂಧ್ರ ಮೂಲದ ಅಪ್ರಾಪ್ತ ಬಾಲಕಿ ರಕ್ಷಣೆ

ಮೈಸೂರು, ಡಿ.13(ಆರ್‌ಕೆ)–ಮೈಸೂರಿನ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಆಂಧ್ರ ಮೂಲದ ಅಪ್ರಾಪ್ತ ಬಾಲಕಿಯೊಬ್ಬಳನ್ನು ಒಡನಾಡಿ ಸೇವಾ ಸಂಸ್ಥೆ ನೆರವಿನೊಂದಿಗೆ ಮಾನವ ಸಾಗಾಣಿಕೆ ನಿಗ್ರಹ ದಳದ ಪೊಲೀಸರು ರಕ್ಷಿಸಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸಬರ್ಬನ್ ಬಸ್ ನಿಲ್ದಾಣಕ್ಕೆ ತೆರಳಿದ ಪೊಲೀಸರು, ಇಬ್ಬರು ಮಹಿಳೆಯರೊಂದಿಗೆ ಪ್ರತ್ಯಕ್ಷಳಾದ 15 ವರ್ಷದ ಬಾಲಕಿಯನ್ನು ರಕ್ಷಿಸಿ ಮಹಿಳಾ ಠಾಣೆಯಲ್ಲಿರುವ ನಗರ ಮಾನವ ಸಾಗಾಣಿಕೆ ನಿಗ್ರಹ ದಳದಲ್ಲಿ ವಿಚಾರಣೆ ನಡೆಸಿದರಾದರೂ, ಜೊತೆಯಲ್ಲಿದ್ದ ಮಹಿಳೆಯರು ಸಂಬಂಧಿಕರೆಂದು ಹೇಳುತ್ತಿದ್ದರೂ, ಅವರ ಮಾತಿನಲ್ಲಿ ಸ್ಪಷ್ಟತೆ ಇಲ್ಲದ ಕಾರಣ, ಆಪ್ತ ಸಮಾಲೋಚನೆಗಾಗಿ ಬಾಲಕಿಯನ್ನು ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ಒಪ್ಪಿಸಲಾಗಿದೆ ಎಂದು ದೇವರಾಜ ಉಪ ವಿಭಾಗದ ಎಸಿಪಿ ಎಂ.ಎನ್.ಶಶಿಧರ್ ತಿಳಿಸಿದ್ದಾರೆ.

ಆಪ್ತ ಸಮಾಲೋಚನೆ ನಡೆಸಿ ನೀಡಿದ ವರದಿ ಆಧರಿಸಿ, ಒಂದು ವೇಳೆ ಆಕೆಯನ್ನು ವೇಶ್ಯಾವಾಟಿಕೆಗೆ ಬಳಸಲೆಂದು ಕರೆತರಲಾಗಿದೆ ಎಂಬುದು ದೃಢಪಟ್ಟಲ್ಲಿ ಪ್ರಕರಣ ದಾಖಲಿಸಿಕೊಂಡು ಕಾನೂನು ರೀತಿ ಕ್ರಮ ಜರುಗಿಸಲಾಗುವುದು. ಆಂಧ್ರ ಪ್ರದೇಶದಿಂದ ಆಕೆಯನ್ನು ಕರೆತಂದವರು ಸಂಬಂಧಿಕರೇ, ಯಾವ ಉದ್ದೇಶಕ್ಕೆ ಬಂದಿದ್ದರು, ಆಕೆಯ ತಂದೆ–ತಾಯಿಗಳಾರು ಎಂಬಿತ್ಯಾದಿ ಮಾಹಿತಿಯೊಂದಿಗೆ ವರದಿ ಬಂದ ಮೇಲೆ ಕ್ರಮ ವಹಿಸುತ್ತೇವೆ ಎಂದು ಅವರು ತಿಳಿಸಿದರು.

ಹೋಟೆಲ್‌ನಲ್ಲಿ ತಿಂಡಿ ತಿಂದು, ಆಟೋವೊಂದರಲ್ಲಿ ಬಾಲಕಿಯನ್ನು ಕರೆದೊಯ್ಯುತ್ತಿದ್ದ ಬಗ್ಗೆ ಪೊಲೀಸರಿಗೆ ಮಾಹಿತಿ ಸಿಕ್ಕಿದೆ. ಈ ವಿಷಯ ಹೇಗೋ ತಿಳಿದು, ಆಟೋಚಾಲಕ ಬಸ್ ಸ್ಟ್ಯಾಂಡ್ ಬಳಿ ಅವರನ್ನು ಬಿಟ್ಟು ಪರಾರಿಯಾಗಿದ್ದು, ಮಹಿಳೆಯರು ಬಸ್ ಹತ್ತಿ ಬಂಡೀಪುರದ ಕಡೆಗೆ ಹೋಗಲು ಯತ್ನಿಸುತ್ತಿದ್ದಾಗ ಪೊಲೀಸರು ಕಾರ್ಯಾಚರಣೆ ನಡೆಸಿ, ರಕ್ಷಿಸಿದ್ದಾರೆ ಎಂದು ತಿಳಿದು ಬಂದಿದೆ.

ಮಹಿಳಾ ಠಾಣೆ ಇನ್ಸ್‌ಪೆಕ್ಟರ್ ಅರುಣ್‌ಕುಮಾರಿ, ಜಿಲ್ಲಾ ಮಕ್ಕಳ ವಿಶೇಷ ಪೊಲೀಸ್ ಘಟಕದ ಎಸ್.ಶೀಲಾ, ಒಡನಾಡಿಯ ಪರಶು, ಪ್ರದೀಪ್, ಶಶಾಂಕ್, ಸುಜನಾ, ಮಹಾಲಕ್ಷ್ಮಿ ರಕ್ಷಣಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಅಪ್ರಾಪ್ತ ಬಾಲಕಿ ಜೊತೆಯಲ್ಲಿದ್ದ ಮಹಿಳೆಯರಿಬ್ಬರನ್ನು ವಿಚಾರಣೆಗೊಳಪಡಿಸಲಾಗಿದೆಯಾದರೂ, ಅವರ ಹೇಳಿಕೆಯಲ್ಲಿ ಸಂಶಯ ಮೂಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ 337 ಬೂತ್ ಏಜೆಂಟ್‌ಗಳ ಪಟ್ಟಿಯನ್ನು ಬೆಂಗಳೂರಿನ ಅವರ ನಿವಾಸದಲ್ಲಿ ನೀಡಲಾಯಿತು. ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯರೂ ಆದ ಜಿಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಇಲವಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜೆ.ಸತೀಶ್‌ಕುಮಾರ್, ಜಿಲ್ಲಾ (ಎಸ್‌ಸಿ) ಪರಿಶಿಷ್ಟ ಜಾತಿ ಘಟಕದ ಅಧ್ಯಕ್ಷ ಸಿದ್ದರಾಜು, ಡಿಸಿಸಿ ಸದಸ್ಯ ರವಿ, ಇಲವಾಲ ಬ್ಲಾಕ್ ಅಸಂಘಟಿತ ಘಟಕದ ಅಧ್ಯಕ್ಷ ಕೆರೆಹುಂಡಿ ಮಹೇಶ, ಪ್ರಕಾಶ್ ಇನ್ನಿತರರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.13–ಚೆಸ್ಕಾಂ ವತಿಯಿಂದ ತುರ್ತು ನಿರ್ವಹಣೆ ಕೈಗೊಂಡಿದ್ದು, ನಾಳೆ (ಬುಧವಾರ) ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಜನತಾನಗರ, ಬೋಗಾದಿ 2ನೇ ಹಂತ North & South, ಗಂಗೋತ್ರಿ ಕ್ಯಾಂಪಸ್, ಗಂಗೋತ್ರಿಕ್ವಾಟ್ರಸ್, ದಾಸನ ಕೊಪ್ಪಲು, ಮರಟಿಕ್ಯಾತನಹಳ್ಳಿ, ರೂಪನಗರ, ದೀಪಾನಗರ, ಬೋಗಾದಿ ಗ್ರಾಮ, ಪ್ರೀತಿ ಲೇಔಟ್, ಆರ್‌ಎಂಪಿ ಲೇಔಟ್, ವಿಜಯನಗರ 3ನೇ ಹಂತ, ಹಿನಕಲ್, ವಿಜಯನಗರ 4ನೇ ಹಂತ, ವಿಜಯಶ್ರೀಪುರ, ಸುಧಾ ಲೇಔಟ್, ರೈಲ್ವೆ ಲೇಔಟ್, ಎಸ್.ಬಿ.ಎಂ ಲೇಔಟ್, ವಾಗ್ದೇವಿನಗರ, ಸಿ.ಎಫ್.ಟಿ.ಆರ್.ಐ ಲೇಔಟ್, ಯುನಿವರ್ಸಿಟಿ, ಜಯನಗರ, ಕೆ.ಜಿ.ಕೊಪ್ಪಲ್, ಚಿನ್ನಗಿರಿಕೊಪ್ಪಲು, ಶಿವರಾಂ ಬಡಾವಣೆ, ಪ್ರೀತಿ ಹಿಲ್ ವ್ಯೂ ಲೇಔಟ್, ಸಾರಾ ಲೇಔಟ್, ರಾಘವೇಂದ್ರ ಲೇಔಟ್, ಹಳೆ ಮಾನಂದವಾಡಿ ರಸ್ತೆ, ಕೆ–ಬ್ಲಾಕ್, ಚಿಕರಂಗನಹಳ್ಳಿ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಪ್ರೊ.ಮಾಳೇಟಿರ ಬಿ. ಕಾವೇರಪ್ಪಗೆ ಡಾಕ್ಟರೇಟ್



ಮೈಸೂರು, ಡಿ.13– ಗೋಣಿಕೊಪ್ಪದ ಕಾವೇರಿ ಕಾಲೇಜು ಪ್ರಾಂಶುಪಾಲ ಪ್ರೊ.ಮಾಳೇಟಿರ ಬಿ. ಕಾವೇರಪ್ಪ ಅವರಿಗೆ ಮಂಗಳೂರು ವಿಶ್ವವಿದ್ಯಾನಿಲಯ ಡಾಕ್ಟರೇಟ್ ಪದವಿ ನೀಡಿದೆ. ಮಂಗಳೂರು ವಿವಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಮಾಧವ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ 'ಕೊಡಗಿನ ಕೃಷಿ ಸಂಸ್ಕೃತಿ' ಎಂಬ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಲಭಿಸಿದೆ.

ಗ್ರಾಮಸ್ಥರಿಗೆ ಉಪಟಳ ನೀಡುತ್ತಿದ್ದ ಹೆಣ್ಣು ಚಿರತೆ ಮರಿ ಸೆರೆ

ಮೈಸೂರು, ಡಿ.13(ಎಸ್‌ಬಿಡಿ)– ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕು ಅಂತರಸಂತೆ ಸುತ್ತಮುತ್ತ ಚಿರತೆ ಉಪಟಳ ಹೆಚ್ಚಾಗಿದ್ದು, ತೋಟದಲ್ಲಿಡಲಾಗಿದ್ದ ಬೋನಿಗೆ ಇಂದು 8–9 ತಿಂಗಳ ಹೆಣ್ಣು ಚಿರತೆ ಮರಿ ಸೆರೆಯಾಗಿದೆ.



ಅಂತರಸಂತೆ ಸಮೀಪದ ಬದನಕುಪ್ಪೆ ಗ್ರಾಮದ ಜವರೇಗೌಡರು ಸಾಕಿದ್ದ ಕರುವೊಂದು ಭಾನುವಾರ ಚಿರತೆ ದಾಳಿಗೆ ಬಲಿಯಾಗಿತ್ತು ಗ್ರಾಮಸ್ಥರಿಂದ ವಿಷಯ ತಿಳಿದ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದರು. ಅಲ್ಲದೆ ಗ್ರಾಮಸ್ಥರ ಒತ್ತಾಯದಂತೆ ಕಬಿನಿ ಹಿನ್ನೀರಿನ ಸಮೀಪದ ಜಮೀನಿನಲ್ಲಿ ನಿನ್ನೆ ಬೋನ್ ಇಟ್ಟಿದ್ದರು. ಸದ್ಯ 8–9 ತಿಂಗಳ ಮರಿ ಚಿರತೆ ಬೋನಿನಲ್ಲಿ ಸೆರೆಯಾಗಿದೆ. ವಿಷಯ ತಿಳಿದ ಆರ್‌ಎಫ್‌ಓ ಕೆ.ಪ್ರಸನ್ನಕುಮಾರ್, ಡಿಆರ್‌ಎಫ್‌ಓ ಪಿ.ಚಂದನ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ, ಬೋನಿನಲ್ಲಿದ್ದ ಮರಿ ಚಿರತೆಯನ್ನು ಆರ್‌ಎಫ್‌ಓ ಕಚೇರಿ ಬಳಿಗೆ ಸ್ಥಳಾಂತರಿಸಿ ಅದಕ್ಕೆ ಪ್ರಥಮ ಚಿಕಿತ್ಸೆ ನೀಡಿದ್ದಾರೆ. ಮರಿ ಚಿರತೆ ಆರೋಗ್ಯವಾಗಿದ್ದು, ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ನಾಳೆ(ಡಿ.14) ಸೂಕ್ತ ಅರಣ್ಯ ಪ್ರದೇಶದಲ್ಲಿ ಮರಿ ಚಿರತೆಯನ್ನು ಬಿಡುಗಡೆ ಮಾಡಲು ಕ್ರಮ ವಹಿಸಲಾಗಿದೆ. 8 ತಿಂಗಳ ಮರಿಯಾಗಿರುವುದರಿಂದ ಬೇಟೆಯಾಡುವುದನ್ನು ಸಹಜವಾಗಿ ಕಲಿತಿರುತ್ತದೆ. ಆದ್ದರಿಂದ ಯಾವ ಪ್ರದೇಶದಲ್ಲಿ ಬಿಟ್ಟರೂ ಸ್ವತಂತ್ರವಾಗಿ ಬದುಕಬಲ್ಲದು ಎಂಬ ತಜ್ಞರ ಅಭಿಪ್ರಾಯವನ್ನು ಮೇಲಧಿಕಾರಿಗಳಿಗೆ ತಿಳಿಸಿರುವುದಾಗಿ ಹೇಳಲಾಗಿದೆ.

ಇನ್ನೂ ಎರಡಿವೆ: ಬೋನಿನಲ್ಲಿ ಸೆರೆಯಾಗಿರುವ ಮರಿ ಚಿರತೆಯ ತಾಯಿ ಹಾಗೂ ಮತ್ತೊಂದು ಮರಿ ಗ್ರಾಮದ ಸುತ್ತಮುತ್ತ ಕಾಣಿಸಿಕೊಂಡಿವೆ ಎಂದು ದೂರಿರುವ ಸ್ಥಳೀಯರು, ಹೆಚ್ಚು ಬೋನುಗಳನ್ನಿಡುವಂತೆ ಅರಣ್ಯ ಇಲಾಖೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ. ಈ ವೇಳೆ ಚಿರತೆ ಸೆರೆಗೆ ಪರಿಣಾಮಕಾರಿ ಕ್ರಮ ವಹಿಸುತ್ತಿಲ್ಲ ಹಾಗೂ ವನ್ಯಜೀವಿಗಳಿಂದ ನಷ್ಟ ಅನುಭವಿಸಿದವರಿಗೆ ಪರಿಹಾರ ನೀಡುವಲ್ಲಿ ವಿಳಂಬ ಮಾಡಲಾಗುತ್ತಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು. ಈ ಭಾಗದಲ್ಲಿ ಹಸು–ಕರು, ಮೇಕೆಗಳು ಸೇರಿದಂತೆ ಹಲವು ಸಾಕುಪ್ರಾಣಿಗಳು ಚಿರತೆ ದಾಳಿಗೆ ಬಲಿಯಾಗಿವೆ. ಕೆಲವೊಮ್ಮೆ ಪ್ರಾಣಿಗಳ ಕಳೇಬರವೂ ಪತ್ತೆಯಾಗುವುದಿಲ್ಲ. ಅಂತಹ ಪ್ರಕರಣಗಳಿಗೆ ಪರಿಹಾರ ನೀಡುವುದಿಲ್ಲ. ಇದರಿಂದ ರೈತರು ಜೀವನಕ್ಕೆ ನೆರವಾಗಿದ್ದ ಜಾನುವಾರುಗಳನ್ನೂ ಕಳೆದುಕೊಂಡು ಇತ್ತ ಪರಿಹಾರವೂ ಸಿಗದೆ ತೀವ್ರ ನಷ್ಟ ಅನುಭವಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಈ ವೇಳೆ ಗ್ರಾಮಸ್ಥರ ಸಮಾಧಾನಪಡಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಸೆರೆಗೆ ಹೆಚ್ಚುವರಿ ಬೋನ್ ಇಡುವ ಭರವಸೆ ನೀಡಿದರು.

ರಾಜ್ಯದ 4 ಗಡಿಯ 63 ತಾಲೂಕಿನ ಕನ್ನಡಿಗರ ಸ್ಥಿತಿಗತಿ ಅಧ್ಯಯನಕ್ಕೆ 8 ವಿವಿಗಳಿಂದ ಸಮೀಕ್ಷೆ

- ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಮಾಹಿತಿ
- ಮೈಸೂರು ಡಿಸಿ ಕಚೇರಿಯಲ್ಲಿ ಸರಗೂರು, ಹೆಚ್.ಡಿ.ಕೋಟೆ ತಾಲೂಕಿನ ಸ್ಥಿತಿಗತಿ ಪರಿಶೀಲನೆ



ಮೈಸೂರು,ಡಿ.13(ಎಂಟಿವೈ)– ರಾಜ್ಯದ ನಾಲ್ಕು ದಿಕ್ಕುಗಳ ಗಡಿಯ 63 ತಾಲೂಕುಗಳಲ್ಲಿ ವಾಸಿಸುತ್ತಿರುವ ಕನ್ನಡಿಗರ ಸ್ಥಿತಿಗತಿಯನ್ನು ಅರಿಯಲು ರಾಜ್ಯದ 8 ವಿಶ್ವವಿದ್ಯಾನಿಲಯಗಳಿಂದ ಅಧ್ಯಯನ, ಸಮೀಕ್ಷೆ ನಡೆಸಲು ನಿರ್ಧರಿಸಲಾಗಿದೆ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ್ ತಿಳಿಸಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಮೈಸೂರು ಜಿಲ್ಲೆಯ ಗಡಿ ಸರಗೂರು, ಹೆಚ್.ಡಿ.ಕೋಟೆ ತಾಲೂಕುಗಳ ಸ್ಥಿತಿಗತಿ ಕುರಿತ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಗಡಿಭಾಗದಲ್ಲಿ ನೆಲೆಸಿರುವ ಕನ್ನಡಿಗರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಭಾಷೆ ಕುರಿತ ಅಧ್ಯಯನ ಮಾಡುವುದು ಅನಿವಾರ್ಯವಾಗಿದೆ. ಮಹಾರಾಷ್ಟ್ರ, ಆಂಧ್ರ ಪ್ರದೇಶ, ತೆಲಂಗಾಣ, ಕೇರಳ, ಗೋವಾ ರಾಜ್ಯಗಳ ಗಡಿಗೆ ಹೊಂದಿಕೊಂಡಂತೆ ಇರುವ 19 ಜಿಲ್ಲೆಗಳ 63 ತಾಲೂಕುಗಳಲ್ಲಿ 980 ಹಳ್ಳಿಗಳು ಗಡಿಭಾಗದಲ್ಲಿವೆ. ಈ ಗಡಿಭಾಗದ ಗ್ರಾಮಗಳ ಸಮಗ್ರ ಅಭಿವೃದ್ಧಿ ಮತ್ತು ಕನ್ನಡ ಭಾಷಿಕರ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಪ್ರಾಧಿಕಾರದಿಂದಲೇ ವಿವಿಗಳ ಮೂಲಕ ಸಮೀಕ್ಷೆ ನಡೆಸಿ ವರದಿ ಪಡೆಯಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಗಡಿ ಪ್ರದೇಶದಲ್ಲಿ ಜಿಲ್ಲಾ ಪಂಚಾಯಿತಿ ಮೂಲಕ ನರೇಗಾ ಯೋಜನೆಯಿಂದ ಕೆಲವು ಕಟ್ಟಡ ನಿರ್ಮಿಸಲಾಗಿದೆ. 8 ವಿಶ್ವವಿದ್ಯಾನಿಲಯಗಳ ಮೂಲಕ ಗಡಿ ಗ್ರಾಮಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಯ ಕುರಿತು ವೈಜ್ಞಾನಿಕ ಅಧ್ಯಯನ ಮಾಡಲಾಗುತ್ತಿದೆ. ಗಡಿ ಭಾಗದಲ್ಲಿನ ಆಚಾರ, ವಿಚಾರ ಮತ್ತು ಸಂಸ್ಕೃತಿಗೆ ಆದ್ಯತೆ ನೀಡಲಾಗುತ್ತಿದೆ. ಗಡಿ ಭಾಗದ ಗ್ರಾಮಗಳಲ್ಲಿ ಕೇವಲ ರಸ್ತೆ, ಚರಂಡಿ ನಿರ್ಮಾಣಕ್ಕೆ ಸೀಮಿತರಾಗಬೇಡಿ. ಬದಲಿಗೆ ಗ್ರಾಪಂನ ಬಜೆಟ್‌ನಲ್ಲಿ ಸಾಂಸ್ಕೃತಿಕ ನಿಧಿಯನ್ನು ಸ್ಥಾಪಿಸಿ ಕಲೆ ಮತ್ತು ಸಂಸ್ಕೃತಿಗೆ ಪ್ರೋತ್ಸಾಹ ನೀಡಬೇಕು. ಇದರಿಂದ ಆ ಭಾಗದ ಜನರಿಗೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

3 ಕಡೆ ಕರ್ನಾಟಕ ಭವನ ನಿರ್ಮಾಣ: ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವೆ ಗಡಿ ವಿವಾದ ಎನ್ನುವುದಕ್ಕಿಂತ ನೆಲದ ವಿವಾದ ಸೃಷ್ಟಿಯಾಗಿದೆ. ಅಲ್ಲಿಯೂ ಸೌಹಾರ್ದತೆ ಮೂಡಿಸಲು ಮುಂದಾಗಿದ್ದೇವೆ. ಗೋವಾ ಮತ್ತು ಕೊಂಕಣಿ ಭಾಗ ಸೇರಿದಂತೆ 3 ಕಡೆ ಕರ್ನಾಟಕ ಭವನ ನಿರ್ಮಿಸಲಾಗುತ್ತಿದೆ. ಗಡಿ ಭಾಗದ ಗ್ರಾಮಗಳಲ್ಲಿ ಶಾಲಾ ಕೊಠಡಿ ನಿರ್ಮಾಣ, ಉಪಕರಣ, ಕಾಂಪೌಂಡ್ ನಿರ್ಮಾಣ, ಸಾಂಸ್ಕೃತಿಕ ಭವನ ನಿರ್ಮಾಣ ಮುಂತಾದ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೇವೆ ಎಂದು ಅವರು ಹೇಳಿದರು.

4 ಕೋಟಿ ಅನುದಾನ: ರಾಜ್ಯದ ಗಡಿ ಭಾಗದಲ್ಲಿರುವ ಸುಮಾರು 371 ಸಂಸ್ಥೆಗಳಿಗೆ 4 ಕೋಟಿ ಅನುದಾನ ನೀಡಲಾಗಿದೆ. ಬಜೆಟ್‌ನಲ್ಲಿ ಸಂಸ್ಕೃತಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಸ್ವಾತಂತ್ರ್ಯ ಭಾರತದ ಅಮೃತ ಮಹೋತ್ಸವ ಅಂಗವಾಗಿ ಗಡಿ ಪ್ರದೇಶದಲ್ಲಿನ 371 ಸಂಸ್ಥೆಗಳಿಗೆ 4 ಕೋಟಿ ಅನುದಾನ ನೀಡಲಾಗಿದೆ. ಜಿಲ್ಲೆಯ ಸರಗೂರು, ಹೆಚ್.ಡಿ.ಕೋಟೆ ತಾಲೂಕಿನ 4 ಗ್ರಾಪಂಗೆ 1.3 ಕೋಟಿ ಅನುದಾನ ನೀಡಲಾಗಿದೆ. ಅದರಲ್ಲಿ 80 ಲಕ್ಷ ರೂ. ಅನುದಾನ ಬಳಕೆಯಾಗಿದೆ. ಉದ್ಯೋಗ ಅರಸಿ ಬರುವವರಿಗೆ ಕೆಲಸ ನೀಡಲಾಗುತ್ತಿದೆ. ಗಡಿ ಪ್ರದೇಶದ ಅಭಿವೃದ್ಧಿ ಕುರಿತಾದ ವರದಿ ಬಂದ ಬಳಿಕ ಹೆಚ್ಚಿನ ಅನುದಾನ ನೀಡಲಾಗುತ್ತದೆ. 2010ರಲ್ಲಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಮತ್ತು ಸಾಹಿತಿ ಡಾ.ಬರಗೂರು ರಾಮಚಂದ್ರಪ್ಪ ನೇತೃತ್ವದಲ್ಲಿ ಆರಂಭವಾದ ಈ ಪ್ರಾಧಿಕಾರವು ಈಗಲೂ ಗಡಿ ಅಭಿವೃದ್ಧಿಗೆ ಶ್ರಮಿಸುತ್ತಿದೆ ಎಂದು ಸ್ಪಷ್ಟಪಡಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಜಿಪಂ ಸಿಇಓ ಬಿ.ಆರ್. ಪೂರ್ಣಿಮಾ, ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್, ಉಪ ವಿಭಾಗಾಧಿಕಾರಿ ಕಮಲಾಬಾಯಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಮಾಲತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಬಸವರಾಜು, ಗ್ರಾಮೀಣ ಕುಡಿಯುವ ನೀರು ಇಲಾಖೆ ಕಾರ್ಯಪಾಲಕ ಅಭಿಯಂತರ ಸುರೇಶ್‌ಬಾಬು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ಡಿ.17, ಕನ್ನಡ ಭಾಷೆ ಬೋಧನೆ ಕುರಿತು ಕಾರ್ಯಾಗಾರ



ಮೈಸೂರು,ಡಿ.13(ಪಿಎಂ)–ದಿ ಕೋಡಿಂಗ್ ಫೋನಿಕ್ಸ್ ಅಕಾಡೆಮಿ ಇಂಡಿಯಾ, ಅರ್ಲಿ ಚೈಲ್ಡ್‌ವುಡ್ ಅಸೋಸಿಯೇಷನ್ ಮತ್ತು ಫಸ್ಟ್ ಕರ್ನಾಟಕ ಸಂಯುಕ್ತಾಶ್ರಯದಲ್ಲಿ ಡಿ.17ರಂದು 'ದಿ ಮ್ಯಾಜಿಕ್ ಆಫ್ ಕೋಡಿಂಗ್ ಫೋನಿಕ್ಸ್ ಕನ್ನಡ' ಶೀರ್ಷಿಕೆಯಡಿ ಶಿಕ್ಷಕರಿಗೆ ಕನ್ನಡ ಭಾಷೆಯ ಪರಿಣಾಮಕಾರಿ ಬೋಧನಾ ವಿಧಾನ ಕುರಿತು ಉಚಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಅಕಾಡೆಮಿ ಸಂಸ್ಥಾಪಕಿ ಹಾಗೂ ಸಿಇಓ ಡಾ.ರಜನಿ ರಾವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11ರಿಂದ ಮಧ್ಯಾಹ್ನ 2ರವರೆಗೆ ಕುವೆಂಪುನಗರದ ಬಿಜಿಎಸ್ ಅಪೋಲೋ ಆಸ್ಪತ್ರೆ ಬಳಿಯ ಶ್ರೀ ಆದಿಚುಂಚನಗಿರಿ ಸೆಂಟ್ರಲ್ ಸ್ಕೂಲ್ ಮತ್ತು ಬಿಜಿಎಸ್ ಬಿ.ಇಡಿ ಕಾಲೇಜಿನ ಸಭಾಂಗಣದಲ್ಲಿ ಕಾರ್ಯಾಗಾರ ನಡೆಯಲಿದ್ದು, ಆಸಕ್ತ ಕನ್ನಡ ಭಾಷಾ ಶಿಕ್ಷಕರು ಪಾಲ್ಗೊಳ್ಳಬಹುದು ಎಂದರು. ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ಎಸ್.ಎ.ರಾಮದಾಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ದಕ್ಷಿಣ ವಲಯ ಬಿಇಓ ರಾಮಾರಾಧ್ಯ, ಬಿಆರ್‌ಸಿ ಶ್ರೀಕಂಠಸ್ವಾಮಿ ಉಪಸ್ಥಿತರಿರುವರು. ಕನ್ನಡ ಭಾಷೆಯ ಕೋಡಿಂಗ್ ಫೋನಿಕ್ಸ್ ಅನ್ನು ನಾನೇ ಆವಿಷ್ಕಾರ ಮಾಡಿದ್ದು, ಇದು ಕನ್ನಡ ಭಾಷೆಯನ್ನು ಅತ್ಯಂತ ಸರಳವಾಗಿ ಯಾವುದೇ ಒತ್ತಡವಿಲ್ಲದೆ ಕಲಿಯಲು ಸಾಧ್ಯ ಮಾಡಲಿದೆ ಎಂದು ತಿಳಿಸಿದರು.

ಯಾವುದೇ ಭಾಷೆಯಾದರೂ 3ನೇ ತರಗತಿಯೊಳಗೆ ಓದಲು ಮತ್ತು ಬರೆಯಲು ಮಕ್ಕಳು ಕಲಿಯಬೇಕು. ಇದರಿಂದ ಮುಂದಿನ ತರಗತಿಯಲ್ಲಿ ಭಾಷೆಯಲ್ಲಿ ತಪ್ಪು ಮಾಡುವುದನ್ನು ತಡೆಗಟ್ಟಬಹುದು. ಜೊತೆಗೆ ಇತರೆ ವಿಷಯಗಳನ್ನು ಓದಿ ಸರಿಯಾಗಿ ಅರ್ಥೈಸಿಕೊಳ್ಳಬಹುದು ಎಂದರು ಹೇಳಿದರು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಅಕಾಡೆಮಿ ಸಿಬ್ಬಂದಿ ರೇಖಾ, ನಿರೂಪಕಿ ಸುಮಾರಾಜ್‌ಕುಮಾರ್ ಗೋಷ್ಠಿಯಲ್ಲಿದ್ದರು.

ಒಳಮೀಸಲಾತಿ ಜಾರಿಗೆ ದಲಿತ ಚಳವಳಿ ನವನಿರ್ಮಾಣ ವೇದಿಕೆ ಒತ್ತಾಯ



ಮೈಸೂರು,ಡಿ.13(ಪಿಎಂ)– ನ್ಯಾ.ಸದಾಶಿವ ಆಯೋಗದ ವರದಿಯಂತೆ ಒಳ ಮೀಸಲಾತಿ ಜಾರಿಗೊಳಿಸಬೇಕೆಂದು ಕರ್ನಾಟಕ ದಲಿತ ಚಳುವಳಿ ನವ ನಿರ್ಮಾಣ ವೇದಿಕೆ ಒತ್ತಾಯಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಚಾಲನಾ ಸಮಿತಿಯ ಹರಿಹರ ಆನಂದಸ್ವಾಮಿ, ಎಲ್ಲಾ ಸರ್ಕಾರಗಳು ಮೊದಲಿನಿಂದಲೂ ಒಳಮೀಸಲಾತಿ ಜಾರಿಗೊಳಿಸದೇ ಅಸ್ಪೃಶ್ಯತೆ ನೋವುಂಡ ಜಾತಿಗಳ ನಡುವೆ ಒಡೆದು ಆಳುವ ನೀತಿ ಅನುಸರಿಸುತ್ತಿವೆ. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಡಿ.11ರಂದು ಸದಾಶಿವ ಆಯೋಗದ ಜಾರಿಗೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದ ಹೋರಾಟಗಾರರ ಮೇಲೆ ಪೊಲೀಸರು ಲಾಠಿ ಚಾರ್ಜ್ ನಡೆಸಿದ್ದು, ಇದನ್ನು ವೇದಿಕೆ ಖಂಡಿಸುತ್ತದೆ ಎಂದು ಕಿಡಿಕಾರಿದರು. ದಲಿತ ಚಳುವಳಿಗಾರರು ಬಣಗಳನ್ನು ತ್ಯಜಿಸಿ ಒಗ್ಗಟ್ಟು ಪ್ರದರ್ಶಿಸಬೇಕು. 70ರ ದಶಕದಂತೆ ದಲಿತ ಚಳವಳಿ ಮತ್ತೆ ಪ್ರಬಲವಾಗಬೇಕು ಎಂದರಲ್ಲದೆ, ಬಿಜೆಪಿಯಲ್ಲಿರುವ ಎಲ್ಲಾ ದಲಿತ ಸಮುದಾಯದ ಜನಪ್ರತಿನಿಧಿಗಳು ಆ ಪಕ್ಷದ ಗುಲಾಮರಾಗಿದ್ದಾರೆ ಎಂದು ಕಿಡಿಕಾರಿದರು.

ಮೇಲ್ವರ್ಗದ ಮೀಸಲು ರದ್ದಿಗೆ ಒತ್ತಾಯ: ವೇದಿಕೆ ಮುಖಂಡ ಹೊರಳವಾಡಿ ನಂಜುಂಡಸ್ವಾಮಿ ಮಾತನಾಡಿ, ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದವರಿಗೆ ಜಾರಿಗೊಳಿಸಿರುವ ಮೀಸಲಾತಿ ಸೌಲಭ್ಯವು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ. ಕೂಡಲೇ ಇದನ್ನು ಕೇಂದ್ರ ಸರ್ಕಾರ ರದ್ದುಗೊಳಿಸಬೇಕು ಎಂದು ಒತ್ತಾಯಿಸಿದರು.

ದಲಿತರ ಭೂಮಿ ರಕ್ಷಣೆಗೆ ಪೂರಕವಾಗಿ ಪರಿಶಿಷ್ಟ ಜಾತಿ ಮತ್ತು ವರ್ಗದ ಭೂ ಪರಭಾರೆ ನಿಷೇಧ ಕಾಯ್ದೆಗೆ (ಪಿಟಿಸಿಎಲ್) ತಿದ್ದುಪಡಿ ತರಬೇಕು. ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೊಳಿಸಬೇಕು. ಸಫಾಯಿ ಕರ್ಮಚಾರಿಗಳ ಶ್ರೇಯೋಭಿವೃದ್ಧಿಗಾಗಿ ಐಪಿಡಿ ಸಾಲಪ್ಪನವರ ವರದಿ ಜಾರಿಗೊಳಿಸಬೇಕೆಂದು ಆಗ್ರಹಿಸಿದರು. ವೇದಿಕೆಯ ಮುಖಂಡರಾದ ಬಂಗವಾದಿ ನಾರಾಯಣಪ್ಪ, ಸಂಘಸೇನಾ ಗೋಷ್ಠಿಯಲ್ಲಿದ್ದರು.

ನಾನು ಎನ್.ಆರ್. ಕ್ಷೇತ್ರದ ಟಿಕೆಟ್ ಆಕಾಂಕ್ಷಿ



ಮೈಸೂರು, ಡಿ.13(ಜಿಎ)–ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಮೈಸೂರಿನ ನರಸಿಂಹರಾಜ ಕ್ಷೇತ್ರದಿಂದ ಸ್ಪರ್ಧಿಸಲು ನಾನು ಬಿಜೆಪಿ ಟಿಕೆಟ್ ಆಕಾಂಕ್ಷಿ ಎಂದು ಬಿಜೆಪಿ ಮುಖಂಡ ವಿ.ಗಿರಿಧರ್ ತಿಳಿಸಿದ್ದಾರೆ. ನರಸಿಂಹರಾಜ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿಯಿಂದ ಈಗಾಗಲೇ 9ಕ್ಕೂ ಅಧಿಕ ಆಕಾಂಕ್ಷಿಗಳ ಹೆಸರು ಕೇಳಿಬರುತ್ತಿದ್ದು, ಅದರಲ್ಲಿ ಗಿರಿಧರ್ ಸಹ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಹಲವಾರು ವರ್ಷಗಳಿಂದ ಬಿಜೆಪಿ ಪಕ್ಷದಲ್ಲಿ ನಿಷ್ಠಾವಂತ ಕಾರ್ಯಕರ್ತನಾಗಿದ್ದಾರೆ. 2014ರಲ್ಲಿ ಮೋದಿ ಅವರು ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಪಕ್ಷ ಇವರಿಗೆ ನೀಡಿದ್ದ ಜವಾಬ್ದಾರಿಯನ್ನು ಶಿಸ್ತಿನಿಂದ ನಿರ್ವಹಿಸಿ ಸೈ ಎನಿಸಿಕೊಂಡಿದ್ದರು. ಕಳೆದ ಬಾರಿಯೇ ಈ ಕ್ಷೇತ್ರದ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದು, ಸ್ಪರ್ಧಿಸಲು ನಿರ್ಧರಿಸಿದ್ದರು. ಆದರೆ, ಅವಕಾಶ ಸಿಗಲಿಲ್ಲ. ಈ ಬಾರಿಯಾದರೂ ಪಕ್ಷಕ್ಕಾಗಿ ದುಡಿದಿರುವುದನ್ನು ಪರಿಗಣಿಸಿ ಟಿಕೆಟ್ ನೀಡುತ್ತಾರೆ ಎಂಬ ನಿರೀಕ್ಷೆಯಲ್ಲಿದ್ದಾರೆ.

ಇಂದು ರಾಜ್ಯೋತ್ಸವ

ಮೈಸೂರು: ಎನ್.ಆರ್.ಮೊಹಲ್ಲಾದ ಶಿವಾಜಿ ಮುಖ್ಯರಸ್ತೆ(ಪಾರ್ಕ್ ಮುಂದೆ)ಯಲ್ಲಿ ನಾಳೆ (ಡಿ.14) ಸಂಜೆ 6.30ಕ್ಕೆ ಜೈ ಭುವನೇಶ್ವರಿ ಕನ್ನಡ ಕಲಾ ಸಮಿತಿ 35ನೇ ವರ್ಷದ ವಾರ್ಷಿಕೋತ್ಸವ ಮತ್ತು 67ನೇ ಕನ್ನಡ ರಾಜ್ಯೋತ್ಸವ ಆಚರಣೆ ಹಮ್ಮಿಕೊಳ್ಳಲಾಗಿದೆ. ಮೇಯರ್ ಶಿವಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಪತ್ರಕರ್ತ ಅಂಶಿಪ್ರಸನ್ನಕುಮಾರ್, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಬಿಜೆಪಿ ಮುಖಂಡ ಬಿ.ಪಿ. ಮಂಜುನಾಥ್, ಜೈ ಭುವನೇಶ್ವರಿ ಕನ್ನಡ ಕಲಾ ಸಮಿತಿ ಅಧ್ಯಕ್ಷ ಮಂಜುನಾಥ್(ಮಿಲ್ಕ್ ಮಂಜು) ಮತ್ತಿತರರು ಭಾಗವಹಿಸಲಿದ್ದಾರೆ.

ಎಸ್‌ಸಿ/ಎಸ್‌ಟಿ ಒಳ ಮೀಸಲಾತಿ ಸಂಬಂಧ ಮಾಧುಸ್ವಾಮಿ ನೇತೃತ್ವದಲ್ಲಿ ಉಪಸಮಿತಿ



ಬೆಂಗಳೂರು, ಡಿ.13(ಕೆಎಂಶಿ)– ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಅಧ್ಯಕ್ಷತೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಲ್ಲಿ ಒಳ ಮೀಸಲಾತಿ ಕಲ್ಪಿಸಲು ಸಚಿವ ಸಂಪುಟ ಉಪಸಮಿತಿಯನ್ನು ಸರ್ಕಾರ ನೇಮಿಸಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣ ಹೆಚ್ಚಿಸಿದ ಬೆನ್ನಲ್ಲೇ ಒಳ ಮೀಸಲಾತಿ ಕೂಗು ಕೇಳಿ ಬಂದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಒಳಮೀಸಲಾತಿ ಕುರಿತು ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ಸಂಪುಟದ ಉಪಸಮಿತಿ ರಚಿಸಿದ್ದಾರೆ. ಸಮಿತಿಯಲ್ಲಿ ಮಾಧುಸ್ವಾಮಿ ಅವರಲ್ಲದೆ, ಜಲಸಂಪನ್ಮೂಲ ಸಚಿವ ಗೋವಿಂದ ಎಂ.ಕಾರಜೋಳ, ಮೀನು ಗಾರಿಕೆ ಸಚಿವ ಎಸ್.ಅಂಗಾರ, ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ್, ಆರೋಗ್ಯ ಮತ್ತು ವೈದ್ಯಕೀಯ ಸಚಿವ ಡಾ.ಕೆ.ಸುಧಾಕರ್ ಸದಸ್ಯರಾಗಿರುತ್ತಾರೆ. ನ.17ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಕುರಿತು ಸಂಪುಟ ಉಪಸಮಿತಿ ರಚಿಸಲು ತೀರ್ಮಾನ ಕೈಗೊಳ್ಳಲಾಗಿತ್ತು. ಆದರೆ ಇದೀಗ ಒಳ ಮೀಸಲಾತಿ ಆಗ್ರಹಿಸಿ, ಹೋರಾಟ ಆರಂಭ ವಾಗುತ್ತಿದ್ದಂತೆ ಮುಖ್ಯಮಂತ್ರಿಯವರು ಸಂಪುಟದ ಉಪಸಮಿತಿ ರಚಿಸಿ ಆದೇಶ ಹೊರಡಿಸಿದ್ದಾರೆ. ಈ ಸಮಿತಿಗೆ ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ಇತರೆ ಇಲಾಖೆಗಳು ಅಗತ್ಯ ನೆರವು ನೀಡಬೇಕೆಂದು ಆದೇಶದ ಪ್ರತಿಯಲ್ಲಿ ಹೇಳಲಾಗಿದೆ.

ಪಿ.ಎಸ್.ವಸ್ತ್ರದ್ ಮುರುಘಾಮಠದ ಆಡಳಿತಾಧಿಕಾರಿ



ಚಿತ್ರದುರ್ಗ, ಡಿ.13– ಕೊನೆಗೂ ರಾಜ್ಯ ಸರ್ಕಾರ ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ್ ಅವರನ್ನು ಚಿತ್ರದುರ್ಗದ ಮುರುಘಾಮಠದ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದೆ. ಮಠದ ಲೆಕ್ಕಪತ್ರ ನಿರ್ವಹಣೆ, ಮಠದ ಚರ ಸ್ಥಿರಾಸ್ತಿ ಹಿತದೃಷ್ಟಿಯಿಂದ ಆಡಳಿತಾಧಿಕಾರಿ ನೇಮಿಸಲಾಗಿದೆ. ವಸ್ತ್ರದ್ ಅವರು ಮುರುಘಾಮಠದ ಟ್ರಸ್ಟ್ ಮತ್ತು ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಜವಾಬ್ದಾರಿ ನಿರ್ವಹಿಸಲಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಶಿವಮೂರ್ತಿ ಮುರುಘಾ ಶರಣರನ್ನು ಪೋಕ್ಸೋ ಕಾಯ್ದೆಯಡಿ ಬಂಧಿಸಲಾಗಿದ್ದು, ಅವರು ನ್ಯಾಯಾಂಗ ಬಂಧನದಲ್ಲಿರುವ ಹಿನ್ನೆಲೆಯಲ್ಲಿ ಟ್ರಸ್ಟ್ ಮತ್ತು ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಆಡಳಿತಾಧಿಕಾರಿ ನೇಮಕ ಮಾಡುವಂತೆ ಭಕ್ತರು ಸರ್ಕಾರಕ್ಕೆ ಒತ್ತಾಯಿಸಿದ್ದರು.

ನಾಳೆ ಪಾಲಿಕೆ ಕೌನ್ಸಿಲ್ ಸಭೆ

ಮೈಸೂರು,ಡಿ.13–ಮೈಸೂರು ಮಹಾನಗರಪಾಲಿಕೆ ವತಿಯಿಂದ ಡಿ.15ರ ಗುರುವಾರ ಅಪರಾಹ್ನ 3 ಗಂಟೆಗೆ ಮೈಸೂರು ಮಹಾನಗರ ಪಾಲಿಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಡಿಸೆಂಬರ್ ಮಾಹೆಯ ಸಾಮಾನ್ಯ ಕೌನ್ಸಿಲ್ ಸಭೆಯನ್ನು ಏರ್ಪಡಿಸಲಾಗಿದೆ ಎಂದು ನಗರ ಪಾಲಿಕೆ ಕೌನ್ಸಿಲ್ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉರುಳಿಗೆ ಹುಲಿ ಬಲಿ ಪ್ರಕರಣದ ಹಿನ್ನೆಲೆ

ಅರಣ್ಯದಂಚಿನ ಗ್ರಾಮಗಳಲ್ಲಿ ಜಾಗೃತಿ; ಉರುಳು ಪತ್ತೆ ಕಾರ್ಯಾಚರಣೆ





ಕಾಡಂಚಿನ ಗ್ರಾಮದಲ್ಲಿ ಉರುಳಿನ ಬಗ್ಗೆ ಜಾಗೃತಿ ಜಾಥಾ ನಡೆಸುತ್ತಿರುವುದು. ಬಲಚಿತ್ರದಲ್ಲಿ ಬೇಟೆಗಾರರು ಹಾಕಿದ್ದ ಉರುಳು ಪತ್ತೆ ಕಾರ್ಯಾಚರಣೆಯಲ್ಲಿ ತೊಡಗಿರುವ ಅರಣ್ಯ ಸಿಬ್ಬಂದಿಯನ್ನು ಕಾಣಬಹುದು.

ಅರಣ್ಯ, ಪೊಲೀಸ್ ಇಲಾಖೆಗೆ ವಿವಿಧ ಸ್ವಯಂ ಸೇವಾ ಸಂಸ್ಥೆಗಳು ಸಾಥ್

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಕಾಡಂಚಿನ ಗ್ರಾಮಗಳು ಹಾಗೂ ಜಮೀನುಗಳ ಹಳ್ಳಗಳಲ್ಲಿ ಯಾರಾದರೂ ಉರುಳು ಹಾಕಲು ಬಂದರೆ ಅರಣ್ಯ ಇಲಾಖೆ ಸಹಾಯವಾಣಿ 1926 ಅಥವಾ ಮೊ.ಸಂ. 9482011543 ಕರೆ ಮಾಡಿ ಮಾಹಿತಿ ನೀಡುವಂತೆ ಅರಣ್ಯ ಇಲಾಖೆ ಅಧಿಕಾರಿಗಳು ಕೋರಿದ್ದಾರೆ.

ಮೈಸೂರು,ಡಿ.13(ಎಂಟಿವೈ)– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅಂತರಸಂತೆ ವಲಯ ಸಮೀಪದ ತಾರಕ ಹಳ್ಳದ ಬಳಿ ಮೂರು ಮರಿಯಿದ್ದ ತಾಯಿ ಹುಲಿ ಉರುಳಿಗೆ ಬಲಿಯಾದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಕಾಡಂಚಿನ ಗ್ರಾಮಗಳಲ್ಲಿ ಜಾಗೃತಿ ಮೂಡಿಸುವುದರೊಂದಿಗೆ ಅರಣ್ಯದಂಚಿನಲ್ಲಿ ಉರುಳು ಪತ್ತೆ ಕಾರ್ಯಾಚರಣೆ ನಡೆಸಿತು.

ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ವಲಯದ ಕಾಕನಕೋಟೆ ಸಫಾರಿ ಕೇಂದ್ರದ ಬಳಿಯಿಂದ ಅರಣ್ಯ, ಪೊಲೀಸ್ ಇಲಾಖೆ ಹಾಗೂ ವಿವಿಧ ಸ್ವಯಂಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಉರುಳಿನಿಂದ ವನ್ಯಜೀವಿಗಳಿಗೆ ಆಗುತ್ತಿರುವ ಗಂಡಾಂತರದ ಬಗ್ಗೆ ಕಾಡಂಚಿನ ಗ್ರಾಮ ಹಾಗೂ ಹಾಡಿಗಳಲ್ಲಿ ಜಾಗೃತಿ ಮೂಡಿಸಲಾಯಿತು. ಅಲ್ಲದೆ, ತಮ್ಮ ಜಮೀನಿನಲ್ಲಿ ಯಾರೇ ಉರುಳು ಹಾಕಲು ಬಂದರೆ ಆಕ್ಷೇಪಿಸಬೇಕು. ಇಲ್ಲದಿದ್ದರೆ ಅರಣ್ಯ ಇಲಾಖೆಗೆ ಮಾಹಿತಿ ನೀಡಬೇಕು. ಬೇಟೆಗಾರರು ಹಾಕುವ ಉರುಳಿನಿಂದಾಗಿ ಅತ್ಯಮೂಲ್ಯ ಪ್ರಾಣಿಗಳು ಬಲಿಯಾಗುತ್ತಿವೆ ಎಂದು ಮನವರಿಕೆ ಮಾಡಿಕೊಡಲಾಯಿತು. ಅಲ್ಲದೆ ಗ್ರಾಮಗಳಲ್ಲಿ ಭಿತ್ತಿಪತ್ರ ಹಂಚಿ, ವನ್ಯಜೀವಿಗಳ ಸಂರಕ್ಷಣೆಗೆ ಸ್ಥಳೀಯರ ಸಹಕಾರದ ಭರವಸೆ ಪಡೆಯಲಾಯಿತು.

ಕಾಕನಕೋಟೆ ಸಫಾರಿ ಕೇಂದ್ರದಿಂದ ಆರಂಭವಾದ ಜಾಗೃತಿ ಜಾಥ ದಮ್ಮನಕಟ್ಟೆ, ಹುಣಸೆಕುಪ್ಪೆ, ಸತ್ತಿಗೆಹುಂಡಿ, ಹುಣಸೆ ಹಾಡಿ, ತಾರಕ ಗ್ರಾಮ, ಕೊತ್ತನಹಳ್ಳಿ, ಜಿಂಯಾರ ಸೇರಿದಂತೆ ಇನ್ನಿತರ ಗ್ರಾಮಗಳಿಗೆ ತೆರಳಿ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಯುವಕರು ಹಾಗೂ ಹಿರಿಯ ನಾಗರಿಕರು 'ಉರುಳು' ಹಾಕುವುದರಿಂದ ಆಗುತ್ತಿರುವ ತೊಂದರೆಯನ್ನು ವಿವರಿಸಲಾಯಿತು.

ಈ ಸಂದರ್ಭದಲ್ಲಿ ಎನ್‌ಟಿಸಿಎ ಐಜಿ (ಫಾರೆಸ್ಟ್) ಮುರಳಿ, ಮೇಟಿಕುಪ್ಪೆ ಉಪ ವಿಭಾಗದ ಎಸಿಎಫ್ ರಂಗಸ್ವಾಮಿ, ಆರ್‌ಎಫ್‌ಓ ಸಿದ್ದರಾಜು, ಅಂತರಸಂತೆ ಠಾಣೆ ಸಬ್‌ಇನ್ಸ್‌ಪೆಕ್ಟರ್ ಜಯಪ್ರಕಾಶ್, ಡಬ್ಲ್ಯುಟಿಐ ಸದಸ್ಯರು, ಸ್ಥಳೀಯ ಚುನಾಯಿತ ಸದಸ್ಯರು, ಇಡಿಸಿ ಸದಸ್ಯರು ಪಾಲ್ಗೊಂಡಿದ್ದರು.

ಉರುಳು ಪತ್ತೆ ಕಾರ್ಯಾಚರಣೆ: ಸ್ವಯಂ ಸೇವಕರೊಂದಿಗೆ ಜಾಗೃತಿ ಜಾಥಾ ನಡೆಸಿದ ಬಳಿಕ ಅರಣ್ಯ ಪ್ರದೇಶದ ಅಂಚಿನಲ್ಲಿರುವ ಜಮೀನಿನ ಬೇಲಿ, ಹಳ್ಳದಲ್ಲಿ ಬೇಟೆಗಾರರು ಹಾಕಿದ್ದ ಉರುಳು ತೆರವು ಕಾರ್ಯಾಚರಣೆ ನಡೆಸಲಾಯಿತು. ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಕಾಡಂದಿ, ಮೊಲ ಸೇರಿದಂತೆ ವಿವಿಧ ಸಣ್ಣಪುಟ್ಟ ಪ್ರಾಣಿಗಳ ಬೇಟೆಗಾಗಿ ಹಾಕಲಾಗಿದ್ದ ತಂತಿ ಹಾಗೂ ಪ್ಲಾಸ್ಟಿಕ್ ವೈರ್‌ನಿಂದ ಮಾಡಲಾಗಿದ್ದ ಉರುಳನ್ನು ತೆರವು ಮಾಡಿದರು. ಕಾರ್ಯಾಚರಣೆ ವೇಳೆ ಸುಮಾರು 30ಕ್ಕೂ ಹೆಚ್ಚು ಉರುಳು ಪತ್ತೆಯಾಗಿದ್ದು, ಆ ಸ್ಥಳದಲ್ಲಿ ಎರಡು ದಿನಕ್ಕೊಮ್ಮೆ ಪರಿಶೀಲಿಸಲು ನಿರ್ಧರಿಸಲಾಗಿದೆ. ಉರುಳು ಪತ್ತೆ ಕಾರ್ಯಾಚರಣೆಯಲ್ಲಿ ಎನ್‌ಟಿಸಿಎ ಐಜಿ(ಫಾರೆಸ್ಟ್) ಮುರುಳಿ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ನರಗುಂದ, ಮೇಟಿಕುಪ್ಪೆ ಉಪವಿಭಾಗದ ಎಸಿಎಫ್ ರಂಗಸ್ವಾಮಿ, ಆರ್‌ಎಫ್‌ಓಗಳಾದ ಸಿದ್ದರಾಜು, ಹರ್ಷಿತ್, ಅರುಣ್ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ



ಸತ್ಯಾಗ್ರಹ ನಾಡಲ್ಲಿ ಇನ್ನೂ ಕಾವೇರದ ಚುನಾವಣಾ ಕಣ

▸ ಜೆಡಿಎಸ್‌ನಿಂದ ಹಾಲಿ ಶಾಸಕ ತಮ್ಮಣ್ಣ ▸ ಕಾಂಗ್ರೆಸ್‌ನಿಂದ ಗುರುಚರಣ್ ಸ್ಪರ್ಧೆ ಖಚಿತ ▸ ಬಿಜೆಪಿಯಿಂದ ಯೋಗೇಶ್ವರ್ ಬಗ್ಗೆ ಗುಸು ಗುಸು ಚರ್ಚೆ

ಎಂ.ಕೆ.ಮೋಹನ್‌ರಾಜ್

ಮಂಡ್ಯ, ಡಿ.13– ಸಕ್ಕರೆ ನಾಡು ಮಂಡ್ಯ ಜಿಲ್ಲೆಯ ಎಲ್ಲಾ ಕ್ಷೇತ್ರದಲ್ಲೂ ಪ್ರತಿಯೊಂದು ಪಕ್ಷದಲ್ಲೂ ಕನಿಷ್ಠ ಇಬ್ಬಿಬ್ಬರು ಟಿಕೆಟ್ ಆಕಾಂಕ್ಷಿಗಳು ಸ್ಪರ್ಧೆಗಾಗಿ ಪೈಪೋಟಿ ನಡೆಸುತ್ತಾ ಓಡಾಡುತ್ತಿದ್ದರೆ, ಘಟಾನುಘಟಿ ರಾಜಕಾರಣಿಗಳನ್ನು ರಾಷ್ಟ್ರ ಹಾಗೂ ರಾಜ್ಯ ರಾಜಕಾರಣಕ್ಕೆ ಕೊಡುಗೆ ಕೊಟ್ಟಿರುವ ಮಂಡ್ಯ ಜಿಲ್ಲೆಯ ಮದ್ದೂರು ವಿಧಾನಸಭಾ ಕ್ಷೇತ್ರ ಮಾತ್ರ ಇನ್ನೂ ರಂಗೇರಿಲ್ಲ. ಇದಕ್ಕೆ ಪ್ರಮುಖ ಕಾರಣ ಎಲ್ಲಾ ಪಕ್ಷದಲ್ಲೂ ಅಭ್ಯರ್ಥಿಗಳು ಬಹುತೇಕ ಅಂತಿಮವಾಗಿದ್ದಾರೆ.

ಹೆಚ್.ಕೆ.ವೀರಣ್ಣಗೌಡ, ಎಸ್.ಸಿ.ಮಲ್ಲಯ್ಯ, ಎಸ್.ಎಂ.ಕೃಷ್ಣ, ಜಿ.ಮಾದೇಗೌಡ, ಡಾ. ಅಂಬರೀಷ್, ಎಂ.ಎಸ್.ಸಿದ್ದರಾಜುರಂತಹ ಘಟಾನುಘಟಿ ನಾಯಕರನ್ನು ಕೊಡುಗೆಯಾಗಿ ಕೊಟ್ಟ ಮದ್ದೂರು ವಿಧಾನಸಭಾ ಕ್ಷೇತ್ರ ಈವರೆಗೆ ಎರಡು ಉಪಚುನಾವಣೆಗಳು ಸೇರಿದಂತೆ ಒಟ್ಟು 17 ಚುನಾವಣೆಗಳನ್ನು ಕಂಡಿದೆ. ಈ ಮೊದಲು ಮದ್ದೂರು ಕ್ಷೇತ್ರಕ್ಕೆ ಒಳಪಡುವ ಕೆ.ಎಂ.ದೊಡ್ಡಿ ಸೇರಿದಂತೆ ಆ ಭಾಗದ ಹಲವು ಪ್ರದೇಶಗಳು ಹಾಗೂ ಮಳವಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಿರುಗಾವಲು ಸೇರಿದಂತೆ ಕಿರುಗಾವಲು ವಿಧಾನಸಭಾ ಕ್ಷೇತ್ರ 2004ರವರೆಗೆ ಅಸ್ತಿತ್ವದಲ್ಲಿತ್ತು. ಬಳಿಕ ಕ್ಷೇತ್ರ ಪುನರ್‌ವಿಂಗಡಣೆಯಾಗಿ ಕೆ.ಎಂ.ದೊಡ್ಡಿ ಮದ್ದೂರಿಗೆ ಸೇರಿದರೆ ಕಿರುಗಾವಲು, ಮಳವಳ್ಳಿ ಕ್ಷೇತ್ರದ ಪಾಲಾಯಿತು.

ಎಸ್.ಎಂ.ಕೃಷ್ಣ ಅವರ ಬಿಗಿಹಿಡಿತದಿಂದ ಮದ್ದೂರು ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆಯಾಗಿತ್ತು. 2004ರಲ್ಲಿ ಎಸ್‌ಎಂಕೆ ಮದ್ದೂರು ತೊರೆದು ಚಾಮರಾಜಪೇಟೆಯತ್ತ ಮುಖ ಮಾಡಿ, ನಂತರ ರಾಷ್ಟ್ರ ರಾಜಕಾರಣದತ್ತ ತೆರಳಿದ ಬಳಿಕ ಕ್ಷೇತ್ರ ಕ್ರಮೇಣ ಜೆಡಿಎಸ್ ಭದ್ರಕೋಟೆಯಾಯಿತು.

ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿ ತಮ್ಮಣ್ಣ: ಸದ್ಯ 2023ರ ಚುನಾವಣೆಗೆ ಅಖಾಡ ಸಿದ್ಧವಾಗಿದ್ದು, ಜೆಡಿಎಸ್‌ನಿಂದ ಹಾಲಿ ಶಾಸಕ ಡಿ.ಸಿ.ತಮ್ಮಣ್ಣ ಸ್ಪರ್ಧೆ ಮಾಡುವುದು ಬಹುತೇಕ ಖಚಿತವಾಗಿದೆ. ಈ ಮೊದಲು ಕಿರುಗಾವಲು ಕ್ಷೇತ್ರದಲ್ಲಿ ಶಾಸಕರಾಗಿದ್ದ ತಮ್ಮಣ್ಣ, ಕ್ಷೇತ್ರ ಪುನರ್‌ವಿಂಗಡಣೆ ಬಳಿಕ ಮದ್ದೂರಿನ ಕಡೆ ಮುಖ ಮಾಡಿ, 2008ರಲ್ಲಿ ಕಾಂಗ್ರೆಸ್‌ನಿಂದ 2009ರ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸೋಲುಂಡಿದ್ದರು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಬೀಗರಾದ ತಮ್ಮಣ್ಣರನ್ನು 2013ರಲ್ಲಿ ಜೆಡಿಎಸ್‌ಗೆ ಸೇರ್ಪಡೆ ಮಾಡಿಕೊಂಡು ಟಿಕೆಟ್ ಕೊಡಲಾಯಿತು. 2013, 2018ರಲ್ಲಿ ಸತತ ಎರಡು ಬಾರಿ ಜೆಡಿಎಸ್‌ನಿಂದ ಆಯ್ಕೆಯಾಗಿರುವ ಇವರು, 2023ರಲ್ಲೂ ಗೆಲ್ಲುವ ಮೂಲಕ ಹ್ಯಾಟ್ರಿಕ್ ಗೆಲುವಿನ ಕನಸು ಕಾಣುತ್ತಿದ್ದಾರೆ.

ತಮ್ಮ ಬೆಂಬಲಿಗರಿಗೆ ಹೆಚ್ಚಿನ ಮಣೆ ಹಾಕುತ್ತಾರೆಂಬ ಆರೋಪ ಶಾಸಕರ ಮೇಲಿದೆ. ಕಳೆದ ಚುನಾವಣೆ ಸಮಯದಲ್ಲೇ ವಯಸ್ಸು 75 ದಾಟಿರುವುದರಿಂದ ಮುಂದಿನ ಚುನಾವಣೆಯಲ್ಲಿ ತಮ್ಮ ಕುಟುಂಬದ ಒಬ್ಬರಿಗೆ ಕ್ಷೇತ್ರ ಬಿಟ್ಟುಕೊಡುವುದಾಗಿ ಹೇಳಿದ್ದ ಶಾಸಕರು, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಮತ್ತೊಮ್ಮೆ ತಾವೇ ಕಣಕ್ಕಿಳಿಯಲು ತೀರ್ಮಾನಿಸಿದ್ದಾರೆ. ಇತ್ತ ಜೆಡಿಎಸ್‌ನಲ್ಲೇ ಇರುವ ಮಾಜಿ ಶಾಸಕಿ ಕಲ್ಪನಾ ಸಿದ್ದರಾಜು ಸಹ ಸ್ಪರ್ಧೆ ಹಂಬಲ ಹೊಂದಿದ್ದು, ಅವರಿಗೆ ಅವಕಾಶವಿಲ್ಲ ಎಂಬ ಮಾತು ಕೇಳಿ ಬರುತ್ತಿದೆ.

ಕಳೆದ ಸಮ್ಮಿಶ್ರ ಸರ್ಕಾರದಲ್ಲಿ ಸಾರಿಗೆ ಮಂತ್ರಿಯಾಗಿದ್ದ ಡಿ.ಸಿ.ತಮ್ಮಣ್ಣ ಅವರು, ಕ್ಷೇತ್ರಕ್ಕೆ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದು, ರಸ್ತೆಗಳು, ಹಲವು ಬಸ್ ನಿಲ್ದಾಣಗಳು ಹಾಗೂ ಪಾಸ್‌ಪೋರ್ಟ್ ಕೇಂದ್ರವನ್ನು ಮದ್ದೂರಿಗೆ ತಂದಿದ್ದು, ಗಮನಾರ್ಹ ಸಂಗತಿ. ಈ ಚುನಾವಣೆಯಲ್ಲಿ ಕೆಲಸಗಳು ಅವರ ಕೈ ಹಿಡಿಯುತ್ತವೆಯೇ ಕಾದು ನೋಡಬೇಕಿದೆ.

ಕಾಂಗ್ರೆಸ್‌ನಿಂದ ಗುರುಚರಣ್ ಕಣಕ್ಕೆ: ಕಾಂಗ್ರೆಸ್ ಪಕ್ಷದಿಂದ ಮಾಜಿ ಸಿಎಂ ಎಸ್.ಎಂ.ಕೃಷ್ಣ ಸಹೋದರ ಎಸ್.ಎಂ.ಶಂಕರ್ ಪುತ್ರ, ಜಿಪಂ ಮಾಜಿ ಅಧ್ಯಕ್ಷ ಗುರುಚರಣ್ ಸ್ಪರ್ಧಿಸಲಿದ್ದಾರೆ. ಈಗಾಗಲೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಗುರುಚರಣ್ ಅವರೇ ಅಭ್ಯರ್ಥಿ ಎಂದು ಘೋಷಿಸಿದ್ದಾರೆ ಎಂದು ಹೇಳಲಾಗಿದೆ. ಆದರೂ ಸಹ ವಳಗೆರೆಹಳ್ಳಿ ಗ್ರಾಮದ ಹಿರಿಯ ಕಾಂಗ್ರೆಸ್ಸಿಗ ಬಿ.ವಿ.ಶಂಕರೇಗೌಡ ಹಾಗೂ ವಿಧಾನಪರಿಷತ್ ಮಾಜಿ ಸದಸ್ಯ ಬಿ.ರಾಮಕೃಷ್ಣ ಟಿಕೆಟ್‌ಗಾಗಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದಾರೆ.

ಕಾಂಗ್ರೆಸ್‌ನಿಂದ ಹಲವು ಮಂದಿ ಟಿಕೆಟ್‌ಗಾಗಿ ಪೈಪೋಟಿ ನಡೆಸಿದರಾದರೂ ಡಿ.ಕೆ.ಶಿವಕುಮಾರ್ ಮಾತ್ರ ತಮ್ಮ ರಾಜಕೀಯ ಗುರು ಎಸ್.ಎಂ.ಕೃಷ್ಣ ಅವರ ಕುಟುಂಬ ರಾಜಕೀಯವಾಗಿ ಬೆಳೆಯಲು ಸಾಧ್ಯವಾಗುತ್ತಿಲ್ಲ ಎಂಬ ಕಾರಣಕ್ಕೆ ಎಸ್.ಎಂ.ಕೆ. ಅಣ್ಣನ ಮಗ ಗುರುಚರಣ್ ಅವರನ್ನು ಕಳೆದ ಒಂದೂವರೆ ವರ್ಷದ ಹಿಂದೆಯೇ ಅಭ್ಯರ್ಥಿ ಎಂದು ಘೋಷಿಸಿ, ಸಂಘಟನೆ ಮಾಡುವಂತೆ ಸೂಚಿಸಿದ್ದಾರೆ ಎನ್ನಲಾಗಿದೆ. ಈ ನಡುವೆ ಬಿಜೆಪಿಯಿಂದ ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ ಹೆಸರು ಕೇಳಿ ಬರುತ್ತಿದ್ದು, ಕದಲೂರು ಉದಯ್ ಸಹ ಕ್ಷೇತ್ರ ಪ್ರವಾಸದ ಮೂಲಕ ಚುನಾವಣೆಗೆ ಅಣಿಯಾಗುತ್ತಿದ್ದಾರೆ.

ಯೋಗೇಶ್ವರ್ ಬಗ್ಗೆ ಚರ್ಚೆ: ಕಳೆದ ಎರಡು ಚುನಾವಣೆಯಿಂದಲೂ ಮದ್ದೂರು ಕ್ಷೇತ್ರದಲ್ಲಿ ಚುನಾವಣೆ ಹತ್ತಿರ ಬಂದಾಗ ಮಾಜಿ ಸಚಿವ ಸಿ.ಪಿ.ಯೋಗೇಶ್ವರ್ ಹೆಸರು ಚಾಲ್ತಿಗೆ ಬರುತ್ತದೆ. ಕಳೆದ ಚುನಾವಣೆ ಸಮಯದಲ್ಲೇ ಚನ್ನಪಟ್ಟಣ ಬಿಟ್ಟು ಮದ್ದೂರಿನಿಂದ ಸ್ಪರ್ಧಿಸುತ್ತಾರೆ ಎಂಬ ಮಾತು ಕೇಳಿ ಬಂದಿತ್ತು. ಮದ್ದೂರು ಭಾಗದಲ್ಲಿ ಹಲವು ಕೆರೆಗಳಿಗೆ ಪಕ್ಕದ ಚನ್ನಪಟ್ಟಣದ ಇಗ್ಗಲೂರು ಜಲಾಶಯದಿಂದ ನೀರು ಕೊಡಿಸಿದ್ದ ಅವರು, ಮದ್ದೂರು ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದ್ದರು. ಈಗಲೂ ಸಹ ಅವರ ಬಗ್ಗೆ ಚರ್ಚೆ ಇದ್ದು, ಇತ್ತೀಚೆಗೆ ಕೇಂದ್ರ ಸಚಿವ ಕಿಶನ್ ಪಾಲ್ ಗುರ್ಜರ್ ಎರಡು ದಿನ ಮದ್ದೂರು ಪ್ರವಾಸ ಮಾಡಿದ್ದಾಗ ಯೋಗೇಶ್ವರ್ ಕೇಂದ್ರ ಸಚಿವರ ಜೊತೆಗೆ ಇಡೀ ಕ್ಷೇತ್ರ ಪ್ರವಾಸ ಮಾಡಿದ್ದರು. ಒಟ್ಟಾರೆ ಮದ್ದೂರು ಕ್ಷೇತ್ರದಲ್ಲಿ ಕದನ ಕಣ ರಂಗೇರದಿದ್ದರೂ ಚುನಾವಣೆಗೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಆಯಾ ಪಕ್ಷಗಳ ಅಭ್ಯರ್ಥಿಗಳು ಮಾಡಿಕೊಳ್ಳುತ್ತಿದ್ದಾರೆ.



ಡಿ.ಸಿ. ತಮ್ಮಣ್ಣ



ಗುರುಚರಣ್



ಸಿ.ಪಿ. ಯೋಗೀಶ್ವರ್

ಎಸ್.ಎಂ.ಕೃಷ್ಣರನ್ನು ಸೋಲಿಸಿದ್ದ ಜನ



1994ರಲ್ಲೂ ಸಹ ರಾಜಕೀಯ ಉತ್ತುಂಗದಲ್ಲಿದ್ದಾಗಲೇ ಅಘೋಷಿತ ಮುಖ್ಯಮಂತ್ರಿ ಅಭ್ಯರ್ಥಿಯಾಗಿದ್ದ ಎಸ್.ಎಂ.ಕೃಷ್ಣ, ಡಾ.ಎಂ.ಮಹೇಶ್ ಚಂದ್ ಎಂಬುವರ ವಿರುದ್ಧ 3464 ಮತಗಳ ಅಂತರದಿಂದ ಸೋಲನ್ನಪ್ಪಿದ್ದರು. ಆಗ ರಾಜ್ಯದಲ್ಲಿ ಕಾಂಗ್ರೆಸ್ ಬದಲಿಗೆ ಜನತಾದಳ ಅಧಿಕಾರಕ್ಕೆ ಬರುತ್ತದೆ. ಆದರೂ ಸಿಎಂ ಅಭ್ಯರ್ಥಿಯನ್ನು ಎರಡನೇ ಬಾರಿ ಮದ್ದೂರಿನ ಜನ ಸೋಲಿಸುತ್ತಾರೆ.

ಬಳಿಕ ಎಸ್.ಎಂ.ಕೃಷ್ಣ 1999ರಲ್ಲಿ ಪಾಂಚಜನ್ಯ ಯಾತ್ರೆ ಮೂಲಕ ರಾಜ್ಯವ್ಯಾಪಿ ಸಂಚರಿಸಿ, ಮದ್ದೂರಿನಲ್ಲಿ ಅಭೂತಪೂರ್ವ ಜಯ ಸಾಧಿಸುವ ಮೂಲಕ ರಾಜ್ಯದ ಸಿಎಂ ಆಗುತ್ತಾರೆ. ಈ ಮೂಲಕ ಮಂಡ್ಯ ಜಿಲ್ಲೆಯಿಂದ ಕೃಷ್ಣ ಸಿಎಂ ಆಗುತ್ತಾರೆ.

ರಾಷ್ಟ್ರ, ರಾಜ್ಯ ರಾಜಕಾರಣದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಎಸ್.ಎಂ.ಕೃಷ್ಣ, ಮದ್ದೂರಿನಿಂದ ಮೂರು ಬಾರಿ ಶಾಸಕರಾಗಿ, ದೇವರಾಜ ಅರಸು, ವೀರೇಂದ್ರ ಪಾಟೀಲ್, ಬಂಗಾರಪ್ಪ ಸಂಪುಟಗಳಲ್ಲಿ ವಿವಿಧ ಖಾತೆಗಳ ಸಚಿವರಾಗಿ, ಮೊಯ್ಲಿ ಸಿಎಂ ಆಗಿದ್ದ ಅವಧಿಯಲ್ಲಿ ಉಪಮುಖ್ಯಮಂತ್ರಿಯಾಗಿ, ರಾಜ್ಯ ವಿಧಾನಸಭೆಯ ಸ್ಪೀಕರ್ ಆಗಿ, 1999ರಿಂದ ನಾಲ್ಕೂವರೆ ವರ್ಷ ರಾಜ್ಯದ ಮುಖ್ಯಮಂತ್ರಿಯಾಗಿಯೂ ಸೇವೆ ಸಲ್ಲಿಸಿದ್ದು, ಇಂದಿರಾಗಾಂಧಿ ಸಂಪುಟದಲ್ಲಿ ಹಣಕಾಸು ಸಚಿವರಾಗಿ, ಮನಮೋಹನ್‌ಸಿಂಗ್ ಸಂಪುಟದಲ್ಲಿ ವಿದೇಶಾಂಗ ಸಚಿವರಾಗಿ ಹಾಗೂ 2004ರಲ್ಲಿ ಮಹಾರಾಷ್ಟ್ರ ರಾಜ್ಯಪಾಲರಾಗಿಯೂ ಎಸ್.ಎಂ.ಕೃಷ್ಣ ಸೇವೆ ಸಲ್ಲಿಸುವ ಮೂಲಕ ಮಂಡ್ಯ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಇನ್ನು ಇದೇ ಮದ್ದೂರಿನವರೇ ಆದ ಜಿ.ಮಾದೇಗೌಡರು ಮರೆಯಾದ ಕಿರುಗಾವಲು ಕ್ಷೇತ್ರದಿಂದ ಆರು ಬಾರಿ ಶಾಸಕರಾಗಿ ಆಯ್ಕೆಯಾಗಿ ದಾಖಲೆ ನಿರ್ಮಿಸಿ, 1978ರಲ್ಲಿ ಆರ್.ಗುಂಡೂರಾವ್ ಸಂಪುಟದಲ್ಲಿ ಗಣಿ ಮತ್ತು ಅರಣ್ಯ ಸಚಿವರಾಗಿಯೂ ಕಾರ್ಯ ನಿರ್ವಹಿಸಿ, ಎರಡು ಬಾರಿ ಮಂಡ್ಯ ಸಂಸದರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರಲ್ಲದೇ ಮದ್ದೂರಿನ ದೊಡ್ಡರಸಿನಕೆರೆಯ ನಟ ಅಂಬರೀಷ್ ಸಹ ಒಮ್ಮೆ ಮಂಡ್ಯ ಕ್ಷೇತ್ರದ ಶಾಸಕರಾಗಿ, ಸಚಿವರಾಗುವ ಮೂಲಕ ಜೊತೆಗೆ ಇದಕ್ಕೂ ಮುನ್ನ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಸತತ ಮೂರು ಬಾರಿ ಸಂಸದರಾಗಿ, ಕೇಂದ್ರ ಸಚಿವರಾಗಿಯೂ ಕಾರ್ಯ ನಿರ್ವಹಿಸಿದರೆ, ಮದ್ದೂರಿನವರೇ ಆದ ನಟಿ ರಮ್ಯಾ ಸಹ ಒಮ್ಮೆ ಮಂಡ್ಯ ಲೋಕಸಭಾ ಕ್ಷೇತ್ರದ ಸಂಸದರಾಗಿದ್ದರು. ಈ ಮೂಲಕ ಮದ್ದೂರಿನವರೇ 9 ಬಾರಿ ಮಂಡ್ಯ ಸಂಸದರಾಗಿದ್ದು ವಿಶೇಷ.

ಮದ್ದೂರು ಕ್ಷೇತ್ರದ ಶಾಸಕರ ಪರಂಪರೆ

ವರ್ಷ	ಶಾಸಕರ ಹೆಸರು	ಪಕ್ಷ
1952	ಎಚ್.ಕೆ.ವೀರಣ್ಣಗೌಡ	ಕಾಂಗ್ರೆಸ್
1957	ಎಚ್.ಕೆ.ವೀರಣ್ಣಗೌಡ	ಕಾಂಗ್ರೆಸ್
1962	ಎಸ್.ಎಂ.ಕೃಷ್ಣ	ಪ್ರಜಾ ಸೋಷಿಯಲಿಸ್ಟ್
1967	ಎಂ.ಮಂಚೇಗೌಡ	ಕಾಂಗ್ರೆಸ್
1972	ಎ.ಡಿ.ಬಿಳೀಗೌಡ	ಕಾಂಗ್ರೆಸ್
1978	ಎಂ.ಮಂಚೇಗೌಡ	ಜನತಾಪಕ್ಷ
1983	ಎಂ.ಮಂಚೇಗೌಡ	ಕಾಂಗ್ರೆಸ್
1984	ಜಯವಾಣಿ ಮಂಚೇಗೌಡ	ಕಾಂಗ್ರೆಸ್ (ಉಪಚುನಾವಣೆ)
1985	ಬಿ.ಅಪ್ಪಾಜಿಗೌಡ	ಜನತಾಪಕ್ಷ
1989	ಎಸ್.ಎಂ.ಕೃಷ್ಣ	ಕಾಂಗ್ರೆಸ್
1994	ಡಾ.ಎಂ.ಮಹೇಶ್‌ಚಂದ್	ಜನತಾದಳ
1999	ಎಸ್.ಎಂ.ಕೃಷ್ಣ	ಕಾಂಗ್ರೆಸ್
2004	ಡಿ.ಸಿ.ತಮ್ಮಣ್ಣ	ಕಾಂಗ್ರೆಸ್
2008	ಎಂ.ಎಸ್.ಸಿದ್ದರಾಜು	ಜೆಡಿಎಸ್
2009	ಕಲ್ಪನಾ ಸಿದ್ದರಾಜು	ಜೆಡಿಎಸ್
2013	ಡಿ.ಸಿ.ತಮ್ಮಣ್ಣ	ಜೆಡಿಎಸ್
2018	ಡಿ.ಸಿ.ತಮ್ಮಣ್ಣ	ಜೆಡಿಎಸ್

ಮದ್ದೂರು ಕ್ಷೇತ್ರ ವಿಶೇಷ



ರಾಜ್ಯಕ್ಕೆ ಮುಖ್ಯಮಂತ್ರಿ ಕೊಟ್ಟ, ಇಬ್ಬರು ಸಿಎಂ ಅಭ್ಯರ್ಥಿಯನ್ನೇ ಸೋಲಿಸಿದ ವೈಶಿಷ್ಟ್ಯ ಪೂರ್ಣ ಕ್ಷೇತ್ರ ಮದ್ದೂರು. ಮಂಡ್ಯ ಜಿಲ್ಲೆ ಘಟಾನುಘಟಿ ರಾಜಕಾರಣಿಗಳ ತವರು ಎಂದೂ ಕರೆಸಿಕೊಳ್ಳುತ್ತದೆ. ಆ ಪೈಕಿ ಶೇ.50ರಷ್ಟು ರಾಜಕೀಯ ನೇತಾರರಿಗೆ ಜನ್ಮಕೊಟ್ಟಿದ್ದು ಮದ್ದೂರು. ಜೊತೆಗೆ ರಾಜ್ಯಕ್ಕೆ ಮಂಡ್ಯ ಜಿಲ್ಲೆಯಿಂದ ಮುಖ್ಯಮಂತ್ರಿ ಕೊಟ್ಟ ತಾಲೂಕು ಸಹ ಮದ್ದೂರಾಗಿದ್ದು, ರಾಷ್ಟ್ರ, ರಾಜ್ಯ ರಾಜಕಾರಣದಲ್ಲಿ ಮಿಂಚಿದ ಹಿರಿಯ ಮುತ್ಸದ್ಧಿ ಎಸ್.ಎಂ.ಕೃಷ್ಣ ಇದೇ ಮದ್ದೂರು ತಾಲೂಕಿನ ಸೋಮನಹಳ್ಳಿ ಗ್ರಾಮದವರು.

ಜಿಲ್ಲೆಯಲ್ಲಿ ಸ್ವಾತಂತ್ರ್ಯದ ಕಿಡಿ ಹೊತ್ತಿಸಿದ ಕೀರ್ತಿ ಮದ್ದೂರು ನೆಲಕ್ಕೆ ಸಲ್ಲಲಿದ್ದು, ಇಲ್ಲಿನ ಶಿವಪುರ ಧ್ವಜಸತ್ಯಾಗ್ರಹವು ಸ್ವಾತಂತ್ರ್ಯ ಹೋರಾಟದ ಹೆಜ್ಜೆಯಲ್ಲಿ ಮಹತ್ವದ ಹೆಗ್ಗುರುತನ್ನು ಮೂಡಿಸಿದ್ದು, ಇದರ ನೆನಪಿನಾರ್ಥ ಮದ್ದೂರಿನ ಶಿವಪುರ ಬಳಿ ಧ್ವಜಸತ್ಯಾಗ್ರಹಸೌಧ ಸಹ ನಿರ್ಮಾಣವಾಗಿದೆ. ಇದರ ಜೊತೆಗೆ ರಾಜ್ಯದ ಬಹುತೇಕ ಭಾಗಗಳಲ್ಲಿ ಸಿಗುವ ಮದ್ದೂರು ವಡೆ ಸೃಷ್ಟಿಯಾಗಿದ್ದು ಇದೇ ಮದ್ದೂರಿನಲ್ಲೇ.

ಸ್ವಾತಂತ್ರ್ಯ ಹೋರಾಟಗಾರ, ಮಾಜಿ ಸಚಿವ ಹೆಚ್.ಕೆ.ವೀರಣ್ಣಗೌಡ, ಸ್ವಾತಂತ್ರ್ಯ ಹೋರಾಟಗಾರ ಎಂ.ಸಿ.ಮಲ್ಲಯ್ಯ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಮಾಜಿ ಸಚಿವ ಡಾ.ಅಂಬರೀಷ್, ಮಾಜಿ ಸಂಸದ ಜಿ.ಮಾದೇಗೌಡ, ಮಾಜಿ ಶಾಸಕ ಎಂ.ಎಸ್.ಸಿದ್ದರಾಜು, ನಟಿ, ಮಾಜಿ ಸಂಸದೆ ರಮ್ಯಾ ಹೀಗೆ ಅನೇಕ ಘಟಾನುಘಟಿಗಳು ಇದೇ ಮದ್ದೂರು ತಾಲ್ಲೂಕಿನವರೆಂಬುದು ಮತ್ತೊಂದು ವಿಶೇಷ.

1962ರಲ್ಲಿ ಸಿಎಂ ಅಭ್ಯರ್ಥಿ ಹೆಚ್.ಕೆ. ವೀರಣ್ಣ ಗೌಡಗೆ ಸೋಲು

1952ರ ಮೊದಲ ಚುನಾವಣೆಯಲ್ಲಿ ಹಿರಿಯ ಮುತ್ಸದ್ಧಿ ಹೆಚ್.ಕೆ.ವೀರಣ್ಣಗೌಡರು ಎಸ್.ಎಂ.ಕೃಷ್ಣ ತಂದೆ ಎಂ.ಸಿ.ಮಲ್ಲಯ್ಯ ವಿರುದ್ಧ ಗೆಲುವು ಸಾಧಿಸಿ, 1957ರ ಚುನಾವಣೆಯಲ್ಲೂ ಸತತ ಎರಡನೇ ಬಾರಿಗೆ ಗೆಲುವು ಸಾಧಿಸುವ ಮೂಲಕ ಬಿ.ಡಿ.ಜತ್ತಿ ಸಂಪುಟದಲ್ಲಿ ಲೋಕೋಪಯೋಗಿ ಸಚಿವಗಿದ್ದರು.

1962ರ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಹೈಕಮಾಂಡ್ ವೀರಣ್ಣಗೌಡ ಅವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿ ಮಾಡಿ, ಸಿಎಂ ಅಭ್ಯರ್ಥಿಯನ್ನಾಗಿ ಮಾಡುತ್ತದೆ. ಆದರೆ ಆ ಚುನಾವಣೆಯಲ್ಲಿ ಹೆಚ್.ಕೆ.ವೀರಣ್ಣಗೌಡ ವಿದೇಶದಿಂದ ಶಿಕ್ಷಣ ಮುಗಿಸಿ ಬಂದಿದ್ದ 30 ವರ್ಷದ ಯುವ ನಾಯಕ ಎಸ್.ಎಂ.ಕೃಷ್ಣ ವಿರುದ್ಧ 1956 ಮತಗಳ ಅಂತರದಿಂದ ಸೋತು ಸಿಎಂ ಆಗುವ ಅವಕಾಶ ಕಳೆದುಕೊಂಡಿದ್ದರು. ಸಿಎಂ ಅಭ್ಯರ್ಥಿಯನ್ನೇ ಅಂದು ಮದ್ದೂರಿನ ಜನ ಸೋಲಿಸಿದ್ದರು.

ಮದ್ದೂರು ಕ್ಷೇತ್ರ ವ್ಯಾಪ್ತಿಯ ಕಿರುಗಾವಲು ಕ್ಷೇತ್ರದ ಶಾಸಕರ ವಿವರ

ವರ್ಷ	ಶಾಸಕರ ಹೆಸರು	ಪಕ್ಷ
1962	ಜಿ.ಮಾದೇಗೌಡ	ಕಾಂಗ್ರೆಸ್
1967	ಜಿ.ಮಾದೇಗೌಡ	ಕಾಂಗ್ರೆಸ್
1972	ಜಿ.ಮಾದೇಗೌಡ	ಸಂಸ್ಥಾ ಕಾಂಗ್ರೆಸ್
1978	ಜಿ.ಮಾದೇಗೌಡ	ಜನತಾ ಪಕ್ಷ
1983	ಜಿ.ಮಾದೇಗೌಡ	ಕಾಂಗ್ರೆಸ್
1985	ಜಿ.ಮಾದೇಗೌಡ	ಕಾಂಗ್ರೆಸ್
1989	ಕೆ.ಎಂ.ಪುಟ್ಟು	ಕಾಂಗ್ರೆಸ್
1994	ಕೆ.ಎನ್.ನಾಗೇಗೌಡ	ಜನತಾದಳ
1999	ಡಿ.ಸಿ.ತಮ್ಮಣ್ಣ	ಕಾಂಗ್ರೆಸ್
2004	ನಾಗಮಣಿ ನಾಗೇಗೌಡ	ಜೆಡಿಯು

ಒಂದನೇ ಪುಟದಿಂದ

ಸಮರ್ಪಕ ಮೂಲ ಸೌಕರ್ಯ ಕಲ್ಪಿಸಿ

ತ್ವರಿತವಾಗಿ ಒಳಚರಂಡಿ ಕಾಮಗಾರಿ ಪೂರ್ಣಗೊಳಿಸಲು ಸಭೆಯಲ್ಲಿ ಸೂಚಿಸಲಾಗಿದೆ ಎಂದರು. ಕ್ಷೇತ್ರದಲ್ಲಿ ನಿರ್ಮಿಸಲಾಗುತ್ತಿರುವ ಮಹದೇಶ್ವರರ ಬೃಹತ್ ಪ್ರತಿಮೆಯನ್ನು ಮುಂದಿನ ತಿಂಗಳ ವೇಳೆಗೆ ಉದ್ಘಾಟನೆಗೆ ಸಿದ್ಧಪಡಿಸಬೇಕು. ಇದಕ್ಕೆ ಹೊಂದಿಕೊಂಡಂತಿರುವ ರಸ್ತೆಯನ್ನು ಅಭಿವೃದ್ಧಿಪಡಿಸಬೇಕು ಎಂದು ನಿರ್ದೇಶನ ನೀಡಲಾಗಿದೆ.

ಮಲೆಮಹದೇಶ್ವರಬೆಟ್ಟದ ಹುಲಿ ಯೋಜನೆ ಘೋಷಣೆ ವಿಚಾರ ವನ್ಯಜೀವಿ ಮಂಡಳಿ ಮುಂದಿದೆ. ಇನ್ನೂ ಈ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಬೆಟ್ಟದ ವ್ಯಾಪ್ತಿಯಲ್ಲಿರುವ ಜನವಸತಿ ಪ್ರದೇಶಗಳಿಗೆ ಯಾವುದೇ ತೊಂದರೆಯಾಗಬಾರದು ಎಂಬ ದೃಷ್ಟಿಯಿಂದ ಹಲವು ಸ್ಪಷ್ಟನೆ ಕೇಳಿದ್ದೇನೆ ಎಂದು ಬೊಮ್ಮಾಯಿ ತಿಳಿಸಿದರು.

ಸಭೆಯಲ್ಲಿ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ, ಕಂದಾಯ ಸಚಿವ ಆರ್. ಅಶೋಕ, ಸಾಲೂರು ಮಠದ ಶ್ರೀಗಳಾದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಶಾಸಕ ಆರ್. ನರೇಂದ್ರ, ಎನ್. ಮಹೇಶ್, ಸಿಎಸ್. ನಿರಂಜನ ಕುಮಾರ್, ಹಿರಿಯ ಅಧಿಕಾರಿಗಳಾದ ಜಯರಾಂ, ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಮಲೆಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಸ್. ಕಾತ್ಯಾಯಿನಿ ದೇವಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯಿತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ ಶಿವಕುಮಾರ್ ಸೇರಿದಂತೆ ಇತರೆ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು. ಮುಖ್ಯಮಂತ್ರಿಯವರು ಮಲೆ ಮಹದೇಶ್ವರ ದೇವಾಲಯಕ್ಕೂ ಭೇಟಿ ನೀಡಿ ದೇವರ ದರ್ಶನ ಪಡೆದರು. ಕಂದಾಯ ಸಚಿವ ಆರ್. ಅಶೋಕ, ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ, ಶಾಸಕ ಆರ್. ನರೇಂದ್ರ, ಎನ್. ಮಹೇಶ್, ಸಿ.ಎಸ್.ನಿರಂಜನ್ ಕುಮಾರ್ ಅಧಿಕಾರಿಗಳು ಇದ್ದರು.


ಪೊಲೀಸರ ದಾಳಿ

ಸಕ್ರಿಯರಾಗಿರುವ 37 ಮಂದಿಯನ್ನು ನೂತನ ಹೆಬ್ಬಾಳು ಪೊಲೀಸ್ ಠಾಣಾ ಕಟ್ಟಡದಲ್ಲಿ ಬೆಳಗ್ಗೆ 8 ರಿಂದ 10.30 ಗಂಟೆವರೆಗೆ ಪೊಲೀಸ್ ಆಯುಕ್ತ ಬಿ.ರಮೇಶ್ ರೌಡಿ ಪರೇಡ್ ನಡೆಸಿದರು. ಖಡಕ್ ಎಚ್ಚರಿಕೆ ನೀಡಿದ ಅವರು, ಚುನಾವಣೆ ಬರುತ್ತಿದೆ, ಯಾವುದೇ ಪಕ್ಷದ ಅಭ್ಯರ್ಥಿ ಪರ ಪ್ರಚಾರದ ಹೆಸರಲ್ಲಿ ಜನರಿಗೆ ಬೆದರಿಕೆ ಹಾಕುವುದು, ಹಣದ ಆಮಿಷ ತೋರಿಸುವುದು, ಧಮ್ಕಿ ಹಾಕುವುದು, ಗದ್ದಲ, ಗೊಂದಲ, ಗುಂಪು ಘರ್ಷಣೆ, ಜಗಳ, ಹಲ್ಲೆ, ಕೊಲೆ ಯತ್ನ, ಕೊಲೆ, ಸುಲಿಗೆ, ದರೋಡೆ, ಬಡ್ಡಿ ವ್ಯವಹಾರಗಳಲ್ಲಿ ತೊಡಗಿ, ಅವಾಚ್ಯ ಶಬ್ಧಗಳಿಂದ ನಿಂದಿಸುವುದೂ ಸೇರಿದಂತೆ ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವುದು ಕಂಡುಬಂದಲ್ಲಿ ಕ್ರಿಮಿನಲ್ ಮೊಕದ್ದಮೆ, ಗೂಂಡಾ ಕಾಯ್ದೆಯಂತಹ ಪ್ರಕರಣ ದಾಖಲಿಸಿ ಶಾಶ್ವತವಾಗಿ ಜೈಲಿಗೆ ಕಳುಹಿಸುವುದಾಗಿ ಎಚ್ಚರಿಕೆ ನೀಡಿದರು.

ಮೈಸೂರಿನಲ್ಲಿರುವ 900ಕ್ಕೂ ಹೆಚ್ಚು ರೌಡಿಶೀಟರ್‌ಗಳ ಪೈಕಿ 37 ಮಂದಿ ಸಮಾಜ ಘಾತುಕ ಕೃತ್ಯಗಳಲ್ಲಿ ಪಾಲ್ಗೊಂಡು ಭಯದ ವಾತಾವರಣ ಉಂಟು ಮಾಡುತ್ತಿದ್ದು, ಅವರ ಮನೆಗಳಲ್ಲಿ ಸರ್ಚ್ ವಾರೆಂಟ್ ಮೂಲಕ ಪರಿಶೀಲಿಸಿ, ಅಲ್ಲಿ ಸಿಕ್ಕಂತಹ ಮಾರಕಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ. ರಿಯಲ್ ಎಸ್ಟೇಟ್ ಮಾಫಿಯಾ, ಗ್ಯಾಂಬ್ಲಿಂಗ್, ಸುಲಿಗೆ, ಮಟ್ಕಾ, ಮೀಟರ್ ಬಡ್ಡಿ, ಗಾಂಜಾ–ಅಫೀಮು ಸೇವಿಸುವುದು, ಅಹಿತಕರ ಘಟನೆಯಲ್ಲಿ ಪಾಲ್ಗೊಂಡಲ್ಲಿ ಕರ್ನಾಟಕ ಕಂಟ್ರೋಲ್ ಆಫ್ ಆರ್ಗನೈಸ್ಡ್ ಕ್ರೈಂ ಆ್ಯಕ್ಟ್ (KCOCA), ಕಾನೂನು ಬಾಹಿರ ಚಟುವಟಿಕೆ ನಿಯಂತ್ರಣ ಕಾಯ್ದೆ ಹಾಗೂ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಅಗತ್ಯ ಕಾನೂನು ಕ್ರಮ ಜರುಗಿಸಬೇಕಾಗುತ್ತದೆ ಎಂದು ಬಿ. ರಮೇಶ್ ಖಡಕ್ ಎಚ್ಚರಿಕೆ ನೀಡಿದರು.

ಎಲ್ಲಾ ಪೊಲೀಸ್ ಠಾಣೆ, ಸಿಸಿಬಿ ಘಟಕದ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಮಾಜಘಾತುಕ ಶಕ್ತಿಗಳ ಚಲನ–ವಲನ, ರಿಯಲ್ ಎಸ್ಟೇಟ್ ಚಟುವಟಿಕೆ, ಘರ್ಷಣೆ, ಹಣದ ಲೇವಾದೇವಿ ವ್ಯವಹಾರದಲ್ಲಿ ತೊಡಗಿದ ರೌಡಿ ಶೀಟರ್‌ಗಳ ಮೇಲೆ ನಿಗಾ ಇರಿಸಿ, ಸಮಾಜದ ಘನಘೋರ ಸ್ವರೂಪದ ಪ್ರಕರಣಗಳನ್ನು ದಾಖಲಿಸಿ ಜೈಲಿಗಟ್ಟಲು ಸರ್ವ ರೀತಿಯ ಸಿದ್ಧತೆ ನಡೆಸಲಾಗುತ್ತಿದೆ. ರೌಡಿಶೀಟರ್‌ಗಳ ಪೋಷಕರು ಸೇರಿದಂತೆ ಕುಟುಂಬ ಸದಸ್ಯರಿಗೆ, ನಿಮ್ಮ ಮನೆಯ ಮಕ್ಕಳು ಯಾವುದೇ ಗಲಾಟೆ, ಘರ್ಷಣೆಯಲ್ಲಿ ಪಾಲ್ಗೊಳ್ಳದಂತೆ ನೋಡಿಕೊಳ್ಳಿ, ಚುನಾವಣಾ ಪ್ರಚಾರದ ವೇಳೆ ಏನಾದರೂ ಸಮಾಜಘಾತುಕ ಕೃತ್ಯಗಳಲ್ಲಿ ಪಾಲ್ಗೊಳ್ಳುವುದು ಕಂಡುಬಂದಲ್ಲಿ ಉಗ್ರ ಸ್ವರೂಪದ ಕಾನೂನು ಕ್ರಮ ಜರುಗಿಸುವುದು ಅನಿವಾರ್ಯವಾಗುತ್ತದೆ ಎಂದು ಪೊಲೀಸರು ಎಚ್ಚರಿಕೆ ನೀಡಿದ್ದಾರೆ. ಕರೆದ ತಕ್ಷಣ ಠಾಣೆಗೆ ಬರಬೇಕು, ನಗರ ವ್ಯಾಪ್ತಿಯಿಂದ ಹೊರಗೆ ಹೋಗಬೇಕಾದರೆ ಆಯಾ ಠಾಣೆಗಳ ಮುಖ್ಯಸ್ಥರಿಂದ ಪೂರ್ವಾನುಮತಿ ಪಡೆಯಬೇಕು, ಬಾರ್, ರೆಸ್ಟೋರೆಂಟ್, ಕ್ಲಬ್, ಡಾಬಾಗಳಲ್ಲಿ ಕುಡಿದು ಗಲಾಟೆ, ರಂಪಾಟ ಮಾಡಿದರೆ ಗೂಂಡಾ ಕಾಯ್ದೆ ಹಾಗೂ ಕೋಕಾ ಕಾಯ್ದೆಯಡಿ ಪ್ರಕರಣ ದಾಖಲಿಸಿ ಖಾಯಂ ಆಗಿ ಜೈಲಿಗೆ ಕಳುಹಿಸುತ್ತೇವೆ ಎಂದು ಪೊಲೀಸ್ ಆಯುಕ್ತರು ರೌಡಿಶೀಟರ್‌ಗಳಿಗೆ ತಾಕೀತು ಮಾಡಿದರು.

ಚೀನಾ ಸೈನಿಕರು ಗಡಿ ನುಸುಳುವುದನ್ನು ಭಾರತ ತಡೆದಿದೆ: ರಾಜನಾಥ್‌ಸಿಂಗ್




ನವದೆಹಲಿ, ಡಿ.13– ಅರುಣಾಚಲ ಪ್ರದೇಶದಲ್ಲಿ ಭಾರತ–ಚೀನಾ ಸೈನಿಕರ ಘರ್ಷಣೆಗೆ ಸಂಬಂಧಿಸಿದಂತೆ ಲೋಕಸಭೆಯಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸ್ಪಷ್ಟನೆ ಕೊಟ್ಟಿದ್ದಾರೆ. ಚೀನಾ ಸೈನಿಕರು ಗಡಿ ನುಸುಳುವುದನ್ನು ಭಾರತ ತಡೆದಿದೆ. ನಮ್ಮ ಸೈನಿಕರ ಧೈರ್ಯಕ್ಕೆ ಸಲಾಂ ಹೇಳುತ್ತೇನೆ ಎಂದಿದ್ದಾರೆ.

ಸಂಘರ್ಷದಲ್ಲಿ ಯಾವುದೇ ಪ್ರಾಣ ಹಾನಿಯಾಗಿಲ್ಲ. ಯಾರಿಗೂ ತೀವ್ರ ಗಾಯಗಳೂ ಆಗಿಲ್ಲ. ಚೀನಾ ಸೈನಿಕರು ವಾಪಸ್ ತಮ್ಮ ನೆಲೆಗೆ ತೆರಳಿದ್ದಾರೆ. ಶಾಂತಿ ಕಾಪಾಡಲು ಚೀನಾ ಸೇನಾ ಅಧಿಕಾರಿಗಳ ಜೊತೆಗೆ ಸಭೆ ನಡೆಸಲಾಗುತ್ತಿದೆ. ಭಾರತ ಎಲ್ಲ ದಾಳಿಗಳನ್ನು ತಡೆಯುವ ಶಕ್ತಿ ಹೊಂದಿದೆ. ಭಾರತ ಶೌರ್ಯ ಕ್ಷಮತೆಯನ್ನು ನಾನು ಅಭಿನಂದಿಸುತ್ತೇನೆ ಎಂದು ಲೋಕಸಭೆಯಲ್ಲಿ ರಾಜನಾಥ್ ಸಿಂಗ್ ಉತ್ತರಿಸಿದ್ದಾರೆ.

ಈ ಘರ್ಷಣೆಯಲ್ಲಿ ಎರಡೂ ಕಡೆಯ ಕೆಲವು ಸೈನಿಕರು ಗಾಯಗೊಂಡಿದ್ದಾರೆ. ನಾನು ಈ ಸದನಕ್ಕೆ ಹೇಳಲು ಬಯಸುತ್ತೇನೆ. ಭಾರತೀಯ ಸೇನಾ ಕಮಾಂಡರ್‌ಗಳ ಸಮಯೋಚಿತ ಮಧ್ಯಪ್ರವೇಶದಿಂದ, ಪಿಎಲ್‌ಎ ಸೈನಿಕರು ತಮ್ಮ ಸ್ವಂತ ಸ್ಥಳಕ್ಕೆ ಹಿಮ್ಮೆಟ್ಟಿದ್ದಾರೆ ಎಂದು ತಿಳಿಸಿದ್ದಾರೆ.

ಆದರೆ ರಾಜನಾಥ್ ಸಿಂಗ್ ಅವರ ಉತ್ತರಕ್ಕೆ ವಿಪಕ್ಷಗಳು ತೃಪ್ತರಾಗಲಿಲ್ಲ. ಚರ್ಚೆಗೆ ಅವಕಾಶ ನೀಡುವಂತೆ ವಿಪಕ್ಷಗಳು ಆಗ್ರಹಿಸಿದವು. ಆದರೆ ಸ್ಪೀಕರ್ ಓಂ ಬಿರ್ಲಾ ಅವರು ಚರ್ಚೆಗೆ ಅವಕಾಶ ನೀಡಲಿಲ್ಲ. ಚರ್ಚೆಗೆ ಅವಕಾಶ ಸಿಗದ ಹಿನ್ನೆಲೆಯಲ್ಲಿ ವಿಪಕ್ಷಗಳು ಸಭಾತ್ಯಾಗ ಮಾಡಿದವು.



ಚರ್ಚೆಗೆ ಕಾಂಗ್ರೆಸ್ ನೋಟೀಸ್ ಜಾರಿ: ಇಂಡೋ–ಚೀನಾ ಗಡಿಯಲ್ಲಿ ಮತ್ತೆ ಸಂಘರ್ಷ ಏರ್ಪಟ್ಟಿದ್ದು, ಉಭಯ ದೇಶಗಳ ನಡುವಿನ ಸೈನಿಕರು ಸಂಘರ್ಷಕ್ಕಿಳಿದ ಪರಿಣಾಮ ಎರಡೂ ದೇಶಗಳ ಹಲವು ಯೋಧರು ಗಾಯಗೊಂಡಿದ್ದಾರೆ.

ಸೇನಾ ಮೂಲಗಳ ಪ್ರಕಾರ ಅರುಣಾಚಲ ಪ್ರದೇಶದ ತವಾಂಗ್ ಸೆಕ್ಟರ್‌ನ ವಾಸ್ತವ ಗಡಿ ರೇಖೆ ಬಳಿ ಬಂದಿದ್ದ ಚೀನಾದ ಸೈನಿಕರಿಗೆ ಭಾರತೀಯ ಯೋಧರು ಪ್ರತಿರೋಧ ತೋರಿದ್ದು, ಈ ವೇಳೆ ಎರಡೂ ಕಡೆಯವರ ನಡುವೆ ಸಂಘರ್ಷ ಏರ್ಪಟ್ಟು ಪರಸ್ಪರ ಕೈಕೈ ಮಿಲಾಯಿಸಿದ್ದಾರೆ ಎನ್ನಲಾಗಿದೆ. ಮೊನ್ನೆ ಡಿಸೆಂಬರ್ 9ರಂದು ಈ ಕಾದಾಟ ನಡೆದಿದ್ದು, ತಡವಾಗಿ ಈ ಬೆಳಕಿಗೆ ಬಂದಿದೆ. ಘರ್ಷಣೆಯಲ್ಲಿ ಉಭಯ ದೇಶಗಳ ಹಲವು ಯೋಧರು ಗಾಯಗೊಂಡಿದ್ದಾರೆ ಎಂದು ಹೇಳಲಾಗಿದೆ.

ಗಡಿಯಲ್ಲಿನ ಪರಿಸ್ಥಿತಿ ಚರ್ಚಿಸುವಂತೆ ಇಂದು ಸಂಸತ್ತು ಕಲಾಪದಲ್ಲಿ ಸದಸ್ಯರು ಪ್ರಸ್ತಾಪಿಸಿದ್ದಾರೆ. ಕಾಂಗ್ರೆಸ್ ಸಂಸದ ನಾಸಿರ್ ಹುಸೇನ್ ರಾಜ್ಯಸಭೆಯಲ್ಲಿ ಇಂದು ನಿಯಮ 176ರಡಿ ಭಾರತ–ಚೀನಾ ಸಂಘರ್ಷವನ್ನು ಅಲ್ಪಾವಧಿಯ ಚರ್ಚೆಯ ವೇಳೆ ಚರ್ಚಿಸುವಂತೆ ನೋಟೀಸ್ ನೀಡಿದರು. ಪಕ್ಷದ ಸಂಸದ ಮನೀಶ್ ತಿವಾರಿ ಲೋಕಸಭೆಯಲ್ಲಿ ಸಂಘರ್ಷ ಕುರಿತು ಚರ್ಚೆ ನಡೆಸುವಂತೆ ನಿಲುವಳಿ ಸೂಚನೆ ನೋಟೀಸ್ ಜಾರಿಗೊಳಿಸಿದರು.

ಡಿಸೆಂಬರ್ 9 ರಂದು ಅರುಣಾಚಲ ಪ್ರದೇಶದ ತವಾಂಗ್ ಸೆಕ್ಟರ್‌ನಲ್ಲಿ ಭಾರತ–ಚೀನಾ ಸೇನೆಯ ಯೋಧರ ಮುಖಾಮುಖಿಯ ಕುರಿತು ಮಾತ್ರ ಚರ್ಚಿಸಲು ಕಾಂಗ್ರೆಸ್ ಸಂಸದ ಶಕ್ತಿಸಿನ್ಹ್ ಗೋಹಿಲ್ ಅವರು ರಾಜ್ಯಸಭೆಯಲ್ಲಿ ನಿಯಮ 267 ರ ಅಡಿಯಲ್ಲಿ ಬ್ಯುಸಿನೆಸ್ ನೋಟೀಸ್ ಜಾರಿ ಮಾಡಿದರು.

ಗಸ್ತು ನಡೆಸುತ್ತಿರುವ ಭಾರತೀಯ ವಾಯುಪಡೆ: ಚೀನಾದಿಂದ ವಾಯುಪ್ರದೇಶದ ಉಲ್ಲಂಘನೆಯನ್ನು ತಡೆಯಲು ಭಾರತೀಯ ವಾಯುಪಡೆಯು ಅರುಣಾಚಲ ಪ್ರದೇಶದಲ್ಲಿ ಸಕ್ರಿಯ ಯುದ್ಧ ವಿಮಾನ ಗಸ್ತು ನಡೆಸುತ್ತಿದೆ ಎಂದು ಮೂಲಗಳು ತಿಳಿಸಿದೆ. ಈಗಾಗಲೇ ಭಾರತ ಸೇನೆಯ ಮೂರು ಪಡೆಗಳು ಮುಖ್ಯಸ್ಥರ ಜೊತೆಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಹತ್ವದ ಸಭೆಯನ್ನು ನಡೆಸಲಿದ್ದಾರೆ ಎಂದು ಹೇಳಲಾಗಿದೆ. ಅರುಣಾಚಲ ಪ್ರದೇಶದ ನೈಜ ನಿಯಂತ್ರಣ ರೇಖೆಯಲ್ಲಿ ಭಾರತ ಮತ್ತು ಚೀನಾದ ಸೈನಿಕರ ನಡುವಿನ ಇತ್ತೀಚಿನ ಘರ್ಷಣೆ ಬಗ್ಗೆ ಸಭೆಯನ್ನು ಇಂದು ನಡೆಸಲಿದ್ದಾರೆ.

ಈ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್. ಹರಿಕುಮಾರ್ ಮತ್ತು ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ಅವರನ್ನು ಮೂರು ಸೇನಾ ಮುಖ್ಯಸ್ಥರನ್ನು ಭೇಟಿ ಮಾಡಲಿದ್ದಾರೆ. ಜೊತೆಗೆ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಮತ್ತು ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಅನಿಲ್ ಚೌಹಾಣ್ (ನಿವೃತ್ತ) ಕೂಡ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ, ಗಿರಿಧರ್ ಅರಮನೆ ಕೂಡ ಉಪಸ್ಥಿತರಿರುವರು.



ಇತ್ತೀಚೆಗೆ ಮೇಟಗಳ್ಳಿ ಇನ್ಸ್‌ಪೆಕ್ಟರ್ ಆಗಿ ಅಧಿಕಾರ ವಹಿಸಿಕೊಂಡ ದಿವಾಕರ್ ಅವರನ್ನು ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಎಂ. ಕುಮಾರ್ ನೇತೃತ್ವದಲ್ಲಿ ಅಭಿನಂದಿಸಲಾಯಿತು. ಚಿತ್ರದಲ್ಲಿ ಬಿಜೆಪಿ ಮುಖಂಡರಾದ ಪ್ರಶಾಂತ್, ಅಖಿಲೇಶ್, ಮೋಹನ್, ಕೃಷ್ಣೇಗೌಡ, ಮಲ್ಲಿಕಾ, ಔಥೇರ್‌ಸಿಂಗ್ ಇನ್ನಿತರರನ್ನು ಕಾಣಬಹುದು.

ಪ್ರಧಾನಿ ಮೋದಿ, ದೇವೇಗೌಡರ ಭೇಟಿ

ಅಂತರ ರಾಜ್ಯ ನದಿ ನೀರು ಹಂಚಿಕೆ ಸೇರಿ ಹಲವು ವಿಚಾರಗಳ ಚರ್ಚೆ



ನವದೆಹಲಿ, ಡಿ.13– ಅಂತರ ರಾಜ್ಯ ನದಿ ನೀರಿನ ಹಂಚಿಕೆ ಸೇರಿದಂತೆ ಹಲವು ವಿಚಾರಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸಿರುವುದಾಗಿ ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಇಂದು ಭೇಟಿಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ದೇವೇಗೌಡ, ಕಾವೇರಿ, ಕೃಷ್ಣ, ಮಹದಾಯಿ ಅಂತರ್ ರಾಜ್ಯ ನದಿ ನೀರಿನ ಹಂಚಿಕೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರ ಬಳಿ ಮಾತುಕತೆ ನಡೆಸಲಾಗಿದೆ ಎಂದರು. ಹಾಸನ ವಿಮಾನ ನಿಲ್ದಾಣ ಯೋಜನೆಯನ್ನು ತ್ವರಿತಗತಿಯಲ್ಲಿ ಕೈಗೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಕುಂಚಿಟಿಗ ಒಕ್ಕಲಿಗ ಸಮುದಾಯವನ್ನು ಒಬಿಸಿ ಪಟ್ಟಿಯಲ್ಲಿ ಸೇರಿಸುವಂತೆಯೂ ಪ್ರಧಾನಿಗೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು. ತಾವು ಪ್ರಸ್ತಾಪಿಸಿರುವ ಎಲ್ಲಾ ವಿಷಯಗಳನ್ನು ಪ್ರಧಾನಿ ಗಂಭೀರವಾಗಿ ಪರಿಗಣಿಸಿದ್ದಾರೆ. ಎಲ್ಲಾ ದಾಖಲೆಗಳನ್ನು ಅವರು ಪರಿಶೀಲಿಸಿದ್ದು, ಖಂಡಿತವಾಗಿಯೂ ಪರಿಗಣಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ದೇವೇಗೌಡ ಮಾಹಿತಿ ನೀಡಿದರು.

ಪಕ್ಷಕ್ಕೆ ತೊಂದರೆಯಾದರೆ ನೀವಿಬ್ಬರೇ ಕಾರಣ

- ಸಿದ್ದು, ಡಿಕೆಶಿಗೆ ಕೆ.ಸಿ.ವೇಣುಗೋಪಾಲ್ ಖಡಕ್ ವಾರ್ನಿಂಗ್
- ನಿಮ್ಮಿಬ್ಬರ ಮಾತು ಕಾಂಗ್ರೆಸ್‌ಗೆ ಮುಳುವಾಗದಿರಲೆಂದು ಸಲಹೆ



ಬೆಂಗಳೂರು, ಡಿ.13– ಪಕ್ಷಕ್ಕೆ ಹಿನ್ನಡೆಯಾದರೆ ಅದಕ್ಕೆ ನೀವಿಬ್ಬರೇ ಕಾರಣ ಹೊರತು ಬೇರೆಯವರಲ್ಲ. ನಿಮ್ಮಿಬ್ಬರ ಮಾತು, ವಿಭಿನ್ನ ಹೇಳಿಕೆಗಳೇ ಪಕ್ಷಕ್ಕೆ ಮುಳುವಾಗಬಹುದು. ಎಚ್ಚರಿಕೆಯಿಂದ ಮಾತನಾಡಿ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್, ಸಿದ್ದರಾಮಯ್ಯ ಹಾಗೂ ಡಿ.ಕೆ ಶಿವಕುಮಾರ್‌ಗೆ ಖಡಕ್ ಸೂಚನೆ ನೀಡಿದ್ದಾರೆ.

ದೆಹಲಿಯಲ್ಲಿ ನಡೆದ ಕಾಂಗ್ರೆಸ್ ಹೈವೋಲ್ಟೇಜ್ ಮೀಟಿಂಗ್‌ನಲ್ಲಿ ಮಾತನಾಡಿದ ಕೆ.ಸಿ ವೇಣುಗೋಪಾಲ್, ನಿಮ್ಮಿಬ್ಬರ ನಡೆ ಮತ್ತು ನುಡಿ ಪಕ್ಷಕ್ಕೆ ಸವಾಲಾಗಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಗೆಲುವು ರಾಷ್ಟ್ರಮಟ್ಟದಲ್ಲಿ ಪಕ್ಷದ ಅಸ್ತಿತ್ವ ಉಳಿಸುವ ಗೆಲುವಾಗಲಿದೆ. ಪಕ್ಷ ಇದ್ದರೆ ವ್ಯಕ್ತಿ, ಪಕ್ಷವೇ ಸೋತರೆ ಯಾರು ಏನು ಮಾಡಲು ಆಗಲ್ಲ. ನಿಮ್ಮಿಬ್ಬರ ಮಾತು, ವಿಭಿನ್ನ ಹೇಳಿಕೆಗಳೇ ಪಕ್ಷಕ್ಕೆ ಮುಳುವಾಗಬಹುದು ಎಚ್ಚರಿಕೆಯಿಂದ ಮಾತನಾಡಿ ಎಂದು ಸಲಹೆ ನೀಡಿದ್ದಾರೆ. ಕರ್ನಾಟಕದಲ್ಲಿ ಪಕ್ಷದ ಸ್ಥಿತಿ ಉತ್ತಮವಾಗಿದೆ. ಅನಗತ್ಯ ಹೇಳಿಕೆಗಳು ಬೇಡ. ಪಕ್ಷಕ್ಕೆ ಹಿನ್ನಡೆ ಆದರೆ ನೀವಿಬ್ಬರೇ ಕಾರಣ ಹೊರತು ಬೇರೆಯವರಲ್ಲ. ಇದನ್ನು ನೆನಪಿನಲ್ಲಿ ಇಟ್ಟುಕೊಂಡು ಮುಂದುವರಿಯಿರಿ. ಮುಂಚಿತವಾಗಿ 150 ಸ್ಥಾನ ಘೋಷಣೆ ಮಾಡಿದರೆ ಆಗುವ ಪರಿಣಾಮಗಳ ಬಗ್ಗೆ ಯೋಚನೆ ಮಾಡಿ ಹೇಳಿ. ಅದೇ ಅನುಕೂಲಕರ ಅನ್ನಿಸಿದರೆ ಹಾಗೇ ಮಾಡೋಣ. ಒಟ್ಟಾರೆ ಇನ್ನು ನಾಲ್ಕು ತಿಂಗಳಲ್ಲಿ ಇಬ್ಬರ ಪ್ರತಿಷ್ಠೆಯ ಕಾರಣಕ್ಕೆ ಪಕ್ಷಕ್ಕೆ ಹಿನ್ನಡೆಯಾದರೆ ಹೈಕಮಾಂಡ್ ಅದನ್ನು ಗಂಭೀರವಾಗಿ ಪರಿಗಣಿಸುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಮಿತ್ರ ಬುಧವಾರ 14 ಡಿಸೆಂಬರ್ 2022

ವಿಶ್ವದಾಖಲೆ ಬರೆಯಲು ಮುಂದಾದ ಕೊಡವರು

ಗಿನ್ನಿಸ್ ಬುಕ್‌ನ 'ಲಾರ್ಜೆಸ್ಟ್ ಫ್ಯಾಮಿಲಿ ಗ್ಯಾದರಿಂಗ್' ದಾಖಲೆ ಮುರಿಯಲು ಸಿದ್ಧತೆ

- ಡಿ.24ರಂದು 'ಕೂರ್ಗ್ ಎತ್ನಿಕ್' ಕಾರ್ಯಕ್ರಮ
- ಕೊಡವರು ಒಂದೇ ಕುಟುಂಬದವರೆಂದು ದೃಢೀಕರಿಸಲು ಸಜ್ಜು

ಮಡಿಕೇರಿ, ಡಿ.13– ಕೊಡವರ ಎಲ್ಲಾ ಒಕ್ಕಗಳ ವಂಶಾವಳಿ ವೃಕ್ಷವನ್ನು www.kodavaclan.com ಮೂಲಕ ಬೆಸೆದು ಎಲ್ಲಾ ಕೊಡವರು ಒಂದೇ ಕುಟುಂಬಕ್ಕೆ ಸೇರಿದವರೆಂದು ದೃಢೀಕರಿಸುವ ಪ್ರಯತ್ನದಲ್ಲಿ ಯಶಸ್ಸು ಕಂಡಿರುವ ಕೊಡವ ಕ್ಲಾನ್ ಸಂಸ್ಥೆ ಇದೀಗ ವಿಶ್ವ ದಾಖಲೆ ಬರೆಯಲು ಸಜ್ಜಾಗಿದೆ.

ಇದೇ ಡಿ.24ರಂದು ವಿರಾಜಪೇಟೆಯ ಬಿಟ್ಟಂಗಾಲದ 'ಕೂರ್ಗ್ ಎತ್ನಿಕ್'ನಲ್ಲಿ ಎಲ್ಲಾ ಕುಟುಂಬಗಳ ಸುಮಾರು 5 ಸಾವಿರ ಮಂದಿಯನ್ನು ಒಂದೆಡೆ ಸೇರಿಸಿ ಈಗಾಗಲೇ ಗಿನ್ನಿಸ್ ಬುಕ್‌ನಲ್ಲಿ ದಾಖಲಾಗಿರುವ 4514 ಮಂದಿಯ 'ಲಾರ್ಜೆಸ್ಟ್ ಫ್ಯಾಮಿಲಿ ಗ್ಯಾದರಿಂಗ್' ದಾಖಲೆಯನ್ನು ಮುರಿಯುವ ಗುರಿ ಇದಾಗಿದೆ ಎಂದು ಕೊಡವ ಕ್ಲಾನ್ ಸಂಸ್ಥೆಯ ಸಂಸ್ಥಾಪಕ ಗೊಮ್ಮಟಿರ ಕಿಶು ಉತ್ತಪ್ಪ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಫ್ರಾನ್ಸ್‌ನಲ್ಲಿ ಒಲಿಮಿಯಾ ಕುಟುಂಬದ 4514 ಮಂದಿ ಒಂದೆಡೆ ಸೇರಿದ ದಾಖಲೆಯನ್ನು ಮುರಿಯುವುದಕ್ಕಾಗಿ ಸುಮಾರು 5 ಸಾವಿರಕ್ಕೂ ಹೆಚ್ಚಿನ ಕೊಡವರನ್ನು ಸೇರಿಸಲಾಗುತ್ತಿದೆ. ಇಲ್ಲಿ ಬಂದು ಸೇರುವ ಎಲ್ಲಾ ಕೊಡವರು ಒಂದೇ ಕುಟುಂಬದವರೆಂದು ದೃಢೀಕರಿಸಿ ಅವಿನಾಭಾವ ಸಂಬಂಧವನ್ನು ಗಟ್ಟಿಗೊಳಿಸುವ ವಿಶ್ವಾಸವನ್ನು ಹೊಂದಿದ್ದೇವೆ. ಎಲ್ಲಾ ಕೊಡವರು ಒಂದೇ ಸ್ಥಳದಲ್ಲಿ ಸೇರುವ ಮೂಲಕ ಹೊಸ ವಿಶ್ವ ದಾಖಲೆ ಮಾಡಲಿದ್ದೇವೆ ಎಂದರು.



ಬಿಟ್ಟಂಗಾಲದಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್‌ನ ಪ್ರತಿನಿಧಿಗಳು ಆಗಮಿಸಿ ಸಂಖ್ಯೆಯನ್ನು ದಾಖಲೀಕರಣ ಮಾಡಿಕೊಳ್ಳಲಿದ್ದಾರೆ. ನಂತರ ವಿಶ್ವ ದಾಖಲೆಗೆ ಶಿಫಾರಸ್ಸು ಆಗಲಿದೆ ಎಂದು ತಿಳಿಸಿದರು.

ಕೊಡವರು ಸೇರುವ 'ಕೂರ್ಗ್ ಎತ್ನಿಕ್'ನಲ್ಲಿ ಹಲವು ಬಗೆಯ ಸುಮಾರು 50 ಮಳಿಗೆಗಳನ್ನು ತೆರೆಯಲಾಗುವುದು. ವಿವಿಧ ಸ್ಪರ್ಧೆಗಳು, ಫ್ಯಾಷನ್ ಶೋ ಮತ್ತು ವಾಲಗತ್ತಾಟ್ ನಡೆಯಲಿದೆ. ಹಿರಿಯ ಕಲಾವಿದ ಮುಳ್ಳೇರ ಜಿಮ್ಮಿ ಅಯ್ಯಪ್ಪ ಅವರ ನೆನಪಿನಲ್ಲಿ ಅವರ ಹಾಡುಗಳನ್ನು ವಿರಾಜಪೇಟೆ ತಂಡದವರು ಹಾಡಲಿದ್ದಾರೆ. ಕೊಡವ ಸಾಹಿತಿಗಳು ಬರೆದಿರುವ ಪುಸ್ತಕಗಳ ಮಾರಾಟಕ್ಕಾಗಿ ಪ್ರತ್ಯೇಕ ಮಳಿಗೆ ವ್ಯವಸ್ಥೆ ಮಾಡಲಾಗುವುದು. ಕಾರ್ಯಕ್ರಮ ಬೆಳಗ್ಗೆ 8.30 ಗಂಟೆಯಿಂದ ಹೆಸರು ನೋಂದಣಿ ಮೂಲಕ ಆರಂಭಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ಕೊಡವ ಕ್ಲಾನ್ ಸಂಸ್ಥೆ ಕಳೆದ 8 ವರ್ಷಗಳಿಂದ 21 ಸಾವಿರಕ್ಕೂ ಹೆಚ್ಚಿನ ಕೊಡವರು ಒಂದೇ ವಂಶ ವೃಕ್ಷದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದ್ದು, ಈಗಾಗಲೇ ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿದೆ. 18 ತಲೆಮಾರಿನ ಒಟ್ಟು 751 ಕೊಡವ ಕುಟುಂಬಗಳ ದಾಖಲೆಗಳು ಕೊಡವ ಕ್ಲಾನ್ ವಂಶವೃಕ್ಷದಲ್ಲಿದೆ ಎಂದು ಕಿಶು ಉತ್ತಪ್ಪ ತಿಳಿಸಿದರು. ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿ, ಕೊಡವ ಕ್ಲಾನ್‌ನ ಕೊಡವ ಕುಟುಂಬಗಳ ವಂಶವೃಕ್ಷದ ಪರಿಕಲ್ಪನೆ ಅದ್ಭುತವಾಗಿದ್ದು, ಈ ಕಾರ್ಯಕ್ರಮದಲ್ಲಿ ಎಲ್ಲರೂ ಪಾಲ್ಗೊಂಡು ವಿಶ್ವ ದಾಖಲೆಯನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಕೊಡವ ಸಾಹಿತಿಗಳಿಗೆ ತಾವು ಬರೆದ ಪುಸ್ತಕಗಳನ್ನು ಯಾವ ರೀತಿ ಓದುಗರಿಗೆ ತಲುಪಿಸಬೇಕು ಮತ್ತು ಮಾರಾಟ ಮಾಡಬೇಕು ಎನ್ನುವ ಬಗ್ಗೆ ಮಾಹಿತಿಯ ಕೊರತೆ ಇದೆ. ಇವರುಗಳಿಗೆ ಸಹಕಾರಿಯಾಗಲಿ ಎನ್ನುವ ಕಾರಣಕ್ಕೆ ಪ್ರತ್ಯೇಕ ಪುಸ್ತಕ ಮಾರಾಟದ ಮಳಿಗೆ ತೆರೆಯಲಾಗುವುದು. ಮಾರಾಟವಾಗಿ ಬಂದ ಹಣವನ್ನು ಆಯಾ ಪುಸ್ತಕ ರಚನೆಕಾರರಿಗೆ ನೀಡಲಾಗುವುದು ಎಂದರು. ಮಾಹಿತಿಗೆ 9845390522 (ಕಿಶು ಉತ್ತಪ್ಪ) ಹಾಗೂ 98807 78047 (ಬೊಳ್ಳಜಿರ ಬಿ. ಅಯ್ಯಪ್ಪ) ಅವರನ್ನು ಸಂಪರ್ಕಿಸಬಹುದೆಂದು ತಿಳಿಸಿದರು.

ಡಿ.17, ಸಿಎನ್‌ಸಿಯಿಂದ ಗನ್ ಕಾರ್ನಿವಲ್ ತೋಕ್ ನಮ್ಮೆ ಬೀರುಗ

ಮಡಿಕೇರಿ, ಡಿ.13– ಕೊಡವ ನ್ಯಾಷನಲ್ ಕೌನ್ಸಿಲ್ ಆಶ್ರಯದಲ್ಲಿ 13ನೇ ವರ್ಷದ ಗನ್ ಕಾರ್ನಿವಲ್–ತೋಕ್ ನಮ್ಮೆ ಬೀರುಗ ಅಜ್ಜಮಾಡ ಒಕ್ಕದ ಐನ್‌ಮನೆಯಲ್ಲಿ ಡಿ.17ರಂದು ನಡೆಯಲಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವ ಅಲ್ಪಸಂಖ್ಯಾತ ಜನಾಂಗಗಳ ಹಕ್ಕುಗಳ ದಿನಾಚರಣೆಯ ಸಂದರ್ಭ ಸಾರ್ವತ್ರಿಕವಾಗಿ ಸಿಎನ್‌ಸಿ ತೋಕ್ ನಮ್ಮೆಯನ್ನು ಆಚರಿಸುತ್ತಾ ಬಂದಿದೆ ಮತ್ತು ಆ ಮೂಲಕ ಕೊಡವರ ಕೋವಿ ಹಕ್ಕಿನ ಕುರಿತು ಜಾಗೃತಿ ಮೂಡಿಸಿದೆ ಎಂದರು. ಡಿ.17ರಂದು ಬೆಳಗೆ 10 ಗಂಟೆಗೆ ದಕ್ಷಿಣ ಕೊಡಗಿನ ಕುರ್ಚಿನಾಡಿನ ಬೀರುಗ ಗ್ರಾಮದ ಅಜ್ಜಮಾಡ ಕುಟುಂಬದ ಐನ್ ಮನೆಯಲ್ಲಿ ಸಿ.ಎನ್.ಸಿ ಆಶ್ರಯದಲ್ಲಿ 13ನೇ ವರ್ಷದ ಸಾರ್ವತ್ರಿಕ ತೋಕ್ ನಮ್ಮೆ–ಗನ್ ಕಾರ್ನಿವಲ್ ನಡೆಯಲಿದೆ.

ವಿವಿಧೆಡೆಯಿಂದ ಆಗಮಿಸುವ ಕೊಡವರು ತವ್ಮೊಂದಿಗೆ ತರುವ ತೋಕ್–ಗನ್‌ಗಳಿಗೆ ಸಾಮೂಹಿಕವಾಗಿ ಭಕ್ತಿಭಾವದಿಂದ ಸಾರ್ವತ್ರಿಕ ಪೂಜೆ ನಡೆಸಿ ಪ್ರದರ್ಶಿಸಲಾಗುವುದು. ನಂತರ ಗುಂಡು ಹೊಡೆಯುವ ಪೈಪೋಟಿ ನಡೆಯಲಿದ್ದು, ಮಹಿಳೆಯರು, ಮಕ್ಕಳು ಹಾಗೂ ಪುರುಷರಿಗೆ ಪ್ರತ್ಯೇಕವಾಗಿ ಆಯೋಜಿಸಲಾಗಿದೆ. ವಿಜೇತರಿಗೆ ಆಕರ್ಷಕ ಬಹುಮಾನ ನೀಡಲಾಗುವುದು.

ತೋಕ್–ಗನ್ ಹಿಡಿದುಕೊಂಡು ಮಹಿಳೆಯರು ಹಾಗೂ ಪುರುಷರು ಕೊಡವ ಸಾಂಸ್ಕೃತಿಕ ನೃತ್ಯ ಮಾಡಲಿದ್ದಾರೆ. ಬೀರುಗ ದಕ್ಷಿಣ ಗಂಗೆ ಕೊಡವ ಸಾಂಸ್ಕೃತಿಕ ಕೂಟದಿಂದ ನೃತ್ಯ ಕಾರ್ಯಕ್ರಮ ನಡೆಯಲಿದೆ. 2019ರಿಂದ ವಿವಿಧ ಸಾಧಕರಿಗೆ 'ಕೊಡವ ವಿಭೂಷಣ ಪ್ರಶಸ್ತಿ' ನೀಡುತ್ತಾ ಬರಲಾಗಿದ್ದು, ಈ ಬಾರಿಯೂ 6 ಮಂದಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಕಡ್ಡಾಯವಾಗಿ ಎಲ್ಲರೂ ತೋಕ್–ಗನ್ ತರುವುದರೊಂದಿಗೆ ಕೊಡವ ಸಾಂಪ್ರದಾಯಿಕ ಉಡುಪು ಕುಪ್ಯ–ಚಾಲೆ–ಮಂಡೆ ಚೆಕ್ ವಸ್ತ್ರ ಮಹಿಳೆಯರು ಕೊಡವತಿ ಪೊಡಿಯ–ಮಂಡೆ ವಸ್ತ್ರ ಸಹಿತ ಬಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ನಾಚಪ್ಪ ಮನವಿ ಮಾಡಿದರು.

ಸಂವಿಧಾನದಡಿಯಲ್ಲಿ ಇಂಡಿಯನ್ ಆರ್ಮ್ಸ್ ಆ್ಯಕ್ಟ್ 3 ಮತ್ತು 4ರಲ್ಲಿ ಕೊಡವರ ಕೋವಿಯ ವಿಶೇಷ ಹಕ್ಕು ಮುಂದುವರೆಯಲ್ಪಟ್ಟಿದೆ. ಇತ್ತೀಚೆಗೆ ಕೆಲವು ಅನಪೇಕ್ಷಿತ ಪಟ್ಟಭದ್ರ ಶಕ್ತಿಗಳು ಪ್ರಭಾವ ಬೀರಿ ಈ ಹಕ್ಕನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತಿದ್ದು, ಕೊಡಗಿನ ಸ್ವಾಸ್ಥ್ಯ ಕೆಡಿಸುವ ಕ್ರೂರ ಹುನ್ನಾರದಲ್ಲಿ ತೊಡಗಿವೆ. ತೋಕ್–ಗನ್ ಕೊಡವರ ಪ್ರಾಣವಾಯುವಾಗಿದ್ದು, ಹುಟ್ಟಿನಿಂದ ಸಾವಿನವರೆಗೆ ಕೊಡವರ ಧಾರ್ಮಿಕ ಸಂಸ್ಕಾರವಾಗಿ ಅಂತರ್ಗತವಾಗಿದೆ. ಕೊಡವರ ಎಲ್ಲಾ ಸಾಂಸ್ಕೃತಿಕ ಆಚರಣೆಗಳಲ್ಲಿ ತೋಕ್–ಗನ್ ಸದಾ ಬಳಕೆಯಾಗುತ್ತಿದೆ ಹೊರತು ದುರ್ಬಳಕೆಯಾಗುತ್ತಿಲ್ಲ ಎಂದರು.

ಮುಂದಿನ ಪೀಳಿಗೆಗೆ ತೋಕ್–ಗನ್‌ನ ಹಕ್ಕಿನ ಕುರಿತು ಅರಿವಿಕೆ ಮೂಡಿಸಿ ನಮ್ಮ ಸಂವಿಧಾನಿಕ ಹಕ್ಕುಗಳ ಉಲ್ಲಂಘನೆ ಮಾಡದಂತೆ ಸರ್ಕಾರವನ್ನು ಕಾಲ ಕಾಲಕ್ಕೆ ಎಚ್ಚರಿಸುವ ಸಲುವಾಗಿಯೂ ತೋಕ್ ನಮ್ಮೆ ಆಚರಿಸಲಾಗುತ್ತಿದೆ. ಸಿಖ್‌ರ ಕಿರ್ಪಾಣ್ ಮಾದರಿಯಲ್ಲಿ ಸಂವಿಧಾನದ 25 ಮತ್ತು 26ನೇ ವಿಧಿಯಂತೆ ಶಾಶ್ವತ ಭದ್ರತೆ ಕಲ್ಪಿಸಬೇಕೆಂದು ಆಗ್ರಹಿಸಿ ನಮ್ಮೆಯಲ್ಲಿ ಹಕ್ಕೊತ್ತಾಯ ಮಂಡಿಸಲಾಗುವುದು ಎಂದು ನಾಚಪ್ಪ ಹೇಳಿದರು.

ಮಧ್ಯ ಏಷ್ಯದ ಪರ್ವತವಾಸಿ ಬುಡಕಟ್ಟು ಜನಾಂಗಗಳ ಜಾನಪದ ಕ್ರೀಡೆ 'ಬುಜ್‌ಕಾಶಿ' ಉತ್ಸವಕ್ಕೆ ಯಾವ ರೀತಿ ಅಲ್ಲಿನ ಸರ್ಕಾರಗಳೇ ಉತ್ತೇಜನ ನೀಡುತ್ತಿವೆಯೋ ಅದೇ ರೀತಿಯ ಪ್ರೋತ್ಸಾಹ ಕೊಡವರ ತೋಕ್‌ನಮ್ಮೆ– ಗನ್ ಕಾರ್ನಿವಲ್‌ಗೂ ನೀಡಬೇಕು ಎಂದು ಅವರು ಒತ್ತಾಯಿಸಿದರು.

ಮಡಿಕೇರಿಯಲ್ಲಿ ಪೊಮ್ಮಾಲೆ ಕೊಡಗ್ ಚಿತ್ರ ಬಿಡುಗಡೆ



ಮಡಿಕೇರಿ, ಡಿ.13– ಕೊಡವ ಮಕ್ಕಡ ಕೂಟ ಅರ್ಪಿಸುವ ಸ್ಮಾಷಿಕ್ ಎಂಟರ್‌ಟೈನ್‌ಮೆಂಟ್ ಬ್ಯಾನರ್‌ನಡಿ ನಿರ್ಮಾಪಕಿ ಕೊಟ್ಟುಕತ್ತೀರ ಯಶೋಧ ಪ್ರಕಾಶ್ ನಿರ್ಮಿಸಿ, ನಿರ್ದೇಶಕ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ತಮ್ಮ 'ವಿಧಿರ ಕಳಿಲ್' ಕಾದಂಬರಿ ಆಧರಿಸಿ ನಿರ್ದೇಶಿಸಿರುವ 'ಪೊಮ್ಮಾಲೆ ಕೊಡಗ್' ಕೊಡವ ಚಲನಚಿತ್ರ ಮಡಿಕೇರಿಯಲ್ಲಿ ಬಿಡುಗಡೆಯಾಗಿದೆ.

ನಗರದ ಕಾವೇರಿ ಕಲಾಕ್ಷೇತ್ರದ ಸಭಾಂಗಣದಲ್ಲಿ ಚಿತ್ರ ಬಿಡುಗಡೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ರಾಜ್ಯ ಜೀವ ವೈವಿಧ್ಯ ಮಂಡಳಿಯ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಸಿನಿಮಾಗಳ ಮೂಲಕ ಕೊಡಗಿನ ಶ್ರೀಮಂತ ಪರಿಸರ, ಕಲೆ ಮತ್ತು ಸಂಸ್ಕೃತಿಯನ್ನು ಪರಿಚಯಿಸುತ್ತಿರುವುದು ಶ್ಲಾಘನೀಯವೆಂದರು. ಗ್ರಾಮೀಣ ಪ್ರದೇಶಗಳಲ್ಲಿ ಕೊಡವ ಸಂಸ್ಕೃತಿ ಅನಾವರಣಗೊಳ್ಳುತ್ತಿದ್ದು, ಮಂದ್, ದೇವಾಲಯ ಮತ್ತಿತರ ಕಡೆಗಳಲ್ಲಿ ಕಲೆಯ ಪ್ರದರ್ಶನವಾಗುತ್ತಿದೆ ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಪಿ.ಸುನಿಲ್ ಸುಬ್ರಮಣಿ, ನಗರಸಭಾ ಅಧ್ಯಕ್ಷೆ ನೆರವಂಡ ಅನಿತಾ ಪೂವಯ್ಯ, ಹಿರಿಯ ಸಾಹಿತಿ ಬಾಚರಣಿಯಂಡ ಅಪ್ಪಣ್ಣ, 'ಪೊಮ್ಮಾಲೆ ಕೊಡಗ್' ಚಿತ್ರದ ನಿರ್ಮಾಪಕಿ ಕೊಟ್ಟುಕತ್ತೀರ ಯಶೋಧ ಪ್ರಕಾಶ್, ಚಿತ್ರದ ನಿರ್ದೇಶಕ ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ, ಸಾಹಿತಿ ಡಾ.ಕುಶ್ವಂತ್ ಕೋಳಿಬೈಲು, ನಿವೃತ್ತ ಲೆಫ್ಟಿನೆಂಟ್ ಕರ್ನಲ್ ಗಣಪತಿ ಮತ್ತಿತರರು ಮಾತನಾಡಿದರು.

ಕುಶಾಲನಗರ ಪಟ್ಟಣ ಪಂಚಾಯಿತಿ ಈಗ ಪುರಸಭೆ



ಕುಶಾಲನಗರ, ಡಿ.13– ಕೊಡಗು ಜಿಲ್ಲೆಯ ಪ್ರಮುಖ ಪಟ್ಟಣಗಳಲ್ಲಿ ಒಂದಾಗಿರುವ ಕುಶಾಲನಗರ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಘೋಷಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಈ ಸಂಬಂಧ ಡಿಸೆಂಬರ್ 8ರ ಕರ್ನಾಟಕ ರಾಜ್ಯಪತ್ರದಲ್ಲಿ ರಾಜ್ಯಪಾಲರ ಆಜ್ಞೆ ಹಿನ್ನೆಲೆಯಲ್ಲಿ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಟಿ. ಮಂಜುನಾಥ ಪ್ರಕಟಣೆ ನೀಡಿದ್ದಾರೆ. 'ಕೊಡಗು ಜಿಲ್ಲೆಯ ಕುಶಾಲನಗರ ಪಟ್ಟಣ ಪಂಚಾಯಿತಿಯನ್ನು ಸಣ್ಣ ನಗರ ಪ್ರದೇಶವೆಂದು ಉದ್ಘೋಷಿಸಿ ಸದರಿ ಸಣ್ಣ ನಗರ ಪ್ರದೇಶವನ್ನು ಕುಶಾಲನಗರ ಪುರಸಭೆಯ ಪ್ರದೇಶವೆಂದು ಪದನಾಮಕರೀಸಿ ಈ ಮೂಲಕ ಉದ್ಘೋಷಿಸಲಾಗಿದೆ ಎಂದು ಪ್ರಕಟಿಸಲಾಗಿದೆ.

ಇದೀಗ ಕುಶಾಲನಗರ ಪಟ್ಟಣ ಪಂಚಾಯಿತಿ ಪುರಸಭೆಯಾಗಿ ಮೇಲ್ದರ್ಜೆಗೆ ಏರಿರುವುದರ ಜೊತೆಗೆ ಪಕ್ಕದ ಮುಳ್ಳುಸೋಗೆ ಗ್ರಾ.ಪಂ.ಯ ಪೂರ್ಣ ಕಂದಾಯ ಗ್ರಾಮ, ಗುಡ್ಡೆಹೊಸೂರು ಗ್ರಾ.ಪಂ. ಮಾದಾಪಟ್ಟಣ ಗ್ರಾಮದ ಸ.ನಂ. 105/1, 102, 105/8, 105/9, 94, 93, 96, 57/2, 63/29, 23/26, 63/25, 63/18, 63/19, 63/21, 63/20, 37/3, 37/2, 36/1, 38/2, 39/2, 11/1, 11/10, 11/9 ಹಾಗೂ 11/2 ಜಾಗವೂ ಕುಶಾಲನಗರ ಪುರಸಭೆ ವ್ಯಾಪ್ತಿಯೊಳಗೆ ಬರುತ್ತದೆ.

ಪುರಸಭೆಯ ವ್ಯಾಪ್ತಿ ಉತ್ತರದಲ್ಲಿ ಕುಶಾಲನಗರ ಪಟ್ಟಣದ ಉತ್ತರ ದಿಕ್ಕಿನಲ್ಲಿರುವ ಗುಮ್ಮನಕೊಲ್ಲಿ ಗ್ರಾಮದ ಈಶಾನ್ಯ ಭಾಗದ ಹಾರಂಗಿ ರಸ್ತೆಯಿಂದ ಪ್ರಾರಂಭಗೊಂಡು ಗುಮ್ಮನಕೊಲ್ಲಿ ಗ್ರಾಮದ ಸ.ನಂ 97 ಜಯರಾಮ್ ಬಿನ್/ಅಣ್ಣಯ್ಯ ರವರ ಮನೆಯಿಂದ ಪ್ರಾರಂಭಗೊಂಡು ತದನಂತರ ದಕ್ಷಿಣಾಭಿಮುಖವಾಗಿ ಚಲಿಸಿ ಸರ್ಕಾರಿ ಪದವಿ ಕಾಲೇಜು ಒಳಗೊಂಡಂತೆ ಮತ್ತು ಪೂರ್ವಾಭಿಮುಖವಾಗಿ ಚಲಿಸಿ ಅಂಬೇಡ್ಕರ್ ಭವನ, ವಾಲ್ಮೀಕಿ ಭವನ ಸೇರಿಕೊಂಡು ಗುಮ್ಮನಕೊಲ್ಲಿ ಗ್ರಾಮದ ಸ.ನಂ. 5/1, ಕಡಂಗವನ್ನು ದಾಟಿಕೊಂಡು ದಕ್ಷಿಣಾಭಿಮುಖವಾಗಿ ಚಲಿಸಿ, ಬಿ.ಸಿ.ಎಂ ಹಾಸ್ಟೆಲ್‌ನ್ನು ಸೇರಿಕೊಂಡು ಮತ್ತು ಸರ್ವೆ ನಂ 7 ಗಣಿ ಪ್ರಸಾದ್ ರವರ ಸಿಲ್ವರ್ ಮರ ತೋಟವನ್ನು ಸೇರಿಕೊಂಡು ಮತ್ತು ಸುಶೀಲಮ್ಮ ಅವರ ಜಾಗವನ್ನು ಸೇರಿಕೊಂಡು ಹಾಸನ ಸೋಮವಾರಪೇಟೆ ರಸ್ತೆಗೆ ಬಂದು ಸೇರುತ್ತದೆ. ತದನಂತರ ಪೂರ್ವಾಭಿಮುಖವಾಗಿ ಚಲಿಸಿ ಗುಮ್ಮನಕೊಲ್ಲಿ ಗ್ರಾಮದ ಸರ್ವೆ ನಂಬರ್ 16, 17, 18 ಒಳಗೊಂಡಂತೆ ಸ.ನಂ.86 ರ ಜಿ.ಕೆ.ಕುಮಾರ್ ರವರ ಖಾಲಿ ಜಾಗವನ್ನು ಸೇರಿಕೊಂಡು ಕಾವೇರಿ ಹೊಳೆಗೆ ಬಂದು ಸೇರುತ್ತದೆ.

ಬಿಜೆಪಿ ಸಂಭ್ರಮಾಚರಣೆ



ಕುಶಾಲನಗರ, ಡಿ.13– ಕುಶಾಲನಗರ ಪಟ್ಟಣ ಪಂಚಾಯ್ತಿ ಪುರಸಭೆಯಾಗಿ ಮೇಲ್ದರ್ಜೆಗೇರಿಸಿದ ಹಿನ್ನೆಲೆಯಲ್ಲಿ ನಗರ ಬಿಜೆಪಿ ಘಟಕದಿಂದ ಸಂಭ್ರಮಾಚರಣೆ ಮಾಡಲಾಯಿತು. ಕುಶಾಲನಗರದ ಗಣಪತಿ ದೇವಾಲಯ ಮುಂಭಾಗ ನಡೆದ ಸಂಭ್ರಮಾಚರಣೆ ಸಂದರ್ಭ ಬಿಜೆಪಿ ಸರಕಾರ, ಪ್ರಧಾನಿ ಮೋದಿ, ಮುಖ್ಯಮಂತ್ರಿ ಬೊಮ್ಮಾಯಿ ಮತ್ತು ಶಾಸಕ ಅಪ್ಪಚ್ಚುರಂಜನ್ ಪರ ಜೈಕಾರ ಮೊಳಗಿಸಲಾಯಿತು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಪಟಾಕಿ ಸಿಡಿಸಿ, ನೆರೆದಿದ್ದವರಿಗೆ ಸಿಹಿ ಹಂಚಿ ಸಂಭ್ರಮಾಚರಣೆ ಮಾಡಲಾಯಿತು. ಈ ಸಂದರ್ಭ ಮಾತನಾಡಿದ ಕುಶಾಲನಗರ ಪಪಂ ಅಧ್ಯಕ್ಷ ಬಿ.ಜೈ ವರ್ಧನ್, ಕುಶಾಲನಗರ ಪುರಸಭೆಯಾಗಿ ಮೇಲ್ದರ್ಜೆಗೇರಿಸುವಲ್ಲಿ ಶಾಸಕ ಅಪ್ಪಚ್ಚುರಂಜನ್ ಅವರ ಪಾತ್ರ ದೊಡ್ಡದಿದೆ ಎಂದರು. ಪುರಸಭೆಗೆ ಸಹಕಾರ ನೀಡಿದ ಮುಳ್ಳುಸೋಗೆ, ಗುಡ್ಡೆಹೊಸೂರು ಗ್ರಾಪಂ ಹಾಗೂ ಕುಶಾಲನಗರ ಪಟ್ಟಣ ಪಂಚಾಯ್ತಿಯ ಪ್ರಸಕ್ತ ಹಾಗೂ ಹಿಂದಿನ ಆಡಳಿತ ಮಂಡಳಿಗೆ, ಅಧಿಕಾರಿ ವರ್ಗದವರಿಗೆ ಅವರು ಧನ್ಯವಾದ ಸಲ್ಲಿಸಿದರು. ನಗರ ಬಿಜೆಪಿ ಅಧ್ಯಕ್ಷ ಉಮಾಶಂಕರ್ ಮಾತನಾಡಿ, ಪುರಸಭೆ ವ್ಯಾಪ್ತಿಯಲ್ಲಿ ಮತ್ತಷ್ಟು ಅಭಿವೃದ್ಧಿ ಕಾಮಗಾರಿಗಳು ಕೈಗೊಳ್ಳಲು ಅವಕಾಶವಿರುವ ಕಾರಣ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲ ಲಭಿಸಲಿದೆ ಎಂದರು.

ಪಪಂ ಸದಸ್ಯ ಅಮೃತ್‌ರಾಜ್ ಮಾತನಾಡಿದರು. ಈ ಸಂದರ್ಭ ಪಪಂ ಸದಸ್ಯರಾದ ರೂಪಾ ಉಮಾಶಂಕರ್, ನಾರಾಯಣ, ಡಿ.ಕೆ.ತಿಮ್ಮಪ್ಪ, ಕೆ.ಜಿ.ಮನು, ಪ್ರಮುಖರಾದ ಎಂ.ಡಿ.ಕೃಷ್ಣಪ್ಪ, ಶಿವಾಜಿ, ವೇದಾವತಿ, ಮಧುಸೂದನ್, ಪುಂಡರೀಕಾಕ್ಷ ವೈಶಾಖ್, ಬೋಸ್ ಮೊಣ್ಣಪ್ಪ ರಾಮಚಂದ್ರ, ವರದ, ಸೋಮಣ್ಣ, ಚಂದ್ರಶೇಖರ್, ನಿಸಾರ್, ಅನುದೀಪ್, ಮತ್ತಿತರರು ಇದ್ದರು.

ಚಾ.ನಗರಕ್ಕೆ ಹೋದರೆ ಅಧಿಕಾರ ಹೋಗುತ್ತದೆ ಎಂಬ ಕೊರಗು ಕೆಲವರಲ್ಲಿದೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾರ್ಮಿಕ ನುಡಿ

ಹನೂರು, ಡಿ.13– ಚಾಮರಾಜನಗರ ಜಿಲ್ಲೆಯ ಜನತೆ ಬಹಳ ಮುಗ್ಧರು, ಅಮಾಯಕರು, ಶ್ರಮಿಕರು ಇಂತಹ ಜಿಲ್ಲೆಗೆ ಹೋದರೆ ಅಧಿಕಾರ ಹೋಗುತ್ತದೆ ಎಂಬ ನಿಟ್ಟಿನಲ್ಲಿ ಕೆಲವರು ದೊಡ್ಡ ಕೊರತೆಯನ್ನು ತಮ್ಮ ಜೀವನದಲ್ಲಿ ಎದುರಿಸುತ್ತಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಮಾರ್ಮಿಕವಾಗಿ ನುಡಿದರು.





ಪಟ್ಟಣದ ಮಹದೇಶ್ವರ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ಮತ್ತು ಚಾಮರಾಜನಗರ ಜಿಲ್ಲಾ ಪಂಚಾಯತ್, ಕೊಳ್ಳೇಗಾಲ ಮತ್ತು ಹನೂರು ವಿಧಾನಸಭಾ ಕ್ಷೇತ್ರಗಳ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನಾ ಹಾಗೂ ಉದ್ಘಾಟನಾ ಸಮಾರಂಭ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನೀರಾವರಿ ಸಚಿವನಾಗಿ ಅನೇಕ ಬಾರಿ ಜಿಲ್ಲೆಗೆ ಭೇಟಿ ನೀಡಿದ್ದೇನೆ. ಈ ವೇಳೆ ನೀರಿನ ಬವಣೆ ಅರಿತು ಚಾಮರಾಜನಗರ, ಗುಂಡ್ಲುಪೇಟೆ ದೊಡ್ಡ ದೊಡ್ಡ ಕೆರೆಗಳಿಗೆ ನೀರು ತುಂಬಿಸಲು ಕ್ರಮವಹಿಸಿದ್ದೇನೆ. ಅಂತೆಯೇ ಮುಂದುವರೆದ ಭಾಗವಾಗಿ ಕೊಳ್ಳೇಗಾಲ, ಹನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಕೆರೆಗಳಿಗೆ ನೀರು ತುಂಬಿಸಲು ಶೀಘ್ರದಲ್ಲಿಯೇ ಕ್ರಮವಹಿಸುತ್ತೇನೆ ಎಂದು ಅವರು ಹೇಳಿದರು.

ಪವಾಡಪುರುಷ ಮಲೆ ಮಹದೇಶ್ವರರು ನಡೆದಾಡಿದ ಪುಣ್ಯಭೂಮಿಯಾಗಿದೆ. ಚಾಮರಾಜನಗರ ಜಿಲ್ಲೆ ಗಡಿ ಭಾಗವಾಗಿದ್ದು, ರಾಜ್ಯದ ಗಡಿ ಜಿಲ್ಲೆಗಳಿಗೆ ಕಲ್ಯಾಣಕ್ಕೆ ಸರ್ಕಾರ ಬದ್ಧವಾಗಿದೆ. ಈ ಬಗ್ಗೆ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದೇನೆ. ಇಲ್ಲಿನ ಅಭಿವೃದ್ಧಿಗೆ ಬೇಕಾದ ಅನುಕೂಲಗಳನ್ನು ಕಲ್ಪಿಸಲು ಸರ್ಕಾರ ಕಟಿಬದ್ಧವಾಗಿದೆ. ಎರಡು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಹಿಂದೆ ಆಗಿರುವ ಹಾಗೂ ಮುಂದೆ ಆಗಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳಿಗೆ ನಾನು ಸಾಕ್ಷಿಯಾಗುತ್ತಿರುವುದು ನನ್ನ ಸೌಭಾಗ್ಯ. ರಾಜ್ಯದ ಮುಖ್ಯಮಂತ್ರಿಯಾಗಿ ರೈತರಿಗೆ ಬಡ್ಡಿ ರಹಿತ ಸಾಲ ನೀಡಲಾಗುತ್ತಿದೆ. ಹಾಲಿನ ಗೌರವ ಧನವನ್ನು ಹೆಚ್ಚಳ ಮಾಡಲಾಗಿದೆ. ಯಶಸ್ವಿ ಯೋಜನೆಯನ್ನು ಮತ್ತೆ ಜಾರಿಗೆ ತರಲಾಗಿದೆ. ಸ್ತ್ರೀ ಸಾಮರ್ಥ್ಯ ಯೋಜನೆ, ರೈತರ ಮಕ್ಕಳಿಗೆ ವಿದ್ಯಾನಿಧಿ ಕೊಡುತ್ತಿದ್ದೇವೆ. ಜೊತೆಗೆ ರೈತ ಕೂಲಿ ಕಾರ್ಮಿಕ, ನೇಕಾರರು, ಟ್ಯಾಕ್ಸಿ ಚಾಲಕರು, ಮೀನುಗಾರರು ಇನ್ನಿತರೆ ವರ್ಗದ ಮಕ್ಕಳಿಗೆ ಯೋಜನೆಯನ್ನು ವಿಸ್ತರಿಸಿದ್ದೇವೆ ಎಂದು ಸರ್ಕಾರದ ಸಾಧನೆಗಳನ್ನು ವಿವರಿಸಿದರು.

ನಾವು ಭಾಷಣ ಮಾಡುವುದಿಲ್ಲ. ಸಾಮಾಜಿಕ ನ್ಯಾಯ ಭಾಷಣದಲ್ಲಿ ಆಗೋಲ್ಲ. ಅದು ಕೃತಿ ರೂಪಕ್ಕೆ ಬರಬೇಕಾಗುತ್ತದೆ ಎಂದು ವಿರೋಧ ಪಕ್ಷವನ್ನು ಪರೋಕ್ಷವಾಗಿ ಟೀಕಿಸಿದರು. ಎಸ್ಸಿ, ಎಸ್ಟಿ, ಮೀಸಲಾತಿಗೆ ಕೈ ಹಾಕಬೇಡಿ ಎಂದು ಹಲವರು ಸಲಹೆ ನೀಡಿದರು. ಆದರೆ ನಾನು ಅದ್ಯಾವುದಕ್ಕೂ ಕಿವಿಗೊಡಲಿಲ್ಲ. ಕೆಲವೊಂದು ಚಿಂತನೆಯ ಗೋಡೆ ಒಡೆದರೆ ಕ್ರಾಂತಿಯಾಗುತ್ತದೆ. ಸಂವಿಧಾನದ ಆಶಯದಂತೆ ತೀರ್ಮಾನ ತೆಗೆದುಕೊಂಡಿದ್ದೇನೆ. ಟೀಕೆ, ಟಿಪ್ಪಣಿ ಎದುರಿಸಿದರೆ ಯಶಸ್ಸಿನ ಮೆಟ್ಟಿಲು ಸಾಧ್ಯ. ಅಧಿಕಾರದಲ್ಲಿ ಎಷ್ಟು ದಿನ ಇರುತ್ತೇವೆ ಎಂಬುದು ಮುಖ್ಯವಲ್ಲ, ಈ ಅವಧಿಯಲ್ಲಿ ನಾವು ಯಾವ ಕೆಲಸ ಮಾಡಿದ್ದೇವೆ ಎಂಬುದು ಮುಖ್ಯ ಎಂದು ಬೊಮ್ಮಾಯಿ ಹೇಳಿದರು.


ನಮ್ಮದು ಡಬಲ್ ಇಂಜಿನ್ ಸರ್ಕಾರ. ನರೇಂದ್ರ ಮೋದಿ ಆಡಳಿತ ಕಾರ್ಯವೈಖರಿ ಜಗಕ್ಕೆ ಮಾದರಿ. ಅವರು ಪ್ರತಿ ಮನೆಗೆ ಕುಡಿಯುವ ನೀರು ಒದಗಿಸುವ ನಿಟ್ಟಿನಲ್ಲಿ ಜಲಜೀವನ್ ಮಿಷನ್ ಜಾರಿಗೆ ತಂದಿದ್ದಾರೆ ಎಂದು ಸ್ಮರಿಸಿದ ಅವರು ಶಾಸಕ ಆರ್. ನರೇಂದ್ರ ಅವರ ಬೇಡಿಕೆಗೆ ಅನುಗುಣವಾಗಿ ಹನೂರು ಆಸ್ಪತ್ರೆಯನ್ನು ಮೇಲದರ್ಜೆಗೇರಿಸಲಾಗುವುದು. ಜಾಗೇರಿ ರೈತರ ಸಮಸ್ಯೆಗೆ ಜಂಟಿ ಸರ್ವೆ ನಡೆಸಿ ಕ್ರಮ ಕೈಗೊಳ್ಳಲಾಗುವುದು, ಉಳಿದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಕ್ರಮವಹಿಸಲಾಗುವುದು. ಒಟ್ಟಾರೆ ನಮ್ಮ ಸರ್ಕಾರ ಸಮಗ್ರ ಕರ್ನಾಟಕ ಅಭಿವೃದ್ಧಿಗೆ ಒತ್ತನ್ನು ನೀಡಲಾಗುವುದು ಎಂದರು.

ಶಾಸಕ ಆರ್. ನರೇಂದ್ರ ಅವರ ಪಕ್ಷವನ್ನು ಕಿಚಾಯಿಸಿದ ಸಿಎಂ : ಶಾಸಕ ಆರ್.ನರೇಂದ್ರ ಅವರು ತಮ್ಮ ಸರ್ಕಾರದ ಅವಧಿಯಲ್ಲಿ ಕೆಲವೊಂದು ಯೋಜನೆಗಳನ್ನು ಸಾಂಕ್ಷನ್ ಮಾಡಿಸಿದ್ದಾರೆ. ಆದರೆ ಅನುದಾನವನ್ನು ನಮ್ಮ ಸರ್ಕಾರದಲ್ಲಿ ಕೇಳುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಕಂದಾಯ ಸಚಿವ ಆರ್. ಅಶೋಕ್ ಮಾತನಾಡಿ, ಚಾಮರಾಜನಗರಕ್ಕೆ ಬರಲು ಹಿಂದೇಟು ಹಾಕುವ ಮಂದಿಗೆ ಬಸವರಾಜ ಬೊಮ್ಮಾಯಿಯವರು ಶಾಶ್ವತವಾದ ಉತ್ತರವನ್ನು ನೀಡಿದ್ದಾರೆ. ಈ ಮೂಲಕ ಶಾಪಗ್ರಸ್ತ ಎಂಬ ಕುಖ್ಯಾತಿಯನ್ನು ತೊಡೆದು ಹಾಕಿದ್ದಾರೆ. ಕೇಂದ್ರದಲ್ಲಿ ನರೇಂದ್ರ ಮೋದಿ ಪಿಎಂ, ರಾಜ್ಯದಲ್ಲಿ ಬಸವರಾಜ್ ಬೊಮ್ಮಾಯಿ ಸಿಎಂ ಆಗಿ ಡಬಲ್ ಇಂಜಿನ್ ಸರ್ಕಾರ ನಡೆಸುತ್ತಿದ್ದಾರೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ, ಶಾಸಕ ಆರ್.ನರೇಂದ್ರ ಮಾತನಾಡಿದರು. ಅಭಿವೃದ್ಧಿ ಕಾಮಗಾರಿಗಳ ಶಂಕು ಸ್ಥಾಪನೆ ಹಾಗೂ ಉದ್ಘಾಟನೆಯನ್ನು ಮುಖ್ಯಮಂತ್ರಿಗಳು ನೆರವೇರಿಸಿದರು. ಈ ಸಂದರ್ಭದಲ್ಲಿ ರಾಜ್ಯ ಮತ್ತು ಜಿಲ್ಲಾಮಟ್ಟದ ಅಧಿಕಾರಿಗಳು, ಚುನಾಯಿತ ಜನಪ್ರತಿನಿಧಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

ಜನಸಾಗರ... ಆಕ್ಷೇಪ... ಶಿರಬಾಗಿ ಕೈ ಮುಗಿದ ಸಿಎಂ... ಶಾಸಕರೇ ಹೀರೋ...



ಚಾಮರಾಜನಗರ, ಡಿ.13– ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದಿಲ್ಲಿ ನಡೆದ ಮುಖ್ಯಮಂತ್ರಿಗಳ ಕಾರ್ಯಕ್ರಮಕ್ಕೆ ಜನಸಾಗರವೇ ಹರಿದು ಬಂದಿತ್ತು. ಸುಮಾರು 20 ಸಾವಿರಕ್ಕೂ ಅಧಿಕ ಜನರು ಆಗಮಿಸಿದ್ದರಿಂದ ಎಲ್ಲೆಂದರಲ್ಲಿ ಜನವೋ, ಜನ ಕಂಡುಬಂತು.

ಆಕ್ಷೇಪ: ಸಮಾರಂಭದ ವೇದಿಕೆಯಲ್ಲಿ ಹಾಕಲಾಗಿದ್ದ ಎಲ್‌ಇಡಿ ಪರದೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಭಾವಚಿತ್ರ ಹಾಕಿಲ್ಲ ಎಂದು ಅಭಿಮಾನಿಗಳು ಘೋಷಣೆಗಳನ್ನು ಕೂಗಿ ಕಾರ್ಯಕ್ರಮ ಆರಂಭಕ್ಕೂ ಮೊದಲು ಆಕ್ಷೇಪಣೆ ವ್ಯಕ್ತಪಡಿಸಿದರು. ಈ ವೇಳೆ ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಮಾತನಾಡಿ, ಇದು ಸರ್ಕಾರಿ ಕಾರ್ಯಕ್ರಮ ಶಿಷ್ಟಾಚಾರ ಪ್ರಕಾರ ಕಾರ್ಯಕ್ರಮ ನಡೆಯುತ್ತಿದೆ ಎಂದು ಸ್ಪಷ್ಟಪಡಿಸಿದರು. ನಂತರ ಯಡಿಯೂರಪ್ಪ ಅಭಿಮಾನಿಗಳು ಸುಮ್ಮನಾದರು.

ಶಿರಬಾಗಿ ಕೈಮುಗಿದ ಸಿಎಂ: ವೇದಿಕೆಗೆ ಆಗಮಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವೇದಿಕೆಯ ಕೊನೆಯವರೆಗೂ ಜನರತ್ತ ಕೈ ಬೀಸಿದರು. ನಂತರ ವೇದಿಕೆ ಮಧ್ಯಭಾಗಕ್ಕೆ ಆಗಮಿಸಿದ ಸಿಎಂ ಜಿಲ್ಲೆಯ ಜನರಿಗೆ ಶಿರಬಾಗಿ ನಮಸ್ಕರಿಸಿದರು. ಈ ವೇಳೆ ಜನರು ಶಿಳ್ಳೆ, ಚಪ್ಪಾಳೆ ಹೊಡೆದು ನಾಡಿನ ದೊರೆಯನ್ನು ಅದ್ದೂರಿಯಾಗಿ ಸ್ವಾಗತಿಸಿದರು.



ಶಾಸಕರೇ ಹೀರೋ: ಕಾರ್ಯಕ್ರಮದಲ್ಲಿ ಗುಂಡ್ಲುಪೇಟೆ ಶಾಸಕ ಸಿ.ಎಸ್. ನಿರಂಜನ್‌ಕುಮಾರ್ ಅವರು ಹಿರೋ ಆಗಿ ಮಿಂಚಿದರು. ಕಾರ್ಯಕ್ರಮದಲ್ಲಿ ಗಣ್ಯರು ಅವರ ಹೆಸರು ಹೇಳಿದಾಗೆಲ್ಲಾ ಭಾರೀ ಶಿಳ್ಳೆ, ಚಪ್ಪಾಳೆ, ಘೋಷಣೆಗಳು ಮೊಳಗಿದವು. ಇದಲ್ಲದೇ ಕಾರ್ಯಕ್ರಮದಲ್ಲಿ ಅಭಿಮಾನಿಗಳು ಹಾಗೂ ಬೆಂಗಲಿಗರು ಶಾಸಕರ ಫೋಟೋ ಪ್ರದರ್ಶನ ಮಾಡುತ್ತಿದ್ದ ದೃಶ್ಯ ಕಂಡು ಬಂತು.

ವೇದಿಕೆಯಲ್ಲಿ ಬಿಜೆಪಿ ಮುಖಂಡರು: ವೇದಿಕೆಯಲ್ಲಿ ಬಿಜೆಪಿ ಜಿಲ್ಲಾ ಅಧ್ಯಕ್ಷರು ಸೇರಿದಂತೆ ಆ ಪಕ್ಷದ 15ಕ್ಕೂ ಹೆಚ್ಚು ಮುಖಂಡರು ಆಸೀನರಾಗಿದ್ದರು. ಇಲ್ಲಿ ನಡೆಯುತ್ತಿರುವುದು ಸರ್ಕಾರಿ ಕಾರ್ಯಕ್ರಮವೋ ಅಥವಾ ಬಿಜೆಪಿ ಪಕ್ಷದ ಕಾರ್ಯಕ್ರಮವೋ ಎಂಬ ಗುಸು–ಗುಸು ಮಾತುಗಳು ಜನರಿಂದ ಕೇಳಿ ಬಂತು.

ಊಟಕ್ಕಾಗಿ ಕಿತ್ತಾಟ: ಕಾರ್ಯಕ್ರಮ ಮುಗಿದ ಬಳಿಕ ಜನರು ಊಟಕ್ಕಾಗಿ ಕಿತ್ತಾಡುತ್ತಿದ್ದ ದೃಶ್ಯ ಕಂಡುಬಂತು. ಖಾಸಗಿ ಬಸ್ ನಿಲ್ದಾಣದ ಮುಂಭಾಗ ಹಾಗೂ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಗೂಡ್ಸ್ ಆಟೋದಲ್ಲಿ ಊಟದ ಪ್ಯಾಕೇಟ್‌ಗಳನ್ನು ವಿತರಿಸಲಾಗುತ್ತಿತ್ತು. ಇದನ್ನು ಪಡೆಯಲು ದೂರದ ಊರುಗಳಿಂದ ಬಂದಿದ್ದ ಜನರು ಪರದಾಡಿದರು. ಊಟ ಮಾಡಿದ ನಂತರ ಎಲ್ಲೆಂದರಲ್ಲಿ ಊಟದ ಪ್ಯಾಕೇಟ್‌ಗಳನ್ನು ಬಿಸಾಡಿದ್ದರಿಂದ ಇಡೀ ರಸ್ತೆ ಕಸಮಯವಾಗಿತ್ತು.

ಬಸ್‌ಗಳಿಗಾಗಿ ಪರದಾಟ: ಮುಖ್ಯಮಂತ್ರಿಗಳ ಕಾರ್ಯಕ್ರಮದ ನಿಮಿತ್ತ ಜನರನ್ನು ಕರೆತರಲು ಕೆಎಸ್ ಆರ್‌ಟಿಸಿ ಬಸ್ ಹಾಗೂ ಖಾಸಗಿ ಬಸ್ ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡಿಕೊಂಡಿದ್ದರಿಂದ ದಿನನಿತ್ಯದ ಪ್ರಯಾಣಕ್ಕೆ ಬಸ್‌ಗಳ ಅಭಾವ ಕಂಡು ಬಂದಿತ್ತು. ಇದರಿಂದ ಸುತ್ತಮುತ್ತಲಿನ ಗ್ರಾಮಗಳಿಗೆ ತೆರಳುತ್ತಿದ್ದ ಪ್ರಯಾಣಿಕರು, ವಿದ್ಯಾರ್ಥಿಗಳು ಪರದಾಡಿದರು.

ಕಲ್ಲಂಗಡಿ, ಸೌತೆಕಾಯಿಗೆ ಬೇಡಿಕೆ: ಜಿಲ್ಲೆಯಲ್ಲಿ ಮೂರು ದಿನಗಳಿಂದ ಜಿಟಿ–ಜಿಟಿ ಮಳೆಯಾಗಿ ತಂಪಿನ ವಾತಾವರಣ ನಿರ್ಮಾಣವಾಗಿತ್ತು. ಆದರೆ, ಸೋಮವಾರ ಹಾಗೂ ಮಂಗಳವಾರ ಮಳೆ ಸಂಪೂರ್ಣವಾಗಿ ನಿಂತು ಸೂರ್ಯ ಪ್ರಖರತೆ ಹೆಚ್ಚಾಗಿದ್ದರಿಂದ ಬಿಸಿಲಿನಿಂದ ಬಳಲಿದ ಜನರು ಕಲ್ಲಂಗಡಿ, ಸೌತೆಕಾಯಿ ಖರೀದಿಗೆ ಮುಗಿಬಿದ್ದರು. ಮುಖ್ಯಮಂತ್ರಿ ಕಾರ್ಯಕ್ರಮಕ್ಕೆ ಸಾವಿರಾರು ಜನರು ಆಗಮಿಸಿದ್ದರು. ಇದರಿಂದ ಚಿಲ್ಲರೆ ವ್ಯಾಪಾರಿಗಳಿಗೆ ಭರ್ಜರಿ ವ್ಯಾಪಾರ ನಡೆಯಿತು.



ಚಾಮರಾಜನಗರಕ್ಕೆ ಮಂಗಳವಾರ ಆಗಮಿಸಿದ್ದ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರನ್ನು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಜಿ. ನಾಗಶ್ರೀ ಪ್ರತಾಪ್ ಅವರು ನೆನಪಿನ ಕಾಣಿಕೆ ನೀಡಿ, ಅಭಿನಂದಿಸಿದರು.

ಸಿಎಂ ಬಸವರಾಜ ಬೊಮ್ಮಾಯಿಗೆ ಪೌರ ಸನ್ಮಾನ

ಚಾಮರಾಜನಗರ, ಡಿ.13– ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನಗರಸಭೆ ವತಿಯಿಂದ ಪೌರ ಸನ್ಮಾನ ಮಾಡಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜಿಲ್ಲೆಯ ಚಾಮರಾಜನಗರ ಮತ್ತು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನಾ ಹಾಗೂ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ್ದ ಅವರನ್ನು ವೇದಿಕೆಯಲ್ಲಿ ನಗರಸಭಾ ಅಧ್ಯಕ್ಷೆ ಆಶಾ ನಟರಾಜು, ಉಪಾಧ್ಯಕ್ಷ ಪಿ.ಸುಧಾ, ಸದಸ್ಯ ಹಾಗೂ ಎಪಿಎಂಸಿ ಅಧ್ಯಕ್ಷ ಮನೋಜ್, ವಾರ್ಡ್‌ನ ಸದಸ್ಯ ಚಂದ್ರಶೇಖರ್, ಶಿವರಾಜ್ ಇತರರು ಮುಖ್ಯಮಂತ್ರಿಗಳಿಗೆ ಹಾರಹಾಕಿ ನೆನಪಿನ ಕಾಣಿಕೆ ನೀಡಿ, ಅಭಿನಂದಿಸಿದರು.

ಚಾಮರಾಜನಗರ ಜಿಲ್ಲಾ ಕೇಂದ್ರಕ್ಕೆ ಆಗಮಿಸಿ ಮುಖ್ಯಮಂತ್ರಿಗಳು 1300 ಕೋಟಿಗೂ ಹೆಚ್ಚು ನಾನಾ ಯೋಜನೆಗಳಿಗೆ ಚಾಲನೆ ನೀಡಿ ಜಿಲ್ಲೆಯ ಅಭಿವೃದ್ಧಿಗೆ ನಾಂದಿಯಾಡಿದ್ದಾರೆ. ಅದೇ ಜಿಲ್ಲಾ ಕೇಂದ್ರದ ನಗರಸಭೆಯ ಎರಡನೇ ಹಂತ ಕುಡಿಯುವ ನೀರಿನ ಯೋಜನೆಗೆ ಅನುದಾನ, ಒಳಚರಂಡಿ ಕಾಮಗಾರಿ ಪೂರ್ಣಗೊಳಿಸುವುದಕ್ಕೆ ಅನುದಾನ ನೀಡಬೇಕು. ನಗರಸಭೆ ಸಮಗ್ರ ಅಭಿವೃಧಿ ವಿಶೇಷ ಪ್ಯಾಕೇಜ್ ನೀಡುವಂತೆ ಮುಖ್ಯಮಂತ್ರಿಗಳಿಗೆ ನಗರಸಭೆ ವತಿಯಿಂದ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ, ಕಂದಾಯ ಸಚಿವ ಅಶೋಕ್, ಶಾಸಕ ಸಿ.ಎಸ್.ನಿರಂಜನ್ ಕುಮಾರ್, ಮುಖಂಡ ಮಲ್ಲೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಒಂದನೇ ಪುಟದಿಂದ

ಸಂಪುಟ ಅನುಮೋದನೆ

ಕೆರೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಕೇಂದ್ರದ ಜಲಜೀವನ್ ಮಿಷನ್ ಯೋಜನೆಯಡಿ ಮನೆ-ಮನೆಗಳಿಗೆ ಶುದ್ಧ ಕುಡಿಯುವ ನೀರು ಪೂರೈಸಲಾಗುತ್ತಿದೆ. ಈಗಾಗಲೇ ರಾಜ್ಯದಲ್ಲಿ 25 ಲಕ್ಷ ಮನೆಗಳಿಗೆ ನೀರು ಪೂರೈಸಲಾಗಿದೆ. ಎಂಟು ಸಾವಿರ ಶಾಲಾ ಕೊಠಡಿ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ. ಕಣ್ಣಿನ ತೊಂದರೆ ಇರುವ 60 ವರ್ಷ ಮೇಲ್ಪಟ್ಟವರಿಗೆ ಉಚಿತ ತಪಾಸಣೆ ಮಾಡಲಾಗುತ್ತಿದೆ. 20 ಲಕ್ಷ ರೈತರಿಗೆ ಸಾಲದ ವ್ಯವಸ್ಥೆ ಮಾಡಲಾಗಿದೆ. ಯಶಸ್ವಿನಿ ಯೋಜನೆ ಮತ್ತೆ ಪ್ರಾರಂಭಿಸಲಾಗಿದೆ. ದುಡಿಯುವ ವರ್ಗಕ್ಕೆ ಮಹತ್ವ ನೀಡಲಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಚಾಮರಾಜನಗರಕ್ಕೆ ಪ್ರತ್ಯೇಕವಾಗಿ ಹೊಸಮಾಲಂಗಿ ಬಳಿ ನದಿ ಮೂಲದಿಂದ ಕುಡಿಯುವ ನೀರು ಪೂರೈಕೆಗೆ 276 ಕೋಟಿ ರೂ. ಮಂಜೂರು ಮಾಡಬೇಕು. ಜಿಲ್ಲಾ ಕೇಂದ್ರದಲ್ಲಿ ಕೆಎಸ್‌ಆರ್‌ಟಿಸಿ ನೂತನ ಬಸ್ ನಿಲ್ದಾಣ ನಿರ್ಮಿಸಬೇಕು. ಎಸ್‌ಸಿ, ಎಸ್‌ಟಿ ಮೂಲ ಸೌಕರ್ಯಕ್ಕೆ ಅನುದಾನ ನೀಡಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಮುಖ್ಯಮಂತ್ರಿಗಳು ಸಾವಿರ ಕೋಟಿಗೂ ಅಧಿಕ ವೆಚ್ಚದ ವಿವಿಧ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕು ಸ್ಥಾಪನೆ ನೆರವೇರಿಸಿದರು. ಬಳಿಕ ಫಲಾನುಭವಿಗಳಿಗೆ ಸೌಲಭ್ಯ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಕಂದಾಯ ಸಚಿವ ಆರ್.ಅಶೋಕ್, ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ, ಶಾಸಕ ಸಿ.ಎಸ್.ನಿರಂಜನಕುಮಾರ್, ಎಂಎಲ್‌ಸಿ ಮರಿತಿಬ್ಬೇಗೌಡ, ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಸದಸ್ಯ ಚಂದ್ರಶೇಖರ್, ಪ್ರಾದೇಶಿಕ ಆಯುಕ್ತ ಪ್ರಕಾಶ್, ಜಿಲ್ಲಾಧಿಕಾರಿ ಡಿ.ಎಸ್.ರಮೇಶ್, ಸಿಇಒ ಕೆ.ಎಂ.ಗಾಯತ್ರಿ ಎಸ್‌ಪಿ ಟಿ.ಪಿ.ಶಿವಕುಮಾರ್, ಮಾಜಿ ಶಾಸಕ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಜಿಪಂ ಮಾಜಿ ಅಧ್ಯಕ್ಷರಾದ ಜಿ.ನಾಗಶ್ರೀ ಪ್ರತಾಪ್, ಮುಖಂಡರಾದ ಅಮ್ಮನಪುರ ಮಲ್ಲೇಶ್, ಆರ್.ಸುಂದರ್, ಅಯ್ಯನಪುರ ಶಿವಕುಮಾರ್, ಮಂಗಲ ಶಿವಕುಮಾರ್, ಆರ್.ಬಾಲರಾಜು, ನಾರಾಯಣಪ್ರಸಾದ್, ನಟರಾಜು, ಶಿವಪುರ ಸುರೇಶ್, ವೀರಭದ್ರಸ್ವಾಮಿ, ಕೊತ್ತಲವಾಡಿ ಕುಮಾರ್, ಸುರೇಶ್‌ನಾಯಕ, ಕಿನಕನಹಳ್ಳಿ ರಾಚಯ್ಯ ಇದ್ದರು.

> **ಹಿಂದಿನ ಸರ್ಕಾರಗಳು ಕೊಡುತ್ತೇವೆ. ಕೊಡ್ತೀನಿ, ಕೊಡಿಸುತ್ತೇನೆ ಎನ್ನುತ್ತಿದ್ದರು. ನಮ್ಮ ಸರ್ಕಾರ ಕೊಡ್ತೀವಿ ಎಂದರೆ ಕೊಟ್ಟೇ ಕೊಡುತ್ತೇವೆ. ಶಾಸಕ ಪುಟ್ಟರಂಗಶೆಟ್ಟಿ ಅವರು ಕುಡಿಯುವ ನೀರು, ರಸ್ತೆಗಾಗಿ ಮನವಿ ಕೊಟ್ಟಿದ್ದಾರೆ. ನಾನು ಇಲ್ಲೇ ಮಂಜೂರಾತಿ ಕೊಡುತ್ತಿದ್ದು ಇನ್ನೊಂದು ವಾರದಲ್ಲಿ ಟೆಂಡರ್ ಕರೆಯಲಿದ್ದೇವೆ.**
> **-ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿಗಳು.**

> **ಈ ಹಿಂದೆ ನಕಾರಾತ್ಮಕ ಸರ್ಕಾರಗಳು ಇದ್ದವು. ಒಂದು ಸರ್ಕಾರದ ವೈಫಲ್ಯಗಳನ್ನು ತೋರಿಸಿ ಮತ್ತೊಂದು ಸರ್ಕಾರ ಅಧಿಕಾರಕ್ಕೆ ಬರುತ್ತಿತ್ತು. ಈಗ ನಮ್ಮದು ಸಕಾರಾತ್ಮಕ ಸರ್ಕಾರ. ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಜನರ ಬಳಿ ಹೋಗುತ್ತೇವೆ. ನಕಾರಾತ್ಮಕ ಸರ್ಕಾರಗಳಿಂದ ಪಕ್ಷ ಬದಲಾಗುತ್ತಿತ್ತೆ ಹೊರತು ಜನರ ಆಶೋತ್ತರಗಳು ಈಡೇರುತ್ತಿರಲಿಲ್ಲ. ಈಗ ಜನರ ಕಲ್ಯಾಣ ಆಗುತ್ತಿದೆ. ಅಸಾಧ್ಯ ಎಂದುಕೊಂಡಿದ್ದನ್ನು ಸಾಧ್ಯ ಮಾಡುತ್ತಿದ್ದೇವೆ. ಸರ್ಕಾರಗಳು ಜನಪ್ರಿಯವಾಗಿರುವುದು ಮುಖ್ಯವಲ್ಲ. ಜನೋಪಯೋಗಿ ಆಗಿರುವುದು ಮುಖ್ಯ. -ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿಗಳು.**

ಚಾ.ನಗರಕ್ಕೆ ಹೋದರೆ ರಾಜಕೀಯ ಶಕ್ತಿ ವೃದ್ಧಿ

ಮೂಢನಂಬಿಕೆ ಹುಟ್ಟು ಹಾಕಲಾಗಿದೆ. ಯಾರ್ಯಾರೂ ಚಾಮರಾಜನಗರಕ್ಕೆ ಬಂದಿಲ್ಲ ಅವರು ಇಲ್ಲಿಗೆ ಬರಬೇಕು. ಇಲ್ಲಿರುವ ಹೃದಯ ಶ್ರೀಮಂತಿಕೆಯ ಜನರ ದರ್ಶನದಿಂದ ನಿಮ್ಮ ಕಷ್ಟ ದೂರವಾಗಿ ಶುಭ ಸೂಚನೆ ದೊರೆಯುತ್ತದೆ ಎಂದು ತಿಳಿಸಿದರು.

`Speed' ಸೋಮಣ್ಣ: ವಿ.ಸೋಮಣ್ಣ ಅವರ ಹೆಸರು 'S'ಯಿಂದ ಪ್ರಾರಂಭವಾಗುತ್ತದೆ. 'Speed' ಕೂಡ 'S'ಯಿಂದ ಆರಂಭವಾಗುತ್ತದೆ. ಹಾಗಾಗಿ ಸೋಮಣ್ಣ ಎಂದರೆ ಸ್ಪೀಡ್(ವೇಗ) ಎಂದು ಜಿಲ್ಲಾ ಉಸ್ತುವಾರಿ ಸಚಿವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಡಿ ಹೊಗಳಿದರು. ಚಾಮರಾಜನಗರದಲ್ಲಿ ಅಭಿವೃದ್ಧಿಯ ಪರ್ವ ಪ್ರಾರಂಭವಾಗಿದೆ. ಸೋಮಣ್ಣ ನೇತೃತ್ವದಲ್ಲಿ ಇಂದು ಸಾವಿರಕ್ಕೂ ಹೆಚ್ಚು ಕೋಟಿ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಮಾಡಲಾಗುತ್ತಿದ್ದು, ಜಿಲ್ಲೆಯ ಅಭಿವೃದ್ಧಿಗೆ ಸೋಮಣ್ಣ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದರು.

ಜೆ.ಎಚ್.ಪಟೇಲ್ ಸ್ಮರಿಸಿದ ಸಿಎಂ: ಜಿಲ್ಲೆ ಮಾಡುವಂತಹ ಸಂದರ್ಭದಲ್ಲಿ ಶಿವಮೊಗ್ಗ, ದಾವಣಗೆರೆಯನ್ನು ಮಾತ್ರ ಪರಿಗಣಿಸಲಾಗಿತ್ತು. ಈ ವೇಳೆ ಜೆ.ಎಚ್.ಪಟೇಲ್ ಅವರ ಬಳಿ ಚಾಮರಾಜನಗರ ಜಿಲ್ಲೆ ಮಾಡಬೇಕೆಂಬ ಪ್ರಸ್ತಾಪ ಬಂದಾಗ ಅವರು ಅತ್ಯಂತ ಸಂತೋಷದಿಂದ ಜಿಲ್ಲೆಯನ್ನು ಘೋಷಿಸಲು ಕ್ರಮ ವಹಿಸಿದರು ಎಂದು ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಎಚ್.ಪಟೇಲ್ ಅವರನ್ನು ಸ್ಮರಿಸಿದರು.

ಜಿಲ್ಲಾ ಕ್ರೀಡಾಂಗಣದ ಅಭಿವೃದ್ಧಿಗೆ ಒತ್ತಾಯ: ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಚಾಮರಾಜನಗರ ಜಿಲ್ಲೆಯಾಗಿ ಘೋಷಣೆಯಾದ ಸಂದರ್ಭದಲ್ಲಿ ಯಾವುದೇ ಸಮರ್ಪಕ ಸೌಲಭ್ಯಗಳಿರಲಿಲ್ಲ. ಪ್ರಸ್ತುತ ಜಿಲ್ಲೆಯೂ ಅಭಿವೃದ್ಧಿಯತ್ತ ಸಾಗುತ್ತಿದೆ. ಜಿಲ್ಲೆಯ ಕ್ರೀಡಾಂಗಣ ಅಭಿವೃದ್ಧಿಗೆ ಸರ್ಕಾರ ಮುಂದಾಗಬೇಕು ಎಂದರು. ನಗರದ ಬಾಬು ಜಗಜೀವನ ರಾಮ್ ಭವನದ ಬಳಿ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ ಮುಂದಾಗಬೇಕು. ಜಿಲ್ಲೆಯ ಎಲ್ಲಾ ಕೆರೆಗಳಿಗೆ ನೀರು ತುಂಬಿಸಬೇಕು. ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಬೇಕು ಎಂದು ಮುಖ್ಯಮಂತ್ರಿಗಳ ಗಮನ ಸೆಳೆದರು.

ಟೀಕೆಗೆ ಅಳುಕಲ್ಲ-ಅಂಜಲ್ಲ: ಯಾರು ಏನೇ ಟೀಕೆ ಮಾಡಿದರೂ ತಾನು ಅಂಜಲ್ಲ-ಅಳುಕಲ್ಲ. ಸತ್ಯ ಮೇವ ಜಯತೆ ನುಡಿ ಮೇಲೆ ಸತ್ಯ ಹಾಗೂ ಆತ್ಮಸಾಕ್ಷಿ ಮೇಲೆ ಸರ್ಕಾರ ನಡೆಸುತ್ತಿದ್ದೇವೆ. ಜನಪರವಾಗಿ, ಜನರ ಆಶೋತ್ತರಗಳಿಗೆ ಸ್ಪಂದಿಸುತ್ತಿದ್ದೇವೆ ಎಂದು ಹೇಳಿದರು.

ಜನರು ಶ್ರೀಮಂತವಾಗಿರಬೇಕು: ಎಸ್‌ಸಿ ಹಾಗೂ ಎಸ್‌ಟಿ ಮೀಸಲಾತಿ ಹೆಚ್ಚಳ ವೇಳೆ ಕೆಲವರು ವಿರೋಧ ಮಾಡಿದರು. ಹಾಗಾಗಲಿದೆ-ಹೀಗಾಗಲಿದೆ ಅಂದರು. ಕಾನೂನು ತೊಡಕು ಎನ್ನುತ್ತಿದ್ದರು. ಸಂವಿಧಾನದ ಆಶಯದಂತೆ ಜನರಿಗೆ ಕೊಡಬೇಕಾದ್ದನ್ನು ಕೊಡಬೇಕು ಎಂದು ನಾನು ಯಾರ ಮಾತು ಕೇಳದೇ ಮೀಸಲಾತಿ ಹೆಚ್ಚಿಸಿದೆ. ಅಧಿಕಾರ ವಹಿಸಿಕೊಂಡ ನಾಲ್ಕೇ ತಾಸಿಗೆ ರೈತರ ಮಕ್ಕಳಿಗೆ ವಿದ್ಯಾನಿಧಿ ಘೋಷಣೆ ಮಾಡಿದೆ. ರಾಜಶಕ್ತಿ ಇರುವುದು ಜನರ ಹಿತಕ್ಕಾಗಿ ಸರ್ಕಾರಗಳು ಶ್ರೀಮಂತವಾಗಿದ್ದರೆ ಪ್ರಯೋಜನವಿಲ್ಲ, ಜನರು ಶ್ರೀಮಂತವಾಗಿರಬೇಕು ಎಂದು ತಿಳಿಸಿದರು.

ಅಯೋಧ್ಯೆಯಾಗಿ ಪರಿವರ್ತನೆ

ಇದೇ ಕಾರಣಕ್ಕೆ ರಾಮದೇವರ ಬೆಟ್ಟದ ಅಭಿವೃದ್ಧಿ ಹೊಣೆಗಾರಿಕೆಯು ಇವರ ಹೆಗಲಿಗೆ ಬಿದ್ದಿದೆ. ರಾಮ ದೇವರ ಬೆಟ್ಟ ಟು ಅಯೋಧ್ಯೆ ಎಂಬ ಜಪದಡಿ ದೊಡ್ಡ ಪ್ರಚಾರಕ್ಕೆ ಸರ್ಕಾರ ಮುಂದಾಗಿದೆ. ಹಿಂದುತ್ವವನ್ನು ಮುಂದಿಟ್ಟುಕೊಂಡೇ ಚುನಾವಣೆ ಎದುರಿಸುವ ಬಿಜೆಪಿ ಇದೀಗ ರಾಮಮಂತ್ರವನ್ನು ಮೊಳಗಿಸಲು ಮುಂದಾಗಿದೆ.

ಇಂದಿನಿಂದ ಅಯೋಧ್ಯಾ ಯಾತ್ರಾ: ಹಳೇ ಮೈಸೂರು ಭಾಗದಲ್ಲಿ ಪ್ರಸಿದ್ಧವಾಗಿರುವ ರಾಮನಗರದ ರಾಮದೇವರ ಬೆಟ್ಟವನ್ನು ಹಿಂದೂ ಗಳ ಶ್ರದ್ಧಾ ಕೇಂದ್ರವನ್ನಾಗಿ ರೂಪಿಸಲು ಬಿಜೆಪಿ ಮುಂದಾಗಿದ್ದು, ಇದಕ್ಕೆ ಚಾಲನೆ ನೀಡಲು ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ ನಾರಾಯಣ್ ಅವರು ಡಿಸೆಂಬರ್ 14ರ ಬುಧವಾರ ಅಯೋಧ್ಯಾ ಯಾತ್ರೆ ಆರಂಭಿಸಲಿದ್ದಾರೆ. ಅಶ್ವತ್ಥನಾರಾಯಣ್ ಅವರು ನೂರೈವತ್ತು ಮಂದಿಯ ಜತೆಗೂಡಿ ಅಯೋಧ್ಯೆಗೆ ತೆರಳಲಿದ್ದು,ಗುರುವಾರ ಅಯೋಧ್ಯೆಯಲ್ಲಿ ರಾಮನಿಗೆ ವಿಶೇಷ ಪೂಜೆ ಸಲ್ಲಿಸಲಿದ್ದಾರೆ.

ಇವರು ಹೊತ್ತುಕೊಂಡು ಹೋಗಿರುವ ಬೆಳ್ಳಿ ಇಟ್ಟಿಗೆ ಪೂಜೆ ಪುನಸ್ಕಾರ ಮಾಡಿಕೊಂಡು ನಂತರ ಅದೇ ಇಟ್ಟಿಗೆಯನ್ನು ದಕ್ಷಿಣ ಭಾರತದ ಅಯೋಧ್ಯಾ ದೇಗುಲ ನಿರ್ಮಾಣದ ಅಡಿಗಲ್ಲಿಗೆ ಬಳಸಲಿದ್ದಾರೆ. ಪೌರಾಣಿಕ ಹಿನ್ನೆಲೆ: ನಂತರ ದೊಡ್ಡ ಮಟ್ಟದಲ್ಲಿ ರಾಮದೇವರ ಬೆಟ್ಟ ಜೀರ್ಣೋದ್ಧಾರವಾಗಲಿದೆ. ಈ ಬೆಟ್ಟಕ್ಕೆ ಪೌರಾಣಿಕ ಹಿನ್ನೆಲೆ ಇದ್ದು ವನವಾಸದ ಕಾಲದಲ್ಲಿ ಶ್ರೀರಾಮಚಂದ್ರ ಇಲ್ಲಿಗೆ ಭೇಟಿ ನೀಡಿದ್ದ ಎಂಬ ನಂಬಿಕೆಯಿದೆ.

ಈ ನಂಬಿಕೆಯ ಕಾರಣಕ್ಕಾಗಿ ರಾಮದೇವರ ಬೆಟ್ಟದ ಪುರಾತನ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿ ರಾಮನಿಗಾಗಿ ದೊಡ್ಡ ದೇವಸ್ಥಾನವನ್ನು ನಿರ್ಮಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅದಾಗಲೇ ಸೂಚನೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ. ಇದರ ಭಾಗವಾಗಿಯೇ ಡಾ.ಅಶ್ವತ್ಥನಾರಾಯಣ್ ಅವರು ಬುಧವಾರ ಅಯೋಧ್ಯೆಗೆ ತೆರಳಲಿದ್ದು ರೇಷ್ಮೆ ನಾಡು ರಾಮನಗರ ಜಿಲ್ಲೆಯಿಂದ ರಾಮ,ಲಕ್ಷ್ಮಣರಿಗೆ ರೇಷ್ಮೆ ಪಂಚೆ,ಶಲ್ಯ ಮತ್ತು ಸೀತಾಮಾತೆಗೆ ರೇಷ್ಮೆ ಸೀರೆಯನ್ನು ಈ ಸಂದರ್ಭದಲ್ಲಿ ಅರ್ಪಣೆ ಮಾಡಲಿದ್ದಾರೆ. ಈ ಬೆಳವಣಿಗೆ ರಾಜಕೀಯ ವಲಯಗಳಲ್ಲಿ ಕುತೂಹಲ ಕೆರಳಿಸಿದ್ದು ಹಳೆ ಮೈಸೂರು ಭಾಗದಲ್ಲಿ ರಾಮಮಂತ್ರವನ್ನು ದೊಡ್ಡ ಮಟ್ಟದಲ್ಲಿ ಮೊಳಗಿಸುವ ಬಿಜೆಪಿಯ ಪ್ರಯತ್ನಕ್ಕೆ ಎಷ್ಟರ ಮಟ್ಟಿಗೆ ಯಶಸ್ಸು ಸಿಗುತ್ತದೆ ಎಂಬ ಬಗ್ಗೆ ಚರ್ಚೆಗಳು ಆರಂಭವಾಗಿವೆ. ಹಳೇ ಮೈಸೂರು ಭಾಗದಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದ್ದು,ಇಂತಲ್ಲಿ ಬಿಜೆಪಿಯ ಶಕ್ತಿಯನ್ನು ಹೆಚ್ಚಿಸಲು ರಾಮನಗರ ಜಿಲ್ಲೆಯ ಉಸ್ತುವಾರಿ ಸಚಿವರೂ ಆದ ಡಾ.ಅಶ್ವತ್ಥನಾರಾಯಣ್ ಸಜ್ಜಾಗಿದ್ದು ಅಯೋಧ್ಯಾ ಯಾತ್ರೆ ಇದರ ಭಾಗ ಎಂಬುದು ಮೂಲಗಳ ಹೇಳಿಕೆ. ರಾಮನಗರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕನಿಷ್ಟ ಎಂಟು ವಿಧಾನಸಭಾ ಸ್ಥಾನಗಳನ್ನು ಗೆಲ್ಲಿಸಿಕೊಡಲು ಡಾ.ಅಶ್ವತ್ಥನಾರಾಯಣ್ ಅವರು ಈ ಭಾಗದ ಸಚಿವರ ಜತೆಗೂಡಿ ಪ್ರಯತ್ನಿಸುತ್ತಿರುವುದು ರಹಸ್ಯವಾಗಿ ಉಳಿದಿಲ್ಲ.

ಈ ಮೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಕನಿಷ್ಟ ಎಂಟು ಸೀಟುಗಳನ್ನು ಗೆಲ್ಲಬೇಕೆಂದರೆ ಬಿಜೆಪಿಯನ್ನು ಗಟ್ಟಿಯಾಗಿ ತಳವೂರಿಸುವ ಕೆಲಸ ನಡೆಯಬೇಕಿದ್ದು ರಾಮಮಂತ್ರದ ಜಪದಿಂದ ಈ ಕೆಲಸ ಸುಗಮವಾಗುತ್ತದೆ ಎಂಬ ಲೆಕ್ಕಾಚಾರ ಬಿಜೆಪಿಯಲ್ಲಿದೆ.

ಈ ಮೂರೂ ಜಿಲ್ಲೆಗಳಲ್ಲಿ ಗಣನೀಯ ಸಂಖ್ಯೆಯ ಸ್ಥಾನಗಳನ್ನು ಗೆದ್ದರೆ ರಾಜಧಾನಿ ಬೆಂಗಳೂರು ಮತ್ತು ಹಳೆ ಮೈಸೂರು ಭಾಗದ ಇನ್ನಿತರ ಜಿಲ್ಲೆಗಳಲ್ಲಿ ಬಿಜೆಪಿ ಮತ್ತಷ್ಟು ಸಾಧನೆ ಮಾಡಬಹುದು ಎಂಬುದು ಬಿಜೆಪಿಯ ಯೋಚನೆ.

ಯೋಚನೆಯ ಭಾಗವಾಗಿ ಆರ್‌ಎಸ್‌ಎಸ್, ಅಯೋಧ್ಯಾ ಯಾತ್ರೆ ಆರಂಭಿಸಲಿದ್ದು, ಅಶ್ವತ್ಥ್‌ನಾರಾಯಣ ಅವರನ್ನು ಮೊದಲ ತಂಡವಾಗಿ ಅಯೋಧ್ಯೆಗೆ ಕಳುಹಿಸುತ್ತಿದೆ. ಇದರ ಬೆನ್ನಲ್ಲೇ ಮತ್ತಷ್ಟು ಸಚಿವರು ಅಯೋಧ್ಯೆಗೆ ತೆರಳಲಿದ್ದಾರೆ.

ಪ್ರತಿಭಾನ್ವಿತ ಕ್ಯಾಥೋಲಿಕ್ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಗುರಿ, ಉದ್ದೇಶ ಇದ್ದರೆ ಭವಿಷ್ಯದಲ್ಲಿ ಅಭಿವೃದ್ಧಿ ಸಾಧ್ಯ

ವಿದ್ಯಾರ್ಥಿಗಳಿಗೆ ನಿವೃತ್ತ ನ್ಯಾಯಾಧೀಶರಾದ ಜಾನ್ ಮೈಕೆಲ್ ಕುನ್ಹಾ ಕಿವಿಮಾತು

ಮೈಸೂರು, ಡಿ.13(ಆರ್‌ಕೆಬಿ)- ಗುರಿ ಮತ್ತು ಉದ್ದೇಶ ಇದ್ದರೆ ಭವಿಷ್ಯದಲ್ಲಿ ಅಭಿವೃದ್ಧಿ ಸಾಧ್ಯ ನಾವು ತಲುಪಿರುವ ಹಂತವೇ ಶ್ರೇಷ್ಠವೆಂದು ತೃಪ್ತಿಪಟ್ಟುಕೊಳ್ಳದೇ ಮುಂದೆ ಹೋಗಲು ಪ್ರಯತ್ನಿಸಬೇಕು ಎಂದು ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಜಾನ್ ಮೈಕೆಲ್ ಕುನ್ಹಾ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರು ಕ್ಯಾಥೋಲಿಕ್ ಧರ್ಮಕ್ಷೇತ್ರ ಮತ್ತು ಮೈಸೂರು ಡಯೋಸಿಸನ್ ಎಜುಕೇಷನಲ್ ಸೊಸೈಟಿಯ ಸಹಯೋಗದಲ್ಲಿ ಮಂಗಳವಾರ ಮೈಸೂರಿನ ಬನ್ನಿಮಂಟಪದ ಸಂತ ಫಿಲೋಮಿನಾ ಕಾಲೇಜಿನಲ್ಲಿ ಆಯೋಜಿಸಿದ್ದ ಮೈಸೂರು ಧರ್ಮಕ್ಷೇತ್ರ ವ್ಯಾಪ್ತಿಯ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ಡಾಕ್ಟರೇಟ್ ಪದವಿ ಮತ್ತು ಇತರೆ ವೃತ್ತಿಪರ ಕೋರ್ಸ್‌ಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅಭಿನಂದಿಸಿ, ಅವರು ಮಾತನಾಡಿದರು.

ಎಂತಹ ಕಷ್ಟದ ಪರಿಸ್ಥಿತಿಯನ್ನೂ ದಾಟಿ ಮುಂದೆ ಬರುವಷ್ಟು ಸಮರ್ಥರಿರುವ ಗ್ರಾಮೀಣ ಪ್ರದೇಶದ ಮಕ್ಕಳು ನಗರ ಪ್ರದೇಶದ ಮಕ್ಕಳನ್ನು ಕಲಿಕೆಯಲ್ಲಿ ಹಿಂದಿಕ್ಕಿ ಮುಂದೆ ಹೋಗುತ್ತಿರುವುದು ಸಂತಸದ ಸಂಗತಿ.



ಮೈಸೂರು ಧರ್ಮಕ್ಷೇತ್ರ ವ್ಯಾಪ್ತಿಯ ಪ್ರತಿಭಾನ್ವಿತ ಕ್ಯಾಥೋಲಿಕ್ ವಿದ್ಯಾರ್ಥಿಗಳ ಅಭಿನಂದನಾ ಸಮಾರಂಭಕ್ಕೆ ಮೈಸೂರು ಬಿಷಪ್ ಡಾ.ಕೆ.ಎ.ವಿಲಿಯಂ ಚಾಲನೆ ನೀಡಿದರು. ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹಾ, ಧರ್ಮಗುರುಗಳಾದ ಫ್ರಾನ್ಸಿಸ್ ಅಸಿಸ್ಸಿ ಡಿ'ಅಲ್ಮೇಡಾ, ಡಾಮಿನಿಕ್ ವಾಸ್, ರೆ.ಫಾ.ವಿಜಯ್ ಕುಮಾರ್, ರೆ.ಫಾ.ಮದಲೈ ಮುತ್ತು, ಫಾ.ಬರ್ನಾಡ್ ಪ್ರಕಾಶ್ ಬಾರ್ನಿಸ್ ಇನ್ನಿತರರನ್ನು ಕಾಣಬಹುದು.

ಆದರೆ ಎಲ್ಲಾ ಅನುಕೂಲತೆಗಳಿದ್ದೂ ನಗರದ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದ ಅವರು, ಪೋಷಕರು ತಮ್ಮ ಮಕ್ಕಳಿಗೆ ಶಿಸ್ತು, ಸಮಯ ಪ್ರಜ್ಞೆ, ಜವಾಬ್ದಾರಿ ಕಲಿಸುವುದು ಅತೀ ಮುಖ್ಯ ಎಂದರು.

ಇಂದು ಕಲಿಕೆಗೆ ಎಲ್ಲಾ ಸವಲತ್ತುಗಳಿದ್ದರೂ ಮಕ್ಕಳು ಮೊಬೈಲ್ ಗೀಳಿಗೆ ಸಿಲುಕಿ ಸಮಯ ವ್ಯರ್ಥ ಮಾಡುತ್ತಿದ್ದಾರೆ. ಇದು ಯುವಜನತೆ ಎಲ್ಲಿಗೆ ಹೋಗುತ್ತಿದೆ, ಏನು ಮಾಡುತ್ತಿದೆ ಎಂಬುದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳಲ್ಲಿ ವೈಜ್ಞಾನಿಕ, ವೈಚಾರಿಕ, ಮೌಲ್ಯಯುತ ಶಿಕ್ಷಣ ಒದಗಿಸುವುದರಲ್ಲಿ ಸೋತಿದೆ ಎನ್ನಿಸುತ್ತಿದೆ. ಇಂತಹ ವ್ಯವಸ್ಥೆಯಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಶಿಕ್ಷಕರು ಹೆಚ್ಚು ಜವಾಬ್ದಾರಿ ವಹಿಸಿ, ಶಿಕ್ಷಣದ ಮೌಲ್ಯ ತಿಳಿಸಿ, ಮುನ್ನಡೆಸುವ ಅಗತ್ಯವಿದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮೈಸೂರು ಬಿಷಪ್ ಡಾ.ಕೆ.ಎ.ವಿಲಿಯಂ, ಜಗತ್ತಿನಲ್ಲಿಂದು 5ಜಿ ಅದ್ಭುತವಾಗಿ ಕೆಲಸ ಮಾಡುತ್ತಿದೆ. ಆದರೆ, ನಮ್ಮ ಬದುಕಿಗೆ ಬೇಕಾದ ಅತೀ ಮುಖ್ಯವಾದ 5ಜಿ ಗಳ ವಿಚಾರವಾಗಿ ಮೊದಲಿಗೆ ತಿಳಿದುಕೊಳ್ಳಬೇಕಿದೆ. ಉಪಕಾರ ಸ್ಮರಣೆ ಅಥವಾ ಕೃತಜ್ಞತಾಭಾವ, ಉದಾರತೆ, ಸವಾಲುಗಳನ್ನು ಎದುರಿಸುವ ಧೈರ್ಯ, ದೇವರ ಸ್ಮರಣೆ, ದೇವರ ಕೃಪೆಗಳ ಬಗ್ಗೆ ತಿಳಿದುಕೊಳ್ಳಬೇಕಿದೆ ಎಂದರು.

ಇದೇ ಸಂದರ್ಭದಲ್ಲಿ ಮೈಸೂರು ಧರ್ಮಕ್ಷೇತ್ರ ವ್ಯಾಪ್ತಿಯ ಸುಮಾರು 840 ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅವರ ವಿವಿಧ ಹಂತದ ಕಲಿಕೆಯಲ್ಲಿ ಅತ್ಯುತ್ತಮ ಅಂಕ ಪಡೆದವರನ್ನು ಗುರುತಿಸಿ ಗೌರವಿಸಲಾಯಿತು. ಎಂಡಿಇಎಸ್ ಸಂಸ್ಥೆಯು ವಿಭಾಗೀಯ ಮಟ್ಟದಲ್ಲಿ ಆಯೋಜಿಸಿದ್ದ ಕ್ರೀಡಾಕೂಟ ಮತ್ತು ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ನಿವೃತ್ತ ಬಿಷಪ್ ಡಾ.ಥಾಮಸ್ ಎ.ವಾಜಪಿಳ್ಳೆ, ಧರ್ಮಗುರುಗಳಾದ ಫ್ರಾನ್ಸಿಸ್ ಅಸಿಸ್ಸಿ ಡಿ' ಅಲ್ಮೇಡಾ, ಡಾಮಿನಿಕ್ ವಾಸ್, ಮೈಸೂರು ಧರ್ಮಕ್ಷೇತ್ರದ ವಿದ್ಯಾಸಂಸ್ಥೆಗಳ ಕಾರ್ಯದರ್ಶಿ ರೆ.ಫಾ.ವಿಜಯ್ ಕುಮಾರ್, ಕೋಶಾಧಿಕಾರಿ ಫಾ.ಮದಲೈ ಮುತ್ತು, ಸಂತ್ ಫಿಲೋಮಿನಾ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದ ಫಾ.ಬರ್ನಾಡ್ ಪ್ರಕಾಶ್ ಬಾರ್ನಿಸ್ ಇನ್ನಿತರರು ಉಪಸ್ಥಿತರಿದ್ದರು.

ಪ್ರತಿ ಟನ್ ಕಬ್ಬಿಗೆ 50 ರೂ. ಹೆಚ್ಚುವರಿ ಹಣ ಪಾವತಿಗೆ ರಾಜ್ಯ ಸರ್ಕಾರ ಆದೇಶ

ರಾಜ್ಯ ಬಿಜೆಪಿ ಸರ್ಕಾರದಿಂದ ರೈತಪರ ನಿರ್ಧಾರ

ಸರ್ಕಾರಕ್ಕೆ ಬಿಜೆಪಿ ರೈತ ಮೋರ್ಚಾ ಕೃತಜ್ಞತೆ ಸಲ್ಲಿಕೆ



ಮೈಸೂರು,ಡಿ.13(ಪಿಎಂ)- ಪ್ರಸಕ್ತ ಸಾಲಿನಲ್ಲಿ ರೈತರ ಟನ್ ಕಬ್ಬಿಗೆ ಕೇಂದ್ರ ಸರ್ಕಾರ ನಿಗದಿ ಮಾಡಿದ ಎಫ್‌ಆರ್‌ಪಿ ದರದ ಜೊತೆಗೆ ಹೆಚ್ಚುವರಿಯಾಗಿ 50 ರೂ. ಪಾವತಿಗೆ ಎಥನಾಲ್ ಉತ್ಪಾದಿಸುವ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ರಾಜ್ಯ ಸರ್ಕಾರ ಸೂಚನೆ ನೀಡಿದೆ. ಆ ಮೂಲಕ ಸಂಕಷ್ಟದ ಪರಿಸ್ಥಿತಿಯಲ್ಲಿ ವಾಣಿಜ್ಯ ಬೆಳೆಯಾದ ಕಬ್ಬನ್ನು ನೆಚ್ಚಿಕೊಂಡಿರುವ ರೈತರ ನೆರವಿಗೆ ರಾಜ್ಯ ಬಿಜೆಪಿ ಸರ್ಕಾರ ಧಾವಿಸಿದೆ ಎಂದು ಬಿಜೆಪಿ ರೈತ ಮೋರ್ಚಾ ಮೈಸೂರು ಘಟಕದ ಜಿಲ್ಲಾಧ್ಯಕ್ಷ ಜೆ.ಎಸ್.ರಮೇಶ್‌ಕುಮಾರ್ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಕ್ಕರೆ ಉದ್ಯಮದ ಇತಿಹಾಸದಲ್ಲೇ ಮೊದಲ ಬಾರಿಗೆ ಪ್ರಸಕ್ತ ಸಾಲಿನಲ್ಲಿ ಟನ್ ಕಬ್ಬು ಪೂರೈಕೆಗೆ ಸಂಬಂಧಿಸಿದಂತೆ ಎಫ್‌ಆರ್‌ಪಿ ದರದ ಜೊತೆಗೆ ಹೆಚ್ಚುವರಿಯಾಗಿ 50 ರೂ. ಅನ್ನು ರೈತರಿಗೆ ಪಾವತಿಸಲು ಸರ್ಕಾರ ಕ್ರಮ ವಹಿಸಿದೆ. ಇದರಿಂದ ರಾಜ್ಯದ ಕಬ್ಬು ಬೆಳೆಗಾರರಿಗೆ 204.47 ಕೋಟಿ ಹೆಚ್ಚುವರಿ ಹಣ ಸಂದಾಯವಾಗಲಿದೆ. ಇಂತಹ ರೈತಪರ ನಿರ್ಧಾರ ಕೈಗೊಂಡ ರಾಜ್ಯ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಕೇಂದ್ರ ಸರ್ಕಾರ ಪ್ರತಿ ಟನ್ ಕಬ್ಬಿಗೆ 2021-22ನೇ ಸಾಲಿನಲ್ಲಿ 2,900 ರೂ. ಎಫ್‌ಆರ್‌ಪಿ ದರ ನಿಗದಿ ಮಾಡಿತ್ತು. 2022-23ನೇ ಸಾಲಿನಲ್ಲಿ ಕಳೆದ ಸಾಲಿಗಿಂತ ಹೆಚ್ಚುವರಿಯಾಗಿ 150 ರೂ. ನಿಗದಿ ಮಾಡಿದೆ. ಇದರಿಂದ ಕಬ್ಬು ಬೆಳೆಗಾರರಿಗೆ ಟನ್ ಕಬ್ಬಿಗೆ ಹೆಚ್ಚುವರಿಯಾಗಿ 200 ರೂ. ದೊರೆಯಲಿದ್ದು, ಕೇಂದ್ರ ಸರ್ಕಾರಕ್ಕೂ ಧನ್ಯವಾದ ಅರ್ಪಿಸುವುದಾಗಿ ಹೇಳಿದರು.

ರಾಜ್ಯದಲ್ಲಿ ಕೆಲ ಸಹಕಾರಿ ವಲಯದ ಸಕ್ಕರೆ ಕಾರ್ಖಾನೆಗಳು ಹಣಕಾಸಿನ ದುಸ್ಥಿತಿಯಿಂದ ಸ್ಥಗಿತವಾಗಿದ್ದವು. ರಾಜ್ಯ ಸರ್ಕಾರ ಈ ಪೈಕಿ 9 ಸಕ್ಕರೆ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಲು ಗುತ್ತಿಗೆಯಡಿ ಖಾಸಗಿ ಉದ್ಯಮಿಗಳಿಗೆ ಅವುಗಳ ಕಾರ್ಯಾರಂಭಕ್ಕೆ ಕ್ರಮ ವಹಿಸಿದೆ. ಇಂತಹ ಕಾರ್ಖಾನೆಗಳಲ್ಲಿ ಜಿಲ್ಲೆಯ ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ ಒಂದಾಗಿದ್ದು, ರಾಜ್ಯ ಸರ್ಕಾರದ ಮಧ್ಯೆಪ್ರವೇಶದಿಂದ ಇದೂ ಪ್ರಾರಂಭಗೊಂಡು ಈ ಭಾಗದ ಕಬ್ಬು ಬೆಳೆಗಾರರಿಗೆ ಅನುಕೂಲವಾಗಿದೆ ಎಂದರು. ಬಿಜೆಪಿ ರೈತ ಮೋರ್ಚಾದ ಪದಾಧಿಕಾರಿಗಳಾದ ದೇವರಾಜ್, ಮಂಜುನಾಥ್, ಬಿಜೆಪಿ ಮಾಧ್ಯಮ ಪ್ರಮುಖರಾದ ಎನ್.ಮಧು, ಎಂ.ಎಸ್.ಮಂಜುನಾಥ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಸಂಸದ ಶ್ರೀನಿವಾಸ ಪ್ರಸಾದ್ ಅವರಿಂದ ಕಾಂಗ್ರೆಸ್ ನಾಯಕರ ಟೀಕೆ

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಖಂಡನೆ



ಮೈಸೂರು,ಡಿ.13(ಪಿಎಂ)- ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಸಂಸದ ವಿ.ಶ್ರೀನಿವಾಸ ಪ್ರಸಾದ್ ಟೀಕೆಯನ್ನು ಜಿಲ್ಲಾ ಕಾಂಗ್ರೆಸ್ ಸಮಿತಿ ಖಂಡಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಎಸ್.ರಾಜೇಶ್, ಸಿದ್ದರಾಮಯ್ಯ ಅವರನ್ನು ರಾಜಕೀಯ ಅಲೆಮಾರಿ ಎಂದು ಟೀಕಿಸಿರುವುದು ಖಂಡನೀಯ. ಶ್ರೀನಿವಾಸ ಪ್ರಸಾದ್ ಅವರು ಮೊದಲು ಎಐಡಿಎಂಕೆಯಲ್ಲಿದ್ದರು. ನಂತರ ಕಾಂಗ್ರೆಸ್‌ಗೆ ಬಂದು, ಬಳಿಕ ಸಮತಾ ಪಕ್ಷ ಸೇರಿದರು. ಮತ್ತೆ ಕಾಂಗ್ರೆಸ್ ಸೇರಿದ್ದ ಅವರು ಇದೀಗ ಬಿಜೆಪಿಯಲ್ಲಿದ್ದು, ರಾಜಕೀಯ ಅಲೆಮಾರಿ ಎಂಬ ಪದ ಶ್ರೀನಿವಾಸ ಪ್ರಸಾದ್ ಅವರಿಗೇ ಅನ್ವಯಿಸಲಿದೆ ಎಂದು ಟೀಕಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಅಶಕ್ತ ಎಂದಿರುವುದು ಖಂಡನೀಯ. ಪಕ್ಷ ನಿಷ್ಠೆ, ದಕ್ಷತೆ, ಸಂಘಟನಾ ಚತುರತೆ ಹಿನ್ನೆಲೆಯಲ್ಲಿ ಖರ್ಗೆ ಅವರಿಗೆ ಎಐಸಿಸಿ ಅಧ್ಯಕ್ಷ ಸ್ಥಾನ ಒಲಿದುಬಂದಿದೆ. ಖರ್ಗೆಯವರ ಕೈಗೆ ಕಾಂಗ್ರೆಸ್ ಮರದ ಕತ್ತಿ ನೀಡಿದೆ ಎಂದು ಶ್ರೀನಿವಾಸ ಪ್ರಸಾದ್ ವ್ಯಂಗ್ಯವಾಡಿದ್ದು, ಇದು ಶ್ರೀನಿವಾಸ ಪ್ರಸಾದ್ ಅವರ ದ್ವೇಷ ರಾಜಕಾರಣದ ಕೈಗನ್ನಡಿ. ಶ್ರೀನಿವಾಸ ಪ್ರಸಾದ್ ಅಧಿಕಾರಕ್ಕಾಗಿ ಕಾಂಗ್ರೆಸ್ ಪಕ್ಷಕ್ಕೆ ದ್ರೋಹ ಎಸಗಿ ಬಿಜೆಪಿ ಸೇರಿದರು. ಅವರೊಬ್ಬ ಸ್ವಾರ್ಥ ರಾಜಕಾರಣಿ. ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ ಬಗ್ಗೆ ಮಾತನಾಡುವ ನೈತಿಕತೆ ಶ್ರೀನಿವಾಸ ಪ್ರಸಾದ್ ಅವರಿಗೆ ಇಲ್ಲ ಎಂದು ಕಿಡಿಕಾರಿದರು. ಪಕ್ಷದ ಮುಖಂಡರಾದ ಸೈಯದ್ ಇಕ್ಬಾಲ್, ಕುರುಬಾರಹಳ್ಳಿ ಪ್ರಕಾಶ್, ಶೌಕತ್, ರವಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ರಸ್ತೆ ಕಾಮಗಾರಿ ಶೀಘ್ರ ಆರಂಭಿಸಿ: ಮೇಯರ್

ಮೈಸೂರು, ಡಿ.13(ಆರ್‌ಕೆ)-ಮಳೆ ನಿಲ್ಲುತ್ತಿದ್ದಂತೆಯೇ ರಸ್ತೆ ಡಾಂಬರೀಕರಣ ಕಾಮಗಾರಿ ಆರಂಭಿಸಿ ಎಂದು ಮೇಯರ್ ಶಿವಕುಮಾರ್ ಪಾಲಿಕೆ ಗುತ್ತಿಗೆದಾರರಿಗೆ ಸೂಚನೆ ನೀಡಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಕಚೇರಿ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಸೋಮವಾರ ಸಂಜೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರೊಂದಿಗೆ ಸಭೆ ನಡೆಸಿದ ಅವರು, ದಸರಾ ವೇಳೆ ಮಂಜೂರಾದ ಅನುದಾನದಲ್ಲಿ ರಸ್ತೆಗಳ ಗುಂಡಿ ಮುಚ್ಚುವುದು, ಆಸ್ಫಾಲ್ಟಿಂಗ್, ಡಾಂಬರೀಕರಣ ಕಾಮಗಾರಿಗಳಿಗಾಗಿ ಟೆಂಡರ್ ಕರೆದು ಕಾರ್ಯಾದೇಶ ನೀಡಲಾಗಿತ್ತಾದರೂ, ಪೂರ್ಣ ಪ್ರಮಾಣದಲ್ಲಿ ಕೆಲಸ ಕೈಗೆತ್ತಿಕೊಳ್ಳಲು ಸಾಧ್ಯವಾಗಿಲ್ಲ. ನಂತರ ಹಂತ-ಹಂತವಾಗಿ ಮಳೆ ಆರಂಭವಾದ ಕಾರಣ ಕೆಲ ರಸ್ತೆಗಳು ಬಾಕಿ ಉಳಿದಿವೆ ಎಂದರು.

ಈಗ ಮೈಸೂರು ನಗರದಾದ್ಯಂತ ರಸ್ತೆಗಳು ಹಾಳಾಗಿರುವ ಸಂಬಂಧ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗಿದೆ.



ಈಗಲಾದರೂ ಕಾರ್ಯಪ್ರವೃತ್ತರಾಗಿ ಮಳೆ ನಿಲ್ಲುತ್ತಿದ್ದಂತೆಯೇ ರಸ್ತೆ ಕಾಮಗಾರಿಗಳನ್ನು ಆರಂಭಿಸಿ ಪೂರ್ಣಗೊಳಿಸಬೇಕು. ಬಿಲ್ ಪಾವತಿ ವಿಳಂಬವಾಗದಂತೆ ತಾವು ಕ್ರಮ ವಹಿಸುವುದಾಗಿಯೂ ಅವರು ಭರವಸೆ ನೀಡಿದರು.

ಟೆಂಡರ್ ಕರೆದಿದ್ದಾಗ ತಾವು ಪಾವತಿಸಿದ್ದ ಶೇ.5ರಷ್ಟು ಇಎಂಡಿ ಹಣವನ್ನು ಟೆಂಡರ್ ಸಿಗದ ಗುತ್ತಿಗೆದಾರರಿಗೆ ವಾಪಸ್ ನೀಡಬೇಕು. ಈ ಹಿಂದೆ ಕೆಲಸ ಮಾಡಿದ ಬಿಲ್ಲಿನ ಬಾಕಿ ಹಣವನ್ನು ಪಾವತಿಸಬೇಕು ಎಂದು ಗುತ್ತಿಗೆದಾರರು ಈ ಸಂದರ್ಭ ಒತ್ತಾಯಿಸಿದರು.

ಟೆಂಡರ್ ಸಿಗದಿದ್ದವರಿಗೆ ತಡಮಾಡದೆ ಇಎಂಡಿ ಹಣವನ್ನು ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸುವಂತೆ ಹಾಗೂ ಬಾಕಿ ಬಿಲ್ ಅನ್ನು ಸೀನಿಯಾರಿಟಿ ಪ್ರಕಾರ ಪಾವತಿಸುವಂತೆಯೂ ಮೇಯರ್, ಸಭೆಯಲ್ಲಿ ಉಪಸ್ಥಿತರಿದ್ದ ಪಾಲಿಕೆ ಕಮಿಷ್ನರ್ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ತಿಳಿಸಿದರು. ಉಪ ಮೇಯರ್ ಡಾ. ಜಿ.ರೂಪಾ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್ ಹಾಗೂ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಪ್ರಯತ್ನಪಟ್ಟರೆ ಗುರಿ ತಲುಪಲು ಸಾಧ್ಯ: ಡಿಸಿ

ಮೈಸೂರು, ಡಿ.13(ಆರ್‌ಕೆಬಿ)- ಯಾವ ವಯಸ್ಸಿನಲ್ಲಿ ಏನನ್ನು ಮಾಡಬೇಕು ಎಂಬ ಕಲ್ಪನೆಯನ್ನು ನೀವು ಬೆಳೆಸಿಕೊಳ್ಳಬೇಕು. ಸಾಧಿಸುವ ಛಲ ಇರಬೇಕು. ಅದಕ್ಕೆ ಬೇಕಾದ ತಯಾರಿಯನ್ನು ಇಂದಿನಿಂದಲೇ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರು ತಿಳಿಸಿದರು.



ಪೀಪಲ್ಸ್ ಪಾರ್ಕ್‌ನ ಕೇಂದ್ರ ಗ್ರಂಥಾಲಯದಲ್ಲಿ ಹಮ್ಮಿಕೊಂಡಿದ್ದ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ತರಬೇತಿ ನೀಡುವ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ನಿಮ್ಮ ಗುರಿಗಳು ಚಿಕ್ಕದಾಗಿವೆ ಎಂದು ಊಹಿಸಿ ಆ ಗುರಿಗಳನ್ನು ತಲುಪುವ ಪ್ರಯತ್ನ ಮಾಡುತ್ತಿರಬೇಕು. ಆಗ ಮಾತ್ರ ನಮ್ಮ ಗುರಿಗಳನ್ನು ಸುಲಭವಾಗಿ ತಲುಪಲು ಸಾಧ್ಯ ಎಂದು ಪರೀಕ್ಷಾರ್ಥಿಗಳಿಗೆ ಸಲಹೆ ನೀಡಿದರು.

ರ್‍ಯಾಂಕ್ ಹೋಲ್ಡರ್ಸ್ ಎಂದರೆ ಅವರೇನು ಆಕಾಶದಿಂದ ಇಳಿದಿರುವುದಿಲ್ಲ. ಅವರೂ ನಮ್ಮಂತೆಯೇ ಇರುತ್ತಾರೆ. ಆದರೆ, ಓದುವ ಕಡೆಗೆ ಹೆಚ್ಚು ಗಮನಹರಿಸಿರುತ್ತಾರೆ ಅಷ್ಟೇ. ಅಂದರೆ ಕಠಿಣ ಪರಿಶ್ರಮದಿಂದ ಮಾತ್ರ ಗೆಲುವು ಸಾಧ್ಯ. ಇಂದು ನೀವು ಏನನ್ನು ತ್ಯಾಗ ಮಾಡುತ್ತೀರೋ ಅವುಗಳಿಂದ ಮುಂದೆ ನಿಮಗೆ ಫಲ ಸಿಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತ ಡಾ.ರಮೇಶ್ ನರಸಯ್ಯ ಗ್ರಂಥಾಲಯ ಇಲಾಖೆಯ ಉಪ ನಿರ್ದೇಶಕ ಮಂಜುನಾಥ್ ಇನ್ನಿತರು ಉಪಸ್ಥಿತರಿದ್ದರು.

ಕ್ರೆಡಲ್ ಅಧಿಕಾರಿ ದಿನೇಶ್‌ಕುಮಾರ್ ಅನುಮಾನಾಸ್ಪದ ಸಾವಿನ ಪ್ರಕರಣ

ಶೀಘ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ರೋಟರಿ ಸಂಸ್ಥೆ ಸದಸ್ಯರ ಪ್ರತಿಭಟನೆ

ಮೈಸೂರು, ಡಿ.13(ಆರ್‌ಕೆಬಿ)- ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಯೋಜನಾ ನಿರ್ದೇಶಕ (ಕೆಆರ್‌ಇಡಿಎಲ್) ಡಿ.ಕೆ.ದಿನೇಶ್ ಕುಮಾರ್ ಅವರ ಅನುಮಾನಾಸ್ಪದ ಸಾವಿನ ಪ್ರಕರಣ ಸಂಬಂಧ ಶೀಘ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ರೋಟರಿ ಮೈಸೂರು ವೆಸ್ಟ್ ಆಶ್ರಯದಲ್ಲಿ ರೋಟರಿ ಸಂಸ್ಥೆಯ ವಿವಿಧ ಕ್ಲಬ್‌ಗಳ ಸದಸ್ಯರು ಮಂಗಳವಾರ ಮೈಸೂರು ನ್ಯಾಯಾಲಯದ ಎದುರಿನ ಗಾಂಧಿ ಪ್ರತಿಮೆ ಬಳಿ ಶಾಂತಿಯುತ ಪ್ರತಿಭಟನೆ ನಡೆಸಿದರು.

ಡಿ.ಕೆ.ದಿನೇಶ್‌ಕುಮಾರ್ ಅನುಮಾನಾಸ್ಪದ ಸಾವಿನ ಪ್ರಕರಣ ದಾಖಲಾಗಿ 15 ದಿನ ಕಳೆದರೂ ತಪ್ಪಿತಸ್ಥರ ಬಂಧನವಾಗಿಲ್ಲ. ಈ ಬಗ್ಗೆ ಸರಿಯಾದ ಮಾಹಿತಿಯೂ ಸಿಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರೋಟರಿ ವೆಸ್ಟ್ ಮಾಜಿ ಅಧ್ಯಕ್ಷ ಡಾ.ಎಂ.ಡಿ. ರಾಘವೇಂದ್ರ ಪ್ರಸಾದ್, ದಿನೇಶ್‌ಕುಮಾರ್ ಸಾವನ್ನು ಎರಡು ದಿನ ಮುಚ್ಚಿಡಲಾಗಿತ್ತು.



ಕೊಳೆತ ಸ್ಥಿತಿಯಲ್ಲಿ ಆಸ್ಪತ್ರೆಗೆ ಶವ ತರಲಾಗಿತ್ತು. ಅನುಮಾನಾಸ್ಪದ ಸಾವಿನ ಬಗ್ಗೆ ಪೊಲೀಸರು ತನಿಖೆ ತೀವ್ರಗೊಳಿಸಿಲ್ಲ. ತಪ್ಪಿತಸ್ಥರ ವಿರುದ್ಧ ಈವರೆಗೂ ಕ್ರಮ ಕೈಗೊಂಡಿಲ್ಲ. ಯಾವುದೇ ಮಾಹಿತಿಯನ್ನೂ ಹಂಚಿಕೊಂಡಿಲ್ಲ ಎಂದು ದೂರಿದರು.

ತನಿಖೆಯನ್ನು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ಪ್ರಕರಣದಲ್ಲಿ ಭಾಗಿಯಾಗಿದ್ದವರು ಯಾರೇ ಆಗಿರಲಿ ಅವರಿಗೆ ಶಿಕ್ಷೆ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಸಂಸ್ಥೆಯ ಬಿ.ಚಂದ್ರ ಮಾತನಾಡಿ, ಅನೇಕ ಉಪನ್ಯಾಸಗಳ ಮೂಲಕ ವಿದ್ಯಾರ್ಥಿಗಳು ಹಾಗೂ ಅಧಿಕಾರಿಗಳಿಂದ ಮೆಚ್ಚುಗೆ ಗಳಿಸಿರುವ ದಿನೇಶ್‌ಕುಮಾರ್, ಉತ್ತಮ ಸಂಪನ್ಮೂಲ ವ್ಯಕ್ತಿ. ನಮಗೆ ಪೊಲೀಸರ ಮೇಲೆ ನಂಬಿಕೆಯಿದೆ. ಪಾರದರ್ಶಕ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆಯಾಗುವವರೆಗೂ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

21 ರೋಟರಿ ಕ್ಲಬ್‌ಗಳ ಸದಸ್ಯರು ಭಾಗವಹಿಸಿದ್ದ ಪ್ರತಿಭಟನೆಯಲ್ಲಿ ವಕೀಲ ನಾರಾಯಣ, ರೋಟರಿ ಸದಸ್ಯರಾದ ಜೋಸ್ ಮ್ಯಾಥ್ಯು, ಹನುಮಂತ್, ಜಿ.ಕೆ.ಸುಧೀಂದ್ರ, ಡಾ.ಎಚ್.ಎಸ್.ಶಿವಣ್ಣ, ರಂಗರಾವ್ ಕೃಷ್ಣ ಇನ್ನಿತರರು ಉಪಸ್ಥಿತರಿದ್ದರು.

ವಕೀಲರ ಸಂರಕ್ಷಣಾ ಕಾಯ್ದೆ ಶೀಘ್ರ ಜಾರಿಗೆ ಆಗ್ರಹಿಸಿ

ಮೈಸೂರಲ್ಲಿ ವಕೀಲರಿಂದ ಪ್ರತಿಭಟನೆ



ಮೈಸೂರು, ಡಿ.13(ಆರ್‌ಕೆಬಿ)- ಇತ್ತೀಚೆಗೆ ವಕೀಲರ ಮೇಲೆ ನಡೆಯುತ್ತಿರುವ ಹಲ್ಲೆ, ಕೊಲೆ, ದೌರ್ಜನ್ಯ ಹಾಗೂ ಕಿರುಕುಳಗಳ ಸಂಬಂಧ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಕೂಡಲೇ ಜಾರಿಗೆ ತರಬೇಕು ಎಂದು ಆಗ್ರಹಿಸಿ ಮೈಸೂರಿನಲ್ಲಿ ವಕೀಲರು ಮಂಗಳವಾರ ಪ್ರತಿಭಟನೆ ನಡೆಸಿದರು. ಮೈಸೂರು ವಕೀಲರ ಸಂಘದ ಆಶ್ರಯದಲ್ಲಿ ನ್ಯಾಯಾಲಯದ ಕಾರ್ಯಕಲಾಪಗಳಿಂದ ಹೊರಗುಳಿದು, ನ್ಯಾಯಾಲಯದ ಎದುರಿನ ಗಾಂಧಿ ಪುತ್ಥಳಿ ಬಳಿ ಸಮಾವೇಶಗೊಂಡು, ಕೆಲಕಾಲ ರಸ್ತೆ ತಡೆ ನಡೆಸಿದರು.

ವಕೀಲರ ಮೇಲೆ ಪೊಲೀಸರು ಮತ್ತು ಸಾರ್ವಜನಿಕರಿಂದ ನಡೆಯುತ್ತಿರುವ ಹಲ್ಲೆ, ಕೊಲೆ, ದೌರ್ಜನ್ಯ ಸಂಬಂಧ ರಾಜ್ಯ ವಕೀಲರ ಪರಿಷತ್ತು ಸರ್ಕಾರದ ಮುಂದೆ ಮಂಡಿಸಿರುವ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತರುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಬೇಕು. ಕಾನೂನನ್ನು ಕೂಡಲೇ ಜಾರಿಗೊಳಿಸಬೇಕೆಂದು ಮುಖ್ಯಮಂತ್ರಿಗಳನ್ನು ಒತ್ತಾಯಿಸುವ ಮನವಿ ಪತ್ರವನ್ನು ಉಪವಿಭಾಗಾಧಿಕಾರಿ ಕಮಲಾಬಾಯಿ ಅವರಿಗೆ ನೀಡಿದರು.

ಇತ್ತೀಚೆಗೆ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ನಡೆಸುವುದೇ ದುಸ್ತರವಾಗಿದೆ. ವಕೀಲರು ತಮ್ಮ ಕಕ್ಷಿದಾರರು ಮತ್ತು ಎದುರು ಪಾರ್ಟಿಯವರಿಂದ ನಾನಾ ತೊಂದರೆಗೆ ಒಳಗಾಗುತ್ತಿದ್ದಾರೆ. ಸಂಕಷ್ಟಕ್ಕೆ ಒಳಗಾದವರ ಪರವಾಗಿ ವಕೀಲರ ಸಂಘ ಯಾವುದೇ ಪ್ರತಿಭಟನೆ, ಇಲ್ಲವೇ ಅಂತಹ ವ್ಯಕ್ತಿಗಳ ವಿರುದ್ಧ ವಕಾಲತ್ತು ವಹಿಸದಿರಲು ಸಾಧ್ಯವಿಲ್ಲದಂತಾಗಿದೆ. ಆದ್ದರಿಂದ ವಕೀಲರ ಸಂರಕ್ಷಣಾ ಕಾಯ್ದೆಯನ್ನು ಕೂಡಲೇ ಜಾರಿಗೊಳಿಸುವಂತೆ ಅವರು ಮನವಿ ಪತ್ರದಲ್ಲಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಂಘದ ಪದಾಧಿಕಾರಿಗಳು, ವಕೀಲರು ಭಾಗವಹಿಸಿದ್ದರು.

ಕೆ.ಆರ್.ನಗರದಲ್ಲಿ ಅದ್ದೂರಿ ಹನುಮ ಜಯಂತಿ ಶೋಭಾಯಾತ್ರೆ

● ರಾಮ ಜಪ ಮಾಡಿದ ಹನುಮ ಭಕ್ತರು
● ವರ್ತಕರಿಂದ ಭಕ್ತರಿಗೆ ಮಜ್ಜಿಗೆ ವಿತರಣೆ





ಕೆ.ಆರ್.ನಗರ, ಡಿ.13– ಪಟ್ಟಣದ ಆಂಜನೇಯ ಬಡಾವಣೆ ಶ್ರೀಮಾರುತಿ ಯುವಕರ ಸಂಘ ಮತ್ತು ವಿವಿಧ ಹಿಂದೂಪರ ಸಂಘಟನೆಗಳಿಂದ ನಡೆದ ಹನುಮ ಜಯಂತ್ಯೋತ್ಸವದ ಶೋಭಾಯಾತ್ರೆ ಮಂಗಳವಾರ ಅದ್ದೂರಿಯಾಗಿ ನಡೆಯಿತು.

ಕೊರೊನಾ ಕಾರಣಕ್ಕಾಗಿ ಕಳೆದ 2 ವರ್ಷಗಳಿಂದ ಹನುಮ ಜಯಂತಿಯನ್ನು ಸರಳವಾಗಿ ಆಚರಿಸಲಾಗಿತ್ತು. ಆದರೆ ಈ ಬಾರಿ ಸರ್ಕಾರ ಅನುಮತಿ ನೀಡಿದ್ದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.

ಪಟ್ಟಣದ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಬೃಹತ್ತಾಕಾರದ ಹನುಮ ಮೂರ್ತಿಯನ್ನು ಅಲಂಕೃತಗೊಂಡಿದ್ದ ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಮೆರವಣಿಗೆಗೆ ಗಾವಡಗೆರೆ ಗುರುಲಿಂಗ ದೇವರ ಮಠದ ಶ್ರೀನಟರಾಜ ಸ್ವಾಮೀಜಿ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು. ಈ ವೇಳೆ ಕಾಂಗ್ರೆಸ್ ಮುಖಂಡ ಡಿ.ರವಿ ಶಂಕರ್, ಪುರಸಭೆ ಅಧ್ಯಕ್ಷ ಕೋಳಿ ಪ್ರಕಾಶ್, ಶಾಸಕ ಸಾ.ರಾ.ಮಹೇಶ್ ಪುತ್ರ ಸಾ.ರಾ.ಜಯಂತ್ ಮತ್ತು ಮಾರುತಿ ಯುವಕರ ಸಂಘದ ಅಧ್ಯಕ್ಷ ಗೌತಮ್ ಜಾಧವ್ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

ಮುಸ್ಲಿಂ ಬಾಂಧವರಿಂದ ಶುಭಾಶಯ

ಪಟ್ಟಣದ ಜಾಮೀಯ ಮಸೀದಿ ಕಮಿಟಿ ಮತ್ತು ಸಮಸ್ತ ಮುಸ್ಲಿಂ ಬಾಂಧವರು ಗರುಡಗಂಭ ವೃತ್ತದಲ್ಲಿ ಹಾಜರಿದ್ದು, ಹನುಮ ಜಯಂತಿ ಶುಭಾಶಯ ಕೋರಿದರು. ಮೂಳೆ ತಜ್ಞ ಡಾ.ಮೆಹಬೂಬ್ ಖಾನ್ ಮತ್ತು ಮಸೀದಿ ಕಮಿಟಿ ಪದಾಧಿಕಾರಿಗಳು ಹನುಮ ದೇವರ ಉತ್ಸವ ಮೂರ್ತಿಗೆ ಬೃಹತ್ ಗಾತ್ರದ ಹಾರ ಹಾಕಿದ್ದಲ್ಲದೆ ಜೈ ಶ್ರೀರಾಮ್ ಎಂದು ಘೋಷಣೆ ಕೂಗಿ, ಮೆರವಣಿಗೆಯಲ್ಲಿ ಪಾಲ್ಗೊಂಡವರಿಗೆ ಹಣ್ಣು ಹಂಪಲು, ತಂಪು ಪಾನೀಯಗಳನ್ನು ವಿತರಿಸಿದರು.

ದೇವಾಲಯದಿಂದ ಹೊರಟ ಮೆರವಣಿಗೆ ಸಾವಿರಾರು ಹನುಮ ಭಕ್ತರ ಸಮ್ಮುಖದಲ್ಲಿ ಬಜಾರ್ ರಸ್ತೆ, ಗರುಡಗಂಭ ವೃತ್ತದ ಮೂಲಕ ವಿವಿ ರಸ್ತೆ ಹಾಗೂ ಪುರಸಭೆ ವೃತ್ತ ಬಳಸಿ, ಸಿಎಂ ರಸ್ತೆಯಲ್ಲಿ ಸಂಚರಿಸಿ ದೇವಾಲಯದ ಬಳಿ ಅಂತ್ಯಗೊಂಡಿತು. ಈ ವೇಳೆ ಹನುಮ ಭಕ್ತರು, ವಿದ್ಯಾರ್ಥಿ–ವಿದ್ಯಾರ್ಥಿನಿಯರು ರಾಮ ಜಪ ಮಾಡುತ್ತಾ, ಜೈಕಾರ ಹಾಕುತ್ತಾ ತೆರಳಿದರು. ಮೆರವಣಿಗೆಗೆ ವಿವಿಧ ಜಾನಪದ ಕಲಾತಂಡಗಳು ಸಾಥ್ ನೀಡಿದವು. ಮೆರವಣಿಗೆ ಸಾಗಿದ ಬೀದಿಗಳಲ್ಲಿ ಸಾರ್ವಜನಿಕರು ಹಾಗೂ ವರ್ತಕರು ಭಕ್ತರಿಗೆ ಮಜ್ಜಿಗೆ, ಪಾಯಸ, ಹೆಸರುಬೇಳೆ ಹಂಚಿದರು.

ಪಟ್ಟಣದ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಕಳೆದ 9 ದಿನಗಳಿಂದ ಹನುಮ ಜಯಂತಿ ಅಂಗವಾಗಿ ಧಾರ್ಮಿಕ ಕಾರ್ಯ ನಡೆಸುವ ಜೊತೆಗೆ ವಿವಿಧ ಸಾಂಸ್ಕೃತಿಕ ಮತ್ತು ಮನರಂಜನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಹನುಮ ಜಯಂತಿ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಪಟ್ಟಣದಲ್ಲಿ 2 ದಿನ ಮದ್ಯ ಮಾರಾಟ ನಿಷೇಧಿಸಲಾಗಿತ್ತು. ಅಲ್ಲದೇ ಪಟ್ಟಣದ ಪ್ರಮುಖ ವೃತ್ತಗಳಲ್ಲಿ ಪೊಲೀಸ್ ತುಕಡಿ ಸೇರಿದಂತೆ ಬಜಾರ್ ರಸ್ತೆ, ವಿವಿ ರಸ್ತೆ, ಸಿ.ಎಂ.ರಸ್ತೆ, ಆಂಜನೇಯ ಬಡಾವಣೆ ಸೇರಿದಂತೆ ವಿವಿಧೆಡೆ 350ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿತ್ತು. ಈ ಸಂಬಂಧ ಎಸ್ಪಿ ಆರ್.ಚೇತನ್ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿಗಳಾದ ಸುಮಿತ್, ಪೂರ್ಣಚಂದ್ರ ತೇಜಸ್ವಿ, ಇನ್ಸ್‌ಪೆಕ್ಟರ್ ಎಂ.ಆರ್.ಲವ, ಎಸ್‌ಐ ಚಂದ್ರಹಾಸ ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

ಈ ವೇಳೆ ಬಿಜೆಪಿ ಮುಖಂಡ ಬಾಬು ಹನುಮಾನ್, ತಹಸೀಲ್ದಾರ್ ಎಸ್.ಸಂತೋಷ್, ಬಿಜೆಪಿ ನಗರಾಧ್ಯಕ್ಷ ಕೃಷ್ಣಭಟ್, ಪುರಸಭೆ ಸದಸ್ಯರಾದ ಸಂತೋಷ್‌ಗೌಡ, ಉಮೇಶ್, ಕೆ.ಜಿ.ಸುಬ್ರಮಣ್ಯ(ಓಮು), ನಟರಾಜು, ಶಿವಕುಮಾರ್, ಜಾವೀದ್ ಪಾಷ, ಮಾಜಿ ಸದಸ್ಯರಾದ ಕೆ.ವಿನಯ್, ಎಸ್.ಯೋಗಾನಂದ್ ಹಿಂದೂ ಪರ ಸಂಘಟನೆಗಳ ಪದಾಧಿಕಾರಿಗಳಾದ ನಂಜುಂಡ, ಬಿ.ಎಸ್.ಪವನ್, ಮಂಜುನಾಥ್, ವೇಣುಗೋಪಾಲ್, ದರ್ಶನ್, ವಡ್ಡರವಿ, ಯೋಗೀಶ್, ಅಭಿಲಾಷ್ ಸೇರಿದಂತೆ ಸಾವಿರಾರು ಮಂದಿ ಉತ್ಸವದಲ್ಲಿ ಪಾಲ್ಗೊಂಡಿದ್ದರು.

ತಿ.ನರಸೀಪುರ ಪುರಸಭೆಗೆ ನಾಗರತ್ನ ಪ್ರಭಾರ ಅಧ್ಯಕ್ಷೆ



ತಿ.ನರಸೀಪುರ, ಡಿ.13– ಪಟ್ಟಣದ ಪುರಸಭೆ ಪ್ರಭಾರ ಅಧ್ಯಕ್ಷರಾಗಿ ನಾಗರತ್ನ ಮಂಗಳವಾರ ಅಧಿಕಾರ ಸ್ವೀಕರಿಸಿದರು. ಈ ಹಿಂದಿನ ಅಧ್ಯಕ್ಷ ಎಸ್.ಮದನ್‌ರಾಜ್ ಅವರು ನ.20 ರಂದು ತಮ್ಮ ಸ್ಥಾನಕ್ಕೆ ನೀಡಿದ್ದ ರಾಜೀನಾಮೆ ಅಂಗೀಕಾರವಾದ ಹಿನ್ನೆಲೆಯಲ್ಲಿ ಪ್ರಭಾರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವಂತೆ ಸರ್ಕಾರದ ಆದೇಶಿಸಿದ ಹಿನ್ನೆಲೆಯಲ್ಲಿ ಉಪಾಧ್ಯಕ್ಷೆ ನಾಗರತ್ನ ಅಧಿಕಾರ ಸ್ವೀಕರಿಸಿದರು.

ನಂತರ ಮಾತನಾಡಿದ ಅವರು, ಪುರಸಭೆ ವ್ಯಾಪ್ತಿಯಲ್ಲಿ ಮೂಲ ಸೌಕರ್ಯ ಮತ್ತು ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುತ್ತೇನೆ. ಎಲ್ಲಾ ಸದಸ್ಯರ ಸಹಕಾರ ಪಡೆದು ಅಭಿವೃದ್ಧಿಗೆ ದುಡಿಯುತ್ತೇನೆ. ಮಾಜಿ ಸಿಎಂ ಸಿದ್ದರಾಮಯ್ಯ ಮತ್ತು ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ಶಾಸಕ ಡಾ.ಎಸ್.ಯತೀಂದ್ರ, ಮುಖಂಡ ಸುನೀಲ್ ಬೋಸ್ ಮತ್ತು ಪುರಸಭೆ ಸರ್ವ ಸದಸ್ಯರಿಗೆ ಧನ್ಯವಾದ ತಿಳಿಸಿದರು.

ನೂತನ ಪ್ರಭಾರ ಅಧ್ಯಕ್ಷೆ ನಾಗರತ್ನ ಅವರನ್ನು ಹಲವು ಮುಖಂಡರು ಸನ್ಮಾನಿಸಿದರು. ಈ ವೇಳೆ ಮುಖ್ಯಾಧಿಕಾರಿ ಹೆಚ್.ಆರ್. ಬಸವರಾಜ್, ಸ್ಥಾಯಿ ಸಮಿತಿ ಅಧ್ಯಕ್ಷ ಅಹಮ್ಮದ್ ಸಯೀದ್, ಸದಸ್ಯರಾದ ಟಿ.ಎಂ.ನಂಜುಂಡಸ್ವಾಮಿ, ಬಾದಾಮಿ ಮಂಜು, ಸಿ.ಪ್ರಕಾಶ್, ಆರ್.ನಾಗರಾಜು, ಎಲ್.ಮಂಜುನಾಥ್, ಸಿದ್ದು, ಎನ್.ಲೋಕೇಶ್, ಕೆ.ನಂಜುಂಡಸ್ವಾಮಿ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಮಾಜಿ ಸದಸ್ಯ ಎಂ.ರಮೇಶ್, ಗ್ರಾಪಂ ಮಾಜಿ ಸದಸ್ಯ ಹೇಮಂತ್ ಕುಮಾರ್, ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಪ್ರಧಾನ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು, ಉಪಾಧ್ಯಕ್ಷ ಎಂ.ವೆಂಕಟೇಶ್(ವೇಂಕಿ), ಮುಖಂಡರಾದ ರಜತ್‌ಗೌಡ(ಸ್ವಾಮಿ), ಮಲ್ಲೇಶ್, ಸಂತೃಪ್ತಿ ಕುಮಾರ, ಸೋಮುದಾದ, ಗೋವಿಂದರಾಜು ಸೇರಿದಂತೆ ಮತ್ತಿತರರಿದ್ದರು.



ಹನಗೋಡು ಹೋಬಳಿ ಗುರುಪುರ ಟಿಬೆಟ್ ಕ್ಯಾಂಪ್‌ನಲ್ಲಿ ಸೊಸೈಟಿ ನೂತನ ಕಟ್ಟಡ ಕಾಮಗಾರಿಗೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಸಿಇಓ ದವಾ, ಉಪಾಧ್ಯಕ್ಷ ದವಾಡುಲ್ಮಾನ್, ನಿರ್ದೇಶಕರಾದ ಪೆಂಪ ಲೋಡೋ ಲುಸಂಗೆಲೆ, ಮೇಲ್ವಿಚಾರಕರಾದ ಶ್ರೀನಿವಾಸ್, ಗುರು, ಕುಮಾರ್, ಮಂಜೇಶ್‌ಗೌಡ, ಮುಖಂಡರಾದ ಅಣ್ಣೇಗೌಡ, ಗ್ರಾಪಂ ಅಧ್ಯಕ್ಷ ಸುಭಾಷ್, ಹನುಮ ಇತರರಿದ್ದರು.

ಇಂದು ದಕ್ಷಯಜ್ಞ ಪೌರಾಣಿಕ ನಾಟಕ

ತಿ.ನರಸೀಪುರ, ಡಿ.13– ಬೆನಕನಹಳ್ಳಿ ಹಿರಿಯ ಕಲಾವಿದ ಎಂ.ಶಿವಸ್ವಾಮಿ ಸ್ಮರಣಾರ್ಥ, ಬೆನಕನಹಳ್ಳಿಯ ನುರಿತ ಕಲಾವಿದರಿಂದ ಶ್ರೀ ಕುಂದೂರಮ್ಮ ಡ್ರಾಮಾ ಸೀನರಿಯಲ್ಲಿ ಡಿ.14 ರಂದು ರಾತ್ರಿ 9 ಗಂಟೆಗೆ ದಕ್ಷಯಜ್ಞ ಎಂಬ ಪೌರಾಣಿಕ ನಾಟಕ ಏರ್ಪಡಿಸಲಾಗಿದೆ.

ಡಿ.17, ಮೈಸೂರಿನಲ್ಲಿ ರೈತ ಸಂಘದಿಂದ ಬೃಹತ್ ಪ್ರತಿಭಟನೆ



ನಂಜನಗೂಡು, ಡಿ.13– ಜಿಲ್ಲಾ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಮೈಸೂರಿನಲ್ಲಿ ಡಿ.17ರಂದು ಗನ್ ಹೌಸ್‌ನಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ 18 ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಲಿದೆ ಎಂದು ತಾಲೂಕು ರೈತ ಸಂಘದ ಅಧ್ಯಕ್ಷ ಸತೀಶ್‌ರಾವ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರು ಬೆಳೆದ 1 ಟನ್ ಕಬ್ಬಿಗೆ 4500 ರೂ. ಬೆಂಬಲ ಬೆಲೆ ನೀಡಬೇಕು. ಜಿಲ್ಲೆಯಾದ್ಯಂತ ಸರ್ಕಾರ ಭತ್ತ ಖರೀದಿ ಕೇಂದ್ರ ತೆರೆಯಬೇಕು. ಭತ್ತಕ್ಕೆ ಕನಿಷ್ಠ 500 ಬೆಂಬಲ ಬೆಲೆ ನೀಡಬೇಕು. ಕಾಡಂಚಿನ ಗ್ರಾಮಗಳಲ್ಲಿ ರೈತರ ಮೇಲೆ ದಾಳಿ ನಡೆಸುತ್ತಿರುವ ಕಾಡುಪ್ರಾಣಿಗಳನ್ನು ಹಿಡಿಯಬೇಕು. ಕಾಡುಪ್ರಾಣಿಗಳಿಂದ ಹಸು, ಕುರಿ, ಎಮ್ಮೆ ಮುಂತಾದ ಪ್ರಾಣಿಗಳ ಜೀವಹಾನಿಯಾಗುವ ಪ್ರಕರಣಗಳಲ್ಲಿ 1 ಲಕ್ಷ ಪರಿಹಾರ ನೀಡಬೇಕು. ಕೈಗಾರಿಕೆ ಸ್ಥಾಪಿಸಲು ಭೂಮಿ ನೀಡಿದ ರೈತರಿಗೆ ಕಾರ್ಖಾನೆಯಲ್ಲಿ ಉದ್ಯೋಗ ನೀಡಬೇಕು. ಸಾಗುವಳಿ ಜಮೀನುಗಳಿಗೆ ಮಂಜೂರಾತಿ ಪತ್ರ ವಿತರಿಸಬೇಕು ಎಂಬುದು ಸೇರಿದಂತೆ 18 ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನಾ ಮೆರವಣಿಗೆ ಹಾಗೂ ಜಿಲ್ಲಾಧಿಕಾರಿ ಕಚೇರಿ ಎದುರು ರೈತರ ಹಕ್ಕೊತ್ತಾಯ ಮಂಡನೆ ಕಾರ್ಯಕ್ರಮ ನಡೆಸಲಾಗುವುದು. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ರಘು, ಶಿವಣ್ಣ ನಾಗರಾಜು, ಮಂಜುನಾಥ್, ಮಹದೇವ ನಾಯ್ಕ, ಮಹದೇವಸ್ವಾಮಿ ಉಪಸ್ಥಿತರಿದ್ದರು.

ಬನ್ನಿಕುಪ್ಪೆಯಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ



ಹುಣಸೂರು, ಡಿ.13– ತಾಲೂಕಿನ ಬನ್ನಿಕುಪ್ಪೆ ಗ್ರಾಮದ ಮಾರಿಗುಡಿ ಆವರಣದಲ್ಲಿ ಗಣೇಶಕುಮಾರಸ್ವಾಮಿ ಸೇವಾ ಬಳಗ, ಕಾವೇರಿ ಆಸ್ಪತ್ರೆ, ಶಂಕರ ಕಣ್ಣಿನ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ ಸಹಯೋಗದಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ ನಡೆಯಿತು.

ಉಕ್ಕಿನಕಂತೆ ಮಾದಹಳ್ಳಿ ಮಠದ ಶ್ರೀಸಾಂಬಸದಾಶಿವಸ್ವಾಮಿ, ಕನಕ ಮಠದ ಶ್ರೀಶಿವಾನಂದಪುರಿಸ್ವಾಮಿ ಹಾಗೂ ಗಾವಡಗೆರೆ ಮಠದ ಶ್ರೀ ನಟರಾಜ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿದರು.

ನಟರಾಜಸ್ವಾಮೀಜಿ ಮಾತನಾಡಿ, ಹಿಂದೆ ದೀಪದ ಬೆಳಕಿನಲ್ಲಿ ನಾವು ಜೀವನ ಸಾಗಿಸುತ್ತಿದ್ದೇವು. ತಾಂತ್ರಿಕತೆ ಬದಲಾದಂತೆ ವಿದ್ಯುತ್ ದೀಪ ಪ್ರತಿ ಮನೆಯನ್ನು ಆವರಿಸಿದೆ. ಕೆಲವರು ಕಣ್ಣಿದ್ದು, ಸಮಾಜಮುಖಿ ಕೆಲಸ ಮಾಡದೆ ಕುರುಡರಾಗಿದ್ದಾರೆ. ಬೇರೆಯವರಿಗೆ ಸಹಕಾರಿಯಾಗಿ ಸಮಾಜದಲ್ಲಿ ಕೈ ಜೋಡಿಸಿ ನಡೆಸಿದರೆ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ ಎಂದರು.

ಕಾವೇರಿ ಆಸ್ಪತ್ರೆ ಡಾ.ಲೋಹಿತ್ ಮಾತನಾಡಿ, ಪ್ರತಿಯೊಬ್ಬರೂ ಸಾಧ್ಯವಾದಷ್ಟು ಸಮಾಜಮುಖಿ ಕೆಲಸ ಮಾಡಲು ಪ್ರಯತ್ನಿಸಬೇಕು ಎಂದರು.

ಗಣೇಶ್ ಕುಮಾರಸ್ವಾಮಿ ಮಾತನಾಡಿ, ನಾವು ಆರೋಗ್ಯ, ಕಣ್ಣಿನ ತಪಾಸಣಾ ಶಿಬಿರಗಳನ್ನು ನಡೆಸಿಕೊಂಡು ಬಂದಿದ್ದೇವೆ. ಕೆಲವು ಸಂದರ್ಭ ಅನೇಕ ಸಮಸ್ಯೆಗಳು ಆದರೂ ಸಹ ಸಮಾಜಸೇವೆ ಮಾಡಿಕೊಂಡು ಬಂದಿದ್ದೇವೆ ಎಂದರು.


ಕಾರ್ಯಕ್ರಮದಲ್ಲಿ ಕುರುಬ ಸಮಾಜದ ಅಧ್ಯಕ್ಷ ಕುನ್ನೇಗೌಡ, ಗ್ರಾಪಂ ಸದಸ್ಯರಾದ ನಿಂಗೇಗೌಡ, ಬಸವರಾಜು, ಲೋಕೇಶ್, ದಿನೇಶ್, ರೇವಣ್ಣಚಾರಿ, ಮುಖಂಡರಾದ ಲೋಕೇಶ್ ನಾಯಕ್, ಕೂಸಪ್ಪ, ಚಂದ್ರು, ಭೂ ಮಂಡಳಿ ಸದಸ್ಯ ಚೇತನ್, ರವಿ, ಟಿಎಪಿಸಿಎಂಎಸ್ ಸದಸ್ಯ ಗೋವಿಂದೇಗೌಡ, ನಿವೃತ್ತ ಮುಖ್ಯಶಿಕ್ಷಕ ವೆಂಕಟರಮಣ, ಹರಿಣಿ ಗಣೇಶ್ ಕುಮಾರಸ್ವಾಮಿ, ಶ್ರೀಕಂಠ ಮೂರ್ತಿ, ಮಂಜು, ಸೇವಾ ಬಳಗದವರು ಇದ್ದರು. ಶಿಬಿರದಲ್ಲಿ 300ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಪಟ್ಟರು. ಈ ಪೈಕಿ 112 ಮಂದಿಯನ್ನು ಶಸ್ತ್ರಚಿಕಿತ್ಸೆಗೆ ಆಯ್ಕೆ ಮಾಡಿ ಅವರನ್ನು ಬೆಂಗಳೂರಿನ ಶಂಕರ ಆಸ್ಪತ್ರೆಗೆ ಕಳುಹಿಸಲಾಯಿತು.



ಪಿರಿಯಾಪಟ್ಟಣ ತಾಲೂಕಿನ ಕೊಪ್ಪ ಕಾವೇರಿ ಬಡಾವಣೆ ಗ್ರಾಮ ಪರಿಮಿತಿಯಲ್ಲಿ 40 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಗ್ರಾಪಂ ಅಧ್ಯಕ್ಷೆ ರೇಣುಕಾಸ್ವಾಮಿ, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಎಇಇ ಮಲ್ಲಿಕಾರ್ಜುನ್ ಸೇರಿದಂತೆ ಇತರರಿದ್ದರು.

ಎಂ.ಕೆಬ್ಬೇಹುಂಡಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆ

ಜನತೆ ಚುನಾವಣೆಗಾಗಿ ತುದಿಗಾಲಲ್ಲಿ ನಿಂತಿದ್ದಾರೆ: ಹೆಚ್‌ಸಿಎಂ



ತಿ.ನರಸೀಪುರ, ಡಿ.13– ಶಾಸಕ ಎಂ.ಅಶ್ವಿನ್ ಕುಮಾರ್ ಏನ್ ಹೇಳ್ತಾರೆ ಅಂದ್ರೆ ಕ್ಷೇತ್ರದ ಜನ ನನ್ನ ಗೆಲ್ಲಿಸಬೇಕು ಅಂತ ಓಟ್ ಕೊಟ್ಟಿಲ್ಲ. ಮಹದೇವಪ್ಪ ಸೋತೋಗಲಿ ಅಂತ ಕೊಟ್ಟರು. ಹಾಗಾಗಿ ನಾನ್ ಗೆದ್ದಿದ್ದೀನಿ. ಅದಕ್ಕೆ ನಾನೇನ್ ಮಾಡಲಿ ಮಹದೇವಪ್ಪ ಸ್ಯಾಂಕ್ಷನ್ ಮಾಡಿರೋ ಅನುದಾನಕ್ಕೆ ಭೂಮಿ ಪೂಜೆ ಮಾಡಿ ಕೈಗೆ ಬಂದಷ್ಟು ಕಮಿಷನ್ ಪಡೆಯುತ್ತಿದ್ದೇನೆ. ನನಗಿನ್ನೇನಾಗಬೇಕು ಎನ್ನುತ್ತಾರೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಶಾಸಕರ ಕಾರ್ಯವೈಖರಿ ಟೀಕಿಸಿದರು.

ತಾಲೂಕಿನ ಎಂ.ಕೆಬ್ಬೇಹುಂಡಿಯಲ್ಲಿ ಮಂಗಳವಾರ ನಡೆದ ಗ್ರಾಪಂ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ದುರಾಡಳಿತ, ಸ್ಥಳೀಯ ಶಾಸಕರ ದೌರ್ಬಲ್ಯದಿಂದ ಆಡಳಿತ ವ್ಯವಸ್ಥೆ ಹದಗೆಟ್ಟಿದ್ದು, ಜನರು ಚುನಾವಣೆ ಎಷ್ಟೊತ್ತಿಗೆ ಬರುತ್ತದೆ ಎಂದು ತುದಿಗಾಲಲ್ಲಿ ನಿಂತಿದ್ದಾರೆ. ಯಾವುದೋ ಕೆಟ್ಟ ಘಳಿಗೆಯಲ್ಲಿ ನನ್ನನ್ನು ಸೋಲಿಸಿರುವುದಕ್ಕೆ ವಿಷಾದ ವ್ಯಕ್ತವಾಗುತ್ತಿರುವುದು ಅರಿವಾಗುತ್ತಿದೆ ಎಂದರು.

ನಾನು ಹಾಗೂ ಸಿದ್ದರಾಮಯ್ಯ ರಾಜಕೀಯಕ್ಕೆ ಬಂದಿರುವುದು ಜನರಿಗೋಸ್ಕರ. ಅಭಿವೃದ್ಧಿ ಮತ್ತು ಜನರ ನಡುವೆ ಕೆಲವು ಕೆಟ್ಟ ಹುಳು ಸೇರಿಕೊಂಡು ನಮ್ಮನ್ನು ಮತ್ತು ನಾವು ಮಾಡಿದ ಅಭಿವೃದ್ಧಿ ಕೆಲಸವನ್ನು ಜನರಿಗೆ ಸಿಗದಂತೆ ಮಾಡಿಬಿಟ್ಟರು. ಕಾಂಗ್ರೆಸ್ ಅವಧಿಯಲ್ಲಿ ಜಾರಿಯಾದ ಅನ್ನಭಾಗ್ಯ ಯೋಜನೆಯನ್ನು ಕೋವಿಡ್ ಸಂಕಷ್ಟದ ಸಮಯದಲ್ಲಿ ಜನರು ಸ್ಮರಿಸಿದರು. ಕ್ಷೇತ್ರದಾದ್ಯಂತ ನಾವು ಮಾಡಿದ ಶಾಶ್ವತ ಅಭಿವೃದ್ಧಿ ಯೋಜನೆಗಳು ಎಲ್ಲಾ ಜನರಿಗೂ ಉಪಯುಕ್ತವಾಗಿವೆ ಎಂದರು.

ಯುವ ಮುಖಂಡ ಸುನೀಲ್ ಬೋಸ್ ಮಾತನಾಡಿ, ಯಾವುದೇ ಚುನಾವಣೆ ಗೆಲ್ಲಬೇಕಾದರೆ ಪಕ್ಷದ ಕಾರ್ಯಕರ್ತರು ಸೇನಾನಿಗಳಂತೆ ಕೆಲಸ ಮಾಡಬೇಕಿದೆ. ಹಾಗಾಗಿ ಮುಂಬರುವ ಚುನಾವಣೆಯ ಎಲ್ಲಾ ಜವಾಬ್ದಾರಿಯನ್ನು ನಿಮಗೆ ವಹಿಸಲಾಗುವುದು. ಗ್ರಾಪಂ ಮಟ್ಟದ ಸಭೆ ಬಳಿಕ ಬೂತ್ ಮಟ್ಟದಲ್ಲಿ ಕಾರ್ಯಕರ್ತರು ಮತ್ತು ಜನರನ್ನು ನೇರವಾಗಿ ಭೇಟಿ ಮಾಡಿ 2ನೇ ಹಂತದಲ್ಲಿ ಕಾರ್ಯತಂತ್ರ ರೂಪಿಸಲಾಗುವುದು ಎಂದು ಮಾಹಿತಿ ನೀಡಿದರು.

ಗ್ರಾಪಂ ಅಧ್ಯಕ್ಷ ಕೆ.ಎಂ.ರಮೇಶ್, ಮಾಜಿ ಅಧ್ಯಕ್ಷ ಶಿವರಾಮು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಚನ್ನಕೇಶವ, ಎಂ.ಡಿ.ಬಸವರಾಜು, ಮುಖಂಡರಾದ ಮಹದೇವ, ಶಾಂತರಾಜು, ಸಿದ್ದರಾಜು, ನಾಗೇಶ್, ರೇವಣ್ಣ, ಮಹೇಶ್, ಬಸವರಾಜು ಇನ್ನಿತರರಿದ್ದರು.

ಅಡುಗೆ ಅನಿಲದ ಬೆಲೆ 47 ಪೈಸೆ ಹೆಚ್ಚಾದಾಗ ವಾಜಪೇಯಿ, 400 ರೂ. ದಾಟಿದಾಗ ನರೇಂದ್ರ ಮೋದಿ, ಕಾಂಗ್ರೆಸ್ ಕೇಂದ್ರ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬೇಕು. ಮತಗಟ್ಟೆಯಲ್ಲಿ ಸಿಲಿಂಡರ್ ನೆನಪಿಸಿಕೊಳ್ಳಿ ಎಂದು ಹೇಳುತ್ತಿದ್ದರು. ಈಗ ಸಿಲಿಂಡರ್ ಬೆಲೆ 1150 ರೂ.ಗಳಾಗಿದೆ. ಓಟ್ ಹಾಕುವಾಗ ಗ್ಯಾಸ್ ರೇಟ್ ಮಾಡಿರುವ ನಿಮಗೆ ಪಾಠ ಕಲಿಸಲೇಬೇಕಲ್ಲವೇ ಎಂದ ಅವರು, ಕಾಂಗ್ರೆಸ್ ಪಕ್ಷ ಬೆಂಬಲಿಸಬೇಕು. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಲೇಬೇಕು.
- ಡಾ. ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವ

ಮೈಸೂರು ಚಳಿಗಾಲದ ರೇಸುಗಳು

5ನೇ ದಿನ, ಬುಧವಾರ 14-12-2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ನೀಲಗಿರಿ ಪ್ಲೇಟ್– 1100 ಮೀ. 2 ವರ್ಷದ (ಟರ್ಮ್ಸ್). ಮ.1.30ಕ್ಕೆ
1. ಜಾನಿರೋ 2. ಕ್ವೀನ್ ಸ್ಟಾರ್ 3. ಕ್ಯೂಟ್ ಲಿಟಲ್ ಹಂಟ್

II. ಪ್ಲಾಂಟರ್ಸ್ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಮಿಸ್ ಚೈನಾ 2. ಡಿ ಅಡ್ಮಿರಲ್ 3. ಕೂರ್ಗ್ ಜನರಲ್

III. ಚಾಮುಂಡಿ ಘಾಟ್ ಪ್ಲೇಟ್– 1200 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1 NRI ಬ್ಲೂ 2. ಕಂಟ್ರೀಸ್ ಲೈಟ್ 3. ಸ್ಪಿರಿಚಿಯಲ್ ಫೋರ್ಸ್

IV. **Brig. C.D.** ಮೋಹನ್ ಮೆಮೋರಿಯಲ್ ಪ್ಲೇಟ್ ಡಿ2– 1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ವೈಟ್‌ಲೈಸ್ 2. ಸಮಯ ಬಲ್‌ವಾನ್ 3. ಏಂಜಲ್ ಡ್ರೀಮ್ಸ್

V. ವಿದ್ಯಾರ್ಥಿ ಮೋಟರ್ಸ್ ಕಪ್–1200 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಎವರ್‌ಲಿ 2. ರಿಥಮಿಕ್ 3. ಸರ್ ಕಾಲ್‌ಕೂಲಸ್

VI. ಡಾ. ಐಶ್ವರಿ ಜಿ.ಕೆ.ಬಾಲಕೃಷ್ಣ ಮೆಮೋರಿಯಲ್ ಟ್ರೋಫಿ– 1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಅಬೆರ್‌ಲೊರ್ 2. ಗ್ಯಾಲರಿ ಕ್ವೀನ್ 3. ಸಗೇರ

VII. **Bri. C.D.** ಮೋಹನ್ ಮೆಮೋರಿಯಲ್ ಪ್ಲೇಟ್– 1400 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಹೀರೋ ಡೊಟಸ್ 2. ಡಿ ರೋಮನ್ ರೀಜನ್ಸ್ 3. ಮೆಲಾನಿ

VIII. ಕೊಡಚಾದ್ರಿ ಪ್ಲೇಟ್– 1400 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಗಿನ್ ಟೋಕಿ 2. ಡಿ ಥರ್ಟಿನ್ ಟ್ವೆಲ್ 3. ವಿವಾ ಲಾ ವಿಡಾ

ದಿನದ ಅತ್ಯುತ್ತಮ....................	: ಮಿಸ್ ಚೈನಾ
ಡಬ್ಬಲ್....................	: ಎವರ್‌ಲಿ, ಅಬೆರ್‌ಲೊರ್
ಜಾಕ್‌ಪಾಟ್....................	: 4, 5, 6, 7 ಮತ್ತು 8
I ಟ್ರಿಬಲ್....................	: 1, 2 ಮತ್ತು 3
II ಟ್ರಿಬಲ್....................	: 3, 4 ಮತ್ತು 5
III ಟ್ರಿಬಲ್....................	: 6, 7 ಮತ್ತು 8
ಎಕ್ಸ್‌ಆಕ್ಸ್....................	: 7 ಮತ್ತು 8

ಟಿಪ್‌ಸ್ಟರ್ ಪಿಜೆಸಿ

ಶ್ರೀನಿವಾಸ್ ನಿಧನ



ಹೆಚ್.ಡಿ.ಕೋಟೆ, ಡಿ.13– ಯರಹಳ್ಳಿ ಕಾವಲ್ 18ನೇ ವಾರ್ಡ್ ನಿವಾಸಿ ಕುಸಯ್ಯ ಅವರ ಪುತ್ರ ಆಟೋ ಚಾಲಕ ಶ್ರೀನಿವಾಸ್(29) ಸೋಮವಾರ ನಿಧನರಾದರು. ಮೃತರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಹ್ಯಾಂಡ್‌ಪೋಸ್ಟ್ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಡಾ.ಸಿ.ಎನ್.ಮಂಜುನಾಥ್ ಅವರಿಗೆ 'ಸಿದ್ಧಗಂಗಾಶ್ರೀ' ಪ್ರಶಸ್ತಿ



ತುಮಕೂರು, ಡಿ.13–ಸಿದ್ಧಗಂಗಾ ಮಠದ ಹಳೆಯ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘ ಕೊಡಮಾಡುವ 2022ನೇ ಸಾಲಿನ 'ಸಿದ್ಧಗಂಗಾಶ್ರೀ' ಪ್ರಶಸ್ತಿಗೆ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಆಯ್ಕೆ ಆಗಿದ್ದಾರೆ.

ಪ್ರಶಸ್ತಿಯು ರೂ. 1 ಲಕ್ಷ ನಗದು, ಅಭಿನಂದನಾ ಪತ್ರ ಹಾಗೂ ಸ್ಮರಣಿಕೆ ಯನ್ನು ಒಳಗೊಂಡಿರುತ್ತದೆ. ಸಿದ್ಧಗಂಗಾ ಮಠದಲ್ಲಿ ಡಿ. 18ರಂದು ನಡೆಯುವ ಸಂಘದ 66ನೇ ಸರ್ವಸದಸ್ಯರ ವಾರ್ಷಿಕ ಮಹಾಧಿವೇಶನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

2021ನೇ ಸಾಲಿನ 'ಸಿದ್ಧಗಂಗಾಶ್ರೀ' ಪ್ರಶಸ್ತಿಗೆ ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ ಭಾಜನರಾಗಿದ್ದಾರೆ. ಶಿವಕುಮಾರ ಸ್ವಾಮೀಜಿ ಹೆಸರಿನಲ್ಲಿ ನೀಡುವ 'ಸಿದ್ಧಗಂಗಾ ಶಿವಕುಮಾರಶ್ರೀ' ಪ್ರಶಸ್ತಿಗೆ ನಾಲ್ವರನ್ನು ಆಯ್ಕೆ ಮಾಡಲಾಗಿದೆ. ಸಾಹಿತ್ಯ, ಸಾಮಾಜಿಕ, ಶೈಕ್ಷಣಿಕ, ಕೃಷಿ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದವರನ್ನು ಆಯ್ಕೆಗೆ ಪರಿಗಣಿಸಲಾಗಿದೆ. ಕಲಬುರಗಿಯ ಹೈದರಾ ಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಭೀಮಾ ಶಂಕರ ಚಂದ್ರಶೇಖರ ಬಿಲಗುಂದಿ, ಮೈಸೂರಿನ ಸಾಹಿತಿ ಪ್ರೊ.ಎಸ್. ಮಲೆಯೂರು ಗುರುಸ್ವಾಮಿ, ಬೆಂಗಳೂರಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಡಾ.ವೈ.ಸಿ.ಕಮಲ, ರಾಯಚೂರಿನ ಕೃಷಿ ತಜ್ಞರಾದ ಕವಿತಾ ಮಿಶ್ರಾ ಆಯ್ಕೆ ಆಗಿದ್ದಾರೆ. ಪ್ರಶಸ್ತಿಯು ತಲಾ 15 ಸಾವಿರ ರೂ. ನಗದು, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ಒಳಗೊಂಡಿದೆ.

'ಕಾಯಕಯೋಗಿ' ಪ್ರಶಸ್ತಿಗೆ ಪತ್ರಕರ್ತ ಧಾರವಾಡದ ರಂಜಾನ್ ದರ್ಗಾ ಅವರನ್ನು ಆಯ್ಕೆ ಮಾಡಲಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರಿಗೆ 'ಸಂಘಸಿರಿ' ಪ್ರಶಸ್ತಿ ನೀಡುತ್ತಿದ್ದು, ತುಮಕೂರಿನ ಎಚ್.ಜಿ.ಈಶ್ವರಯ್ಯ, ಬೆಂಗಳೂರಿನ ತುಳಸೀರಾಮಯ್ಯ, ಲಕ್ಷ್ಮಯ್ಯ, ಆರ್.ಎಸ್.ಹುಚ್ಚಾಚಾರಿ, ಬಳ್ಳಾರಿ ಚನ್ನನಗೌಡ, ಬೀದರ್‌ನ ದೇವೇಂದ್ರ ಕಾರಂಜಿ, ರಾಯಚೂರಿನ ಮಹೇಶ್ ಶಾಸ್ತ್ರಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಾಜ್ಯದ ವಿವಿಧೆಡೆ ಇನ್ನೂ 5 ದಿನ ಮಳೆ

ಬೆಂಗಳೂರು, ಡಿ.13– ತಮಿಳುನಾಡಿನಲ್ಲಿ ಮ್ಯಾಂಡಸ್ ಚಂಡಮಾರುತ ಕರ್ನಾಟಕದ ಮೇಲೂ ಪರಿಣಾಮ ಬೀರಿದೆ. ಕರ್ನಾಟಕದ ಹಲವೆಡೆ ಮಳೆಯ ಅಬ್ಬರ ಅಷ್ಟಾಗಿ ಇರದಿದ್ದರೂ ತುಂತುರು ಮಳೆಯಾಗುತ್ತಿದೆ. ಕಳೆದ ಮೂರ್ನಾಲ್ಕು ದಿನಗಳಿಂದ ಮೋಡ ಕವಿದ ವಾತಾವರಣವಿದ್ದು, ಶೀತಗಾಳಿ ಬೀಸುತ್ತಿದೆ. ಈ ಹಿನ್ನೆಲೆಯಲ್ಲಿ ಚಳಿಗೆ ಜನ ತತ್ತರಿಸಿದ್ದಾರೆ. ಇದರ ಮಧ್ಯೆ ಇನ್ನೂ 5 ದಿನ ಮಳೆ ಇರಲಿದೆ ಎಂದು ಹವಾಮಾನ ಇಲಾಖೆ ತಜ್ಞ ಆರ್.ಪ್ರಸಾದ್ ಮಾಹಿತಿ ನೀಡಿದ್ದಾರೆ.

ನಿನ್ನೆ (ಡಿಸೆಂಬರ್ 12)) ದಕ್ಷಿಣ ಒಳನಾಡು ಹಾಗೂ ಕರಾವಳಿ ಭಾಗದಲ್ಲಿ ಹೆಚ್ಚು ಮಳೆಯಾಗಿದ್ದು, ದಾವಣಗೆರೆಯಲ್ಲಿ 14 ಡಿಗ್ರಿ ಸೆಲ್ಸಿಯಸ್ ಕಡಿಮೆ ಉಷ್ಣಾಂಶ ದಾಖಲಾಗಿದೆ. ಸದ್ಯ ಬಂಗಾಳಕೊಲ್ಲಿಯಲ್ಲಿ ಮೇಲ್ಮೈ ಸುಳಿಗಾಳಿ ಇರುವ ಹಿನ್ನೆಲೆ ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಇನ್ನೂ 5 ದಿನ ಮಳೆ ಇರಲಿದೆ. ದಕ್ಷಿಣ ಒಳನಾಡಿನ ಹಲವೆಡೆ ನಾಳೆ(ಡಿ.14) ಬಹುತೇಕ ಕಡೆ ಗುಡುಗು ಮಿಂಚಿನ ಮಳೆಯಾಗಲಿದೆ. ಉತ್ತರ ಒಳನಾಡಿನಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಮಾಹಿತಿ ನೀಡಿದ್ದಾರೆ.

ಬೇಕಾಬಿಟ್ಟಿ ಯುಜಿಡಿ ಕಾಮಗಾರಿ: ವಾಹನ ಚಾಲಕರಿಗೆ ಅಪಾಯಕಾರಿ!



ಮೈಸೂರು, ಡಿ.13(ಎಸ್‌ಪಿಎನ್)– ತಿಂಗಳ ಹಿಂದೆ ಯುಜಿಡಿ ಪೈಪ್ ಅಳವಡಿಕೆ ಸಂಬಂಧ, (ಜೆಸಿಬಿ ಮೂಲಕ) ಟ್ರಚ್ ತೊಡಿದ್ದ ಜಾಗದಲ್ಲಿ ಪೈಪ್ ಅಳವಡಿಸಿ, ಗುತ್ತಿಗೆದಾರ ಅರ್ಧಂಬರ್ಧ ಮಣ್ಣು ತುಂಬಿ ಹೋದ ಪರಿಣಾಮ ಮಳೆ ಬಂದು, ಇದು ಕಾಮಾಕ್ಷಿ ರಸ್ತೆಯೋ ಇಲ್ಲವೇ ಕಂಬಳ ಕ್ರೀಡೆ ಆಯೋಜಿಸುವ ಜಾಗವೋ ಎಂಬಂತೆ ಬಾಸವಾಗುತ್ತಿದೆ.

ಕಳೆದೆರಡು ತಿಂಗಳಿಂದ ಕಾಮಾಕ್ಷಿ ಆಸ್ಪತ್ರೆ ಮುಂಭಾಗದ ರಸ್ತೆಯಲ್ಲಿ ವಾಹನ ಸವಾರರು, ಪ್ರತಿ ಬಾರಿ ಮಳೆ ಬಂದಾಗಲೂ ಈ ಸಮಸ್ಯೆ ಉಂಟಾಗುತ್ತಿದೆ. ವಿಶ್ವ ಮಾನವ ಜೋಡಿ ರಸ್ತೆ, ಕಾಮಾಕ್ಷಿ ಆಸ್ಪತ್ರೆ ಹಾಗೂ ಪಕ್ಕದ ರಸ್ತೆ ಸೇರಿದಂತೆ ಇತರೆ ರಸ್ತೆಗಳಲ್ಲಿ ಯುಜಿಡಿ ಪೈಪ್ ಅಳವಡಿಸುವ ಕಾಮಗಾರಿ ಆರಂಭವಾಗಿದೆ. ಆದರೆ, ಕಾಮಗಾರಿ ಮುಗಿದ ತಕ್ಷಣ ಗುತ್ತಿಗೆದಾರರ ಸರಿಯಾಗಿ ರಸ್ತೆ ಸಮತಟ್ಟು ಮಾಡದಿರುವುದರಿಂದ ಆ ರಸ್ತೆಯಲ್ಲಿ ವಾಹನ ಓಡಾಟದಲ್ಲಿ ವ್ಯತ್ಯಯವಾಗುತ್ತಿದೆ.

ಈ ರಸ್ತೆಯಲ್ಲಿ ನಿತ್ಯ ಬೋಗಾಧಿ 2ನೇ ಹಂತ, ಹಾಗೂ ಶಾರದಾ ದೇವಿ ನಗರಕ್ಕೆ ನಗರ ಬಸ್‌ನಿಲ್ದಾಣದಿಂದ ಬರುವ ಕೆಎಸ್‌ಆರ್‌ಟಿಸಿ ಬಸ್‌ಗಳು ಇದೇ ಮಾರ್ಗವಾಗಿ ಹಾದು ಹೋಗುತ್ತಿವೆ. ಅಲ್ಲದೆ, ಜಿಲ್ಲಾ ನ್ಯಾಯಾಲಯ, ಡಿಸಿ ಕಚೇರಿ, ಜಿಲ್ಲಾ ಪಂಚಾಯತ್, ಮಹಾರಾಜ, ಮಹಾರಾಣಿ ಮತ್ತು ಯುವರಾಜ, ಬನುಮಯ್ಯ ಕಾಲೇಜು ಸೇರಿದಂತೆ ನಗರದ ಬಹುತೇಕ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳು, ವಿವಿಧ ಸರ್ಕಾರಿ ಕಚೇರಿ ಸಿಬ್ಬಂದಿ ಈ ರಸ್ತೆಗೆ ಬಂದಾಗ ಎಲ್ಲಿ ಬಿಳುತ್ತೇವೋ ಎಂಬ ಭಯದಲ್ಲೇ ಓಡಾಡುವುದು ಅನಿವಾರ್ಯವಾಗಿದೆ ಎಂದು ಆಟೋ ಚಾಲಕ ಮಹೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಹಳ್ಳ ಬಿದ್ದು, ನೀರು ತುಂಬಿ ಕೆಸರು ಗದ್ದೆಂಯಾಗಿರುವ ರಸ್ತೆಂಯನ್ನು ಸಮತಟ್ಟು ಮಾಡಿ, ವಾಹನ ಸವಾರರ ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕೆಂಬ ಕನಿಷ್ಠ ಸೌಜನ್ಯವೂ ಪಾಲಿಕೆ ಅಧಿಕಾರಿಗಳಿಗಿಲ್ಲ. ಅಂತೆಯೇ ಈ ರಸ್ತೆಯಲ್ಲಿರುವ ಎರಡೂ ಆಸ್ಪತ್ರೆಗೆ ದಿನಕ್ಕೆ 5–8 ಆಂಬುಲೆನ್ಸ್‌ಗಳಲ್ಲಿ ಬೇರೆ ಬೇರೆ ಊರುಗಳಿಂದ ರೋಗಿಗಳು ತುರ್ತು ಚಿಕಿತ್ಸೆಗೆ ಆಗಮಿಸುತ್ತಾರೆ. ಆಂಬುಲೆನ್ಸ್‌ಗಳ ಓಡಾಟಕ್ಕೂ ಪ್ರಸ್ತುತ ತೊಂದರೆಂಯಾಗುತ್ತಿದೆ. ಕಾಮಾಕ್ಷಿ ಆಸ್ಪತ್ರೆ ಪ್ರವೇಶ ದ್ವಾರದ ಮುಂಬಾಗವೇ ಮಳೆ ಬಂದಾಗ ಆಳುದ್ದ ನೀರು ನಿಂತು ಕೆಸರು ಗದ್ದೆಯಾಗಿ ಮಾರ್ಪಟ್ಟಿದೆ ಎಂದು ಇಲ್ಲಿನ ಸಮಸ್ಯೆಂಯನ್ನು ಎಳೆಎಳೆಯಾಗಿ ಬಿಡಿಸಿದರು.

ಈಗಾಗಲೇ ಕಳೆದ 15 ದಿನಗಳಲ್ಲಿ 3–4 ಮಂದಿ ವಾಹನ ಸವಾರರು, ಬೈಕ್ ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದಾರೆ. ಪಾಲಿಕೆಯಿಂದ ಗುತ್ತಿಗೆದಾರನಿಗೆ ಅನುಮತಿ ನೀಡುವ ಮೊದಲೇ ನೀತಿ–ನಿಯಮಗಳನ್ನು ಪಾಲಿಸುವಂತೆ ಅಧಿಕಾರಿಗಳು ಸೂಚಿಸಬೇಕಿತ್ತು. ಆದರೆ, ಯಾರೊಬ್ಬ ಅಧಿಕಾರಿಯೂ ಈ ಕುರಿತು ಜವಾಬ್ದಾರಿ ವಹಿಸಿಕೊಳ್ಳುತ್ತಿಲ್ಲ. ಆ ಕಾರಣಕ್ಕೆ ಗುತ್ತಿಗೆದಾರ ಬೇಕಾಬಿಟ್ಟಿ ಕಾಮಗಾರಿ ಮುಗಿಸಿ, ಹೋಗಿರಬಹುದು ಎಂದು ಕಿಡಿಕಾರಿದರು.

ಇಂದಿನಿಂದ ಭಾರತ–ಬಾಂಗ್ಲಾದೇಶ ಮೊದಲ ಟೆಸ್ಟ್



ಚತ್ತೋಗ್ರಾಮ್, ಡಿ.13– ಭಾರತ ಹಾಗೂ ಬಾಂಗ್ಲಾದೇಶ ನಡುವಿನ 2 ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಪಂದ್ಯ ಇಲ್ಲಿನ ಝುಹೂರ್ ಅಹ್ಮದ್ ಚೌಧರಿ ಸ್ಟೇಡಿಯಂನಲ್ಲಿ ನಡೆಯಲಿದ್ದು, ಬುಧವಾರ(ಡಿ.14) ಭಾರತೀಯ ಕಾಲಮಾನ ಬೆಳಗ್ಗೆ 9 ಗಂಟೆಗೆ ಪಂದ್ಯ ಆರಂಭಗೊಳ್ಳಲಿದೆ.

ನಾಯಕ ರೋಹಿತ್ ಶರ್ಮಾ ಅನುಪಸ್ಥಿತಿಯಲ್ಲಿ ಉಪನಾಯಕ ಕೆ.ಎಲ್.ರಾಹುಲ್ ತಂಡವನ್ನು ಮುನ್ನಡೆಸಲಿದ್ದಾರೆ. ಅಭಿಮನ್ಯು ಈಶ್ವರನ್ ರೋಹಿತ್ ಸ್ಥಾನ ತುಂಬಿದ್ದರೂ, ಅವರಿಗೆ ಪಂದ್ಯದಲ್ಲಿ ಆಡುವ ಅವಕಾಶ ಸಿಗುವುದು ಅನುಮಾನ ಎನ್ನಲಾಗಿದೆ. ರಾಹುಲ್ ಜೊತೆಗೆ ಶುಭ್‌ಮನ್ ಗಿಲ್ ಇನ್ನಿಂಗ್ಸ್ ಆರಂಭಿಸಬಹುದು. ಇನ್ನೂ ಮೂರನೇ ಹಾಗೂ ನಾಲ್ಕನೇ ಕ್ರಮಾಂಕದಲ್ಲಿ ಎಂದಿನಂತೆ ಚೇತೇಶ್ವರ ಪೂಜಾರ ಹಾಗೂ ವಿರಾಟ್ ಕೊಹ್ಲಿ ಕಣಕ್ಕಿಳಿಯಲಿದ್ದು, 5ನೇ ಕ್ರಮಾಂಕದಲ್ಲಿ ರಿಷಭ್ ಪಂತ್ ವಿಕೆಟ್ ಕೀಪರ್–ಬ್ಯಾಟ್ಸ್‌ಮನ್ ಆಗಿ ಆಡಲಿದ್ದಾರೆ. ಮತ್ತೊಂದೆಡೆ ಅವರಿಗೆ ಶ್ರೇಯಸ್ ಅಯ್ಯರ್ ಪ್ರಬಲ ಪೈಪೋಟಿ ನೀಡುತ್ತಿದ್ದಾರೆ. ಸ್ಪಿನ್ ಆಲ್‌ರೌಂಡರ್ ಆಗಿ ಅಕ್ಷರ್ ಪಟೇಲ್ ಅಥವಾ ರವಿಚಂದ್ರನ್ ಅಶ್ವಿನ್ ಅವರಲ್ಲಿ ಒಬ್ಬರು ಆಡಬಹುದು. ಪೂರ್ಣ ಪ್ರಮಾಣದ ಸ್ಪಿನ್ನರ್ ಆಗಿ ಕುಲ್‌ದೀಪ್ ಯಾದವ್ ಆಡುವ ಸಾಧ್ಯತೆ ಇದೆ. ಇನ್ನು ವೇಗದ ಬೌಲಿಂಗ್ ವಿಭಾಗದಲ್ಲಿ ಶಾರ್ದುಲ್ ಠಾಕೂರ್, ಮೊಹಮ್ಮದ್ ಸಿರಾಜ್ ಹಾಗೂ ಉಮೇಶ್ ಯಾದವ್‌ಗೆ ಅವಕಾಶ ಸಿಗಲಿದೆ. ಮತ್ತೊಂದೆಡೆ ಏಕದಿನ ಸರಣಿ ಗೆದ್ದು ಆತ್ಮವಿಶ್ವಾಸದ ಅಲೆಯಲ್ಲಿ ತೇಲಾಡುತ್ತಿರುವ ಬಾಂಗ್ಲಾದೇಶ ಟೆಸ್ಟ್ ಪಂದ್ಯಕ್ಕಾಗಿ ಭಾರೀ ರಣತಂತ್ರ ರೂಪಿಸಿದೆ. ಬಾಂಗ್ಲಾ ಪರ ಲಿಂಟನ್ ದಾಸ್, ಶಕೀಬ್ ಅಲ್ ಹಸನ್, ಅನಾಮುಲ್ ಹಕ್, ಮುಷ್ಫಿಕರ್ ರಹೀಮ್ ಸೇರಿದಂತೆ ಇನ್ನಿತರರು ಭರ್ಜರಿ ಫಾರ್ಮ್‌ನಲ್ಲಿದ್ದಾರೆ.

ಸಂಭಾವ್ಯ ಆಟಗಾರರು

ಭಾರತ: ಕೆ.ಎಲ್ ರಾಹುಲ್ (ನಾಯಕ), ಶುಭಮನ್ ಗಿಲ್, ಚೇತೇಶ್ವರ್ ಪೂಜಾರ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ರಿಷಭ್ ಪಂತ್(ವಿ.ಕೀ), ರವಿಚಂದ್ರನ್ ಅಶ್ವಿನ್, ಕುಲ್ದೀಪ್ ಯಾದವ್, ಶಾರ್ದುಲ್ ಠಾಕೂರ್, ಮೊಹಮ್ಮದ್ ಸಿರಾಜ್ ಹಾಗೂ ಉಮೇಶ್ ಯಾದವ್

ಬಾಂಗ್ಲಾದೇಶ: ಲಿಟನ್ ದಾಸ್, ಅನಾಮುಲ್ ಹಕ್, ಜ್ಮುಲ್ ಹುಸೇನ್ ಶಾಂತೊ, ಶಕಿಬ್ ಅಲ್ ಹಸನ್, ಮುಷ್ಫಿಕರ್ ರಹೀಮ್(ವಿ.ಕೀ), ಮಹ್ಮುದುಲ್ಲಾ, ಅಫಿಫ್ ಹುಸೇನ್, ಮೆಹಡಿ ಹಸನ್ ಮಿರಾಜ್, ಮುಸ್ತಾಫಿಝುರ್ ರೆಹಮಾನ್, ಹಸನ್ ಮಹ್ಮೂದ್, ಇಬಾದತ್ ಹುಸೇನ್.

IN THE COURT OF THE HON'BLE V ADDITIONAL SENIOR CIVIL JUDGE AND CJM AT MYSURU

P& S.C.NO. 34 of 2022

Petitioners .1. Abdul Gafar S/o Late Abdul Sattar Khan Aged about 43 Years. 2. Hajira Salma W/o Abdul Gafar Aged About 36 years Both Are Residing at No.21A Behind Old Post Office, Billikere Village Hunsur Taluk vs Respondents: Nil

Public Notice

Whereas the Petitioners who are the Surviving legal Heirs if deceased ROOHI AFZA Who died on 23.09.2021 at Mysuru Leaving Behind them her sole surviving legal heirs and representatives to her estate-have Filed a petition under S. 372 of indian Succession Act for grant of succession certificate In Favour of them relating to detailed schedule mentioned here under . Take notice that any person/s having any interest or objection in the above matter may appear before the Hon'ble V Additional Senior Civil Judge and CJM at Mysuru 06.1.2023 at 11 O clock in the forenoon either Personally or Through a duly Instructed attorney Failing which the matter will be dealt in accordance with Law. Given Under My hande seal of this 7.12.2022

Schedule

1.GPF Khatha Bearing PW 19951 Having the amount of Rupees Seven Lakhs Thirty Thousand seven Hundred and fifty one (Rs. 7,30,751/-)as on Sepetember 2021. 2). Death cum Retirement Gratuity Rupees Thirteen Lakhs Thirteen Thousand Seven Hundred only (Rs. 13,13,700/-) 3). Group Insurance Scheme and savings rupees Two Lakhs Fourty Thousand (Rs. 2.40.000/-) and eighty Six Thousand three hundred and seventy Four (Rs. 86,374/-) in total three Lakhs twenty six thousand three hundred seventy Four Only (Rs. 3,26,374/-). 4). KGID bearing amount of rupees four Lakhs (Rs, 4,00,000/-)and the overall total Rupees twenty seven Lakhs Seventy Thousend Eight Hundred and Twenty Five only Rs. 27,70,825/- held in the name of Smt. ROOHI AFZA.

By order of the court
Sd/- Chief Ministerial Officer Court of Senior Civil Judge and CJM, Mysuru

Adocate for petitioners, Sd/- Dr.M.N.Ravishankar, KAR.No 4976/99 # 513/1, Bindiya Complex, Thyagaraja Road, Near Agrahara circle, Mysuru-570004, Mobile: 9448750181

IN THE REAL ESTATE REGULATORY AUTHORITY, BENGALURU

Complaint No.8804/2022

BETWEEN:
Sangeeta R Rao
Represented by her Power of Attorney Holder
Pavan Kumar R ... COMPLAINANT
AND
M/s Tapovan Projects ... RESPONDENT

SUMMONS TO THE RESPONDENT UNDER ORDER V RULE 20 OF THE CODE OF CIVIL PROCEDURE, 1908 BY WAY OF PAPER PUBLICATION

M/s Tapovan Projects
A Registered Partnership Firm having its Office at No.28/A situated at Industrial Extension (Industrial Suburb), 3rd Stage Fort Mohalla, Mysore-570023.
Represented by its Partners
Mr. K. Ajit Narayana
Mr. K. Sriram
Also at:
No.3070, Sujaya Chambers, Ground Floor, Dattagalli, Mysore-570023.

Whereas, the Complainant has filed the above complaint against you interalia for the relief of refund of a sum INR 71,58,912/- being the amounts paid by the Complainant along with interest at the rate applicable under Rule 16 and 17 of the Karnataka Real Estate (Regulation and Development) Rules, 2016, form October 2019 till date of Realization.
The Hon'ble Authority by its order dated 06.12.2022 has ordered issuance of summons to you by substituted service. Therefore you are hereby directed to appear and show cause as to why the complaint should not be decreed, on 04.01.2023 at 11.30 A.M., in person or by a Pleader/ Advocate duly instructed in the matter.
Take notice that in case of default of your non-appearance, the complaint will be heard and disposed of ex-parte i.e., In your absence.

SCHEDULE PROPERTY

Apartment bearing No.413. Two BHK on the fourth floor, measuring 1365.40 Square feet of super built area containing two bedrooms inclusive of share in common area of the apartment along with 546 square feet of undivided share in the project with one covered car parking and bounded on:
East by : Walkway and Compound
West by : Apartment No.414
North by : Apartment No.412
South by : Walkway and Compound
Given under my hand and the seal of this Authority, on this 7th the day of December 2022.

By Order of the Authority
Registrar
Karnataka Real Estate Regulatory Authority, Bengaluru.
Advocate for Complainant:
M/s. King & Partridge
Advocates
No.48, Lavelle Road, Bangalore-560001